ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 21 ಶನಿವಾರ 2024

ಸಂಪುಟ: 45 | ಸಂಚಿಕೆ: 156 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಡಾ.ಹಂಪನಾ ಈ ಬಾರಿ ದಸರಾ ಉದ್ಘಾಟಕರು

ಮೈಸೂರಲ್ಲೇ ಸಿಎಂ ಸಿದ್ದರಾಮಯ್ಯ ಘೋಷಣೆ

ನಾಡಿನ 88 ವರ್ಷದ ಹಿರಿಯ ಸಾಹಿತಿಯಿಂದ ಅ.3ರಂದು ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನೆ

ಮೈಸೂರು,ಸೆ.20(ಎಂಟಿವೈ)– ಈ ಬಾರಿ ನಾಡಹಬ್ಬ ದಸರಾ ಮಹೋತ್ಸವವನ್ನು ನಾಡಿನ ಹಿರಿಯ ಸಾಹಿತಿ ಹಂಪ ನಾಗರಾಜಯ್ಯ (ಹಂಪನಾ) ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದ ರಾಮಯ್ಯ ಇಂದಿಲ್ಲಿ ಅವರ ಹೆಸರು ಪ್ರಕಟಿಸುವುದರೊಂದಿಗೆ ಶೀಘ್ರವೇ ಜಿಲ್ಲಾಡಳಿತ ಅವರಿಗೆ ಆಹ್ವಾನ ನೀಡುತ್ತದೆ ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಸರಾ ಮಹೋತ್ಸವದ ಉದ್ಘಾಟಕರನ್ನು ಆಯ್ಕೆ ಮಾಡುವ ಅಧಿಕಾರವನ್ನು ದಸರಾ ಉನ್ನತಮಟ್ಟದ ಸಭೆಯಲ್ಲಿ ನನಗೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ನಾಡಿನ ಹೆಸರಾಂತ ಸಾಹಿತಿ ಹಂಪ ನಾಗರಾಜಯ್ಯ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.




ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ಉದ್ಘಾಟಕರಾಗಿ ಆಯ್ಕೆಯಾಗಿರುವ ಸಾಹಿತಿ ಹಂಪಾ ನಾಗರಾಜಯ್ಯ ಅವರನ್ನು ಅಭಿನಂದಿಸಿದರು.

ಹಂಪನಾಗೆ ಸಿಎಂ ಅಭಿನಂದನೆ: ದಸರಾ ಉದ್ಘಾಟಕರಾಗಿ ಆಯ್ಕೆ ಮಾಡಲಾಗಿರುವ ಹಂಪಾ ನಾಗರಾಜಯ್ಯ ಅವರನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ಕಾವೇರಿ ಸಭಾಂಗಣದಲ್ಲಿ ನಡೆದ 'ಕರ್ನಾಟಕ ಸಾಂಸ್ಕೃತಿಕ ಮುನ್ನೋಟ: ಚಿಂತನಾ ಸಮಾವೇಶ' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವೇದಿಕೆಗೆ ಆಹ್ವಾನಿಸಿ, ಅಭಿನಂದಿಸಿದರು. ಅಲ್ಲದೆ, ತಮ್ಮ ಭಾಷಣದಲ್ಲೂ 'ಹಂಪ ನಾಗರಾಜಯ್ಯನವರು 2024ನೇ ದಸರಾ ಉತ್ಸವವನ್ನು ಉದ್ಘಾಟಿಸಲಿದ್ದಾರೆ

ಇದೊಂದು ಅವಿಸ್ಮರಣೀಯ ಸಂದರ್ಭ

ಹಿರಿಯ ಸಾಹಿತಿ ಹಂಪನಾ ಪ್ರತಿಕ್ರಿಯೆ



ಮೈಸೂರು: ರಾಜ್ಯ ಸರ್ಕಾರ ನಾಡಹಬ್ಬ ದಸರಾ ಉತ್ಸವ ಉದ್ಘಾಟಕರಾಗಿ ನನ್ನನ್ನು ಆಯ್ಕೆ ಮಾಡಿರುವುದು ಅತೀವ ಸಂತಸ ತಂದಿದೆ. ನನ್ನ ಪಾಲಿಗೆ ಇದೊಂದು ಅವಿಸ್ಮರಣೀಯ ಸಂದರ್ಭ ಎಂದು ನಾಡಿನ ಹಿರಿಯ ಸಾಹಿತಿ ಹಂಪ ನಾಗರಾಜಯ್ಯ ಪ್ರತಿಕ್ರಿಯಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೇವಲ ನಾನೊಬ್ಬನೇ ದಸರಾವನ್ನು ಉದ್ಘಾಟಿಸದೇ ಕನ್ನಡಿಗರ ಪರವಾಗಿ ನಾಡಹಬ್ಬಕ್ಕೆ ಚಾಲನೆ ನೀಡುತ್ತೇನೆ. ನಾನು 50 ವರ್ಷಗಳಿಂದ ದಸರಾ ಉತ್ಸವವನ್ನು ನೋಡಿರಬಹುದು. ಆ ಸಡಗರ, ಸಂಭ್ರಮ ನೋಡಿ ಪುಳಕಗೊಳ್ಳುತ್ತಿದ್ದೆ. ಆದರೆ, ಇದೀಗ ನನಗೇ ದಸರಾ ಉದ್ಘಾಟನೆಗೆ ಅವಕಾಶ ದೊರೆತ್ತಿರುವುದು ನನ್ನ ಬದುಕಿನಲ್ಲಿ ದೊರೆತ ಅವಿಸ್ಮರಣೀಯ ಕ್ಷಣ. ಇಂತಹ ಒಂದು ಅವಕಾಶ ದೊರೆಯುವ

■ 6ನೇ ಪುಟಕ್ಕೆ

ಮೈಸೂರಲ್ಲಿ 'ಹೆಸರಾಯಿತು ಕರ್ನಾಟಕ–ಉಸಿರಾಗಲಿ ಕನ್ನಡ' ನಾಡು–ನುಡಿಯ ಹಿರಿಮೆ ಸಾರುವ ಚಿಂತನಾ ಸಮಾವೇಶ

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಕನ್ನಡದ ಹಿರಿಮೆ ಸಾರುವುದು ಪ್ರತೀ ಕನ್ನಡಿಗನ ಜವಾಬ್ದಾರಿ



ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಗೊಂಡು 50 ವರ್ಷ ಸಂದ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ 'ಹೆಸರಾಯಿತು ಕರ್ನಾಟಕ–ಉಸಿರಾಗಲಿ ಕನ್ನಡ' ಶೀರ್ಷಿಕೆಯಡಿ ಆಯೋಜಿಸಿದ್ದ 'ಕರ್ನಾಟಕ ಸಾಂಸ್ಕೃತಿಕ ಮುನ್ನೋಟ: ಚಿಂತನಾ ಸಮಾವೇಶ'ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಮೈಸೂರು,ಸೆ.20(ಎಂಟಿವೈ)–ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಸಾರ್ವಭೌಮವಾಗಿದ್ದು, ಎಲ್ಲರೂ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಲು ಪಣ ತೊಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಕರ್ನಾಟಕ ನಾಮಕರಣಗೊಂಡು 50 ವರ್ಷ ಸಂದ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ 'ಹೆಸರಾಯಿತು ಕರ್ನಾಟಕ–ಉಸಿರಾಗಲೀ ಕನ್ನಡ' ಶೀರ್ಷಿಕೆಯಡಿ ಆಯೋಜಿಸಿದ್ದ 'ಕರ್ನಾಟಕ ಸಾಂಸ್ಕೃತಿಕ ಮುನ್ನೋಟ: ಚಿಂತನಾ ಸಮಾವೇಶ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡ

■ 6ನೇ ಪುಟಕ್ಕೆ

ದಸರಾ ಗಜಪಡೆಯ ಎರಡು ಆನೆಗಳ ಮಾರಾಮಾರಿ!


ಅರಮನೆ ಗೇಟು ಭೇದಿಸಿ ರಸ್ತೆಗಿಳಿದ ಕಂಜನ್, ಧನಂಜಯ; ದಿಕ್ಕಾಪಾಲಾಗಿ ಓಡಿದ ಜನ...

● ಶುಕ್ರವಾರ ರಾತ್ರಿ ಭಾರೀ ಆತಂಕಕಾರಿ ಘಟನೆ ● ಧನಂಜಯನ ನಿಯಂತ್ರಿಸಿದ ಮಾವುತ; ರಸ್ತೆಗಿಳಿದು ಸಮಾಧಾನಗೊಂಡ ಕಂಜನ್





ಮೈಸೂರು, ಸೆ.20(ಎಸ್‌ಬಿಡಿ)–ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆಯ ಎರಡು ಆನೆಗಳ ನಡುವೆ ಇಂದು ರಾತ್ರಿ ಮಾರಾಮಾರಿಯೇ ನಡೆದು, ಅವು ಏಕಾಏಕಿ ರಸ್ತೆಗಿಳಿದಾಗ ಅರಮನೆಯ ಜಯಮಾರ್ತಾಂಡ ದ್ವಾರದ ಸುತ್ತಮುತ್ತ ಕೆಲಕಾಲ ಭಯಭೀತ ವಾತಾವರಣ ಸೃಷ್ಟಿಯಾಯಿತು.



ದಿಢೀರ್ ರಸ್ತೆಗಿಳಿದ ಆನೆಗಳ ರೌದ್ರಾವತಾರ ಕಂಡು ಕಂಗಾಲಾದ ಸಾರ್ವಜನಿಕರು ದಿಕ್ಕಾಪಾಲಾಗಿ ಓಡಿದರು. ಅದೃಷ್ಟವಶಾತ್ ಯಾವುದೇ ಅವಘಡ ಸಂಭವಿಸಿಲ್ಲ. ಶುಕ್ರವಾರ ಸಂಜೆ ಮಳೆ ಕಾರಣದಿಂದ ಗಜಪಡೆ ತಾಲೀಮು ಇರಲಿಲ್ಲ. ರಾತ್ರಿ

■ 6ನೇ ಪುಟಕ್ಕೆ

ಲೋಕಾಯುಕ್ತ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ

ರಹಸ್ಯ ಮಾಹಿತಿ ಸೋರಿಕೆ ಬಗ್ಗೆ ವರದಿ ಕೊಡಿ

ಸರ್ಕಾರಕ್ಕೆ ರಾಜ್ಯಪಾಲರ ಪತ್ರ



ಬೆಂಗಳೂರು, ಸೆ.20– ಲೋಕಾಯುಕ್ತದವರು ರಾಜ್ಯಪಾಲರಿಗೆ ಬರೆದ ರಹಸ್ಯ ಪತ್ರ ಸೋರಿಕೆಯಾದ ಬಗ್ಗೆ ಮಾಹಿತಿ ಕೊಡಿ ಎಂದು ಸರ್ಕಾರಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪತ್ರ ಬರೆದಿದ್ದಾರೆ.

ಸರ್ಕಾರದಿಂದ ಸ್ಪಷ್ಟನೆ ಕೇಳಿ ರಾಜ್ಯಪಾಲರು ಆ.28ರಂದು ಪತ್ರ ಬರೆದಿದ್ದು, ವಿಪಕ್ಷ ನಾಯಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿ ಲೋಕಾಯುಕ್ತದಿಂದ ರಾಜ್ಯಪಾಲರಿಗೆ ಪತ್ರ ಬರೆಯಲಾಗಿದೆ. ಈ ಪತ್ರದ ಬಗ್ಗೆ ಕ್ಯಾಬಿನೆಟ್ ಸಭೆಯಲ್ಲಿ ನಿರ್ಣಯ ಕೈಗೊಂಡು ರಾಜ್ಯಪಾಲರಿಗೆ ಕ್ಯಾಬಿನೆಟ್ ನಿರ್ಣಯ ಕಳುಹಿಸಿಕೊಡಲಾಗಿದೆ. ಆದರೆ ಲೋಕಾಯುಕ್ತದವರು ರಾಜ್ಯಪಾಲರಿಗೆ ಬರೆದ ರಹಸ್ಯ ಪತ್ರದ ಬಗ್ಗೆ ಸರ್ಕಾರಕ್ಕೆ ಹೇಗೆ ಮಾಹಿತಿ ಬಂತು? ಅದರ ಬಗ್ಗೆ ಸ್ಪಷ್ಟನೆ ನೀಡಿ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪತ್ರ ಬರೆದಿದ್ದಾರೆ.

ಕ್ಯಾಬಿನೆಟ್ ನಿರ್ಣಯ ಹಾಗೂ ಪ್ರಾಸಿಕ್ಯೂಷನ್ ಕೇಳಿ ಲೋಕಾಯುಕ್ತ ಬರೆದ ಪತ್ರದ ಬಗೆಗಿನ ನಿರ್ಣಯಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಲೋಕಾಯುಕ್ತ, ಎಸ್‌ಐಟಿಗೂ ಪತ್ರ ಬರೆದಿರುವ ಗವರ್ನರ್ ರಹಸ್ಯ ಮಾಹಿತಿ ಸೋರಿಕೆ ಬಗ್ಗೆ ಮಾಹಿತಿ ಕೇಳಿದ್ದಾರೆ. ತನಿಖೆ ನಡೆಸಿ ವರದಿ ನೀಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ರಾಜ್ಯಪಾಲರ ಪತ್ರದಲ್ಲಿ ಏನಿದೆ?: ಆ.26ರಂದು ಸಂಜೆ 5ಕ್ಕೆ ರಾಜಭವನಕ್ಕೆ ಸರ್ಕಾರದಿಂದ ಕ್ಯಾಬಿನೆಟ್ ನಿರ್ಣಯದ ದಾಖಲೆಗಳ ಕುರಿತು ಮುಚ್ಚಿದ ಲಕೋಟೆ ಬಂದಿದೆ. ಆದರೆ ಆ ಲಕೋಟೆಯೊಳಗೆ 16ನೇ ಸಚಿವ ಸಂಪುಟ ಸಭೆಯ ಅಜೆಂಡಾ ಹಾಗೂ 17ನೇ ಸಚಿವ ಸಂಪುಟದ ಹೆಚ್ಚುವರಿ ಅಜೆಂಡಾ ಕಾಪಿ ಮಾತ್ರ ಇತ್ತು. ಸಭೆಯಲ್ಲಿ ಕೈಗೊಂಡಿರುವ ನಿರ್ಣಯದ ಬಗ್ಗೆ ದಾಖಲೆಗಳು ಇರಲಿಲ್ಲ. ಕ್ಯಾಬಿನೆಟ್ ವಿಭಾಗಕ್ಕೆ ದೂರವಾಣಿ ಮೂಲಕ ಕರೆ ಮಾಡಿ ಮಾಹಿತಿ ತಿಳಿಸಲಾಗಿದೆ. ಮಾಹಿತಿ ನೀಡಿದ ಬಳಿಕ 27ರಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಕ್ಯಾಬಿನೆಟ್ ಕೈಗೊಂಡ ನಿರ್ಣಯಗಳ ದಾಖಲೆ ರಾಜಭವನಕ್ಕೆ ಸಲ್ಲಿಸಲಾಗಿದೆ.

ಆ ಮಾಹಿತಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಕ್ಯಾಬಿನೆಟ್ ಮೀಟಿಂಗ್ ಹೆಚ್ಚುವರಿ ಅಜೆಂಡಾದ ನಿರ್ಣಯಗಳು ನಮಗೆ ಲಭ್ಯವಾಗಿಲ್ಲ. ಆದರೆ 23ರಂದು ಮಾಧ್ಯಮಗಳಲ್ಲಿ ಹೆಚ್.ಡಿ.ಕುಮಾರಸ್ವಾಮಿ, ಜನಾರ್ದನ ರೆಡ್ಡಿ, ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಕ್ಯಾಬಿನೆಟ್ ರಾಜ್ಯಪಾಲರಿಗೆ ಸಲಹೆ ನೀಡಿದೆ ಎಂದು ವರದಿ ಆಗಿದೆ. ಗೌಪ್ಯವಾದ ಮಾಹಿತಿ ಸಚಿವ ಸಂಪುಟ ಸಭೆಯಲ್ಲಿ ಹೇಗೆ ಚರ್ಚಿಸಲಾಯಿತು?

ಕ್ಯಾಬಿನೆಟ್ ನೋಟ್‌ನಲ್ಲಿ ಯಾವ ದಿನಾಂಕದಂದು ಲೋಕಾಯುಕ್ತ ಸಂಸ್ಥೆ ರಾಜ್ಯಪಾಲರಿಗೆ ಪ್ರಾಸಿಕ್ಯೂಷನ್ ಅನುಮತಿ ಕೇಳಿದೆ ಎಂಬುದನ್ನು ಉಲ್ಲೇಖಿಸಲಾಗಿದೆ. ನನಗೆ ಈಗ ಕುತೂಹಲ ಹೆಚ್ಚಾಗಿದೆ. ಹೇಗೆ ಲೋಕಾಯುಕ್ತ ವಿಶೇಷ ತನಿಖಾ ತಂಡ ರಾಜ್ಯಪಾಲರಿಗೆ ಬರೆದ ಪತ್ರ ಬಹಿರಂಗವಾಯಿತು? ಲೋಕಾಯುಕ್ತ ಎಂಬುದು ಸ್ವಾಯತ್ತ ತನಿಖಾ ಸಂಸ್ಥೆ, ಲೋಕಾಯುಕ್ತ, ಎಸ್‌ಐಟಿ ಗೌಪ್ಯವಾಗಿ ಅಭಿಯೋಜನಾ ಮಂಜೂರಾತಿಯನ್ನು ಕೇಳಿದ ಪತ್ರ ಸರ್ಕಾರ ಹಾಗೂ ಕ್ಯಾಬಿನೆಟ್‌ಗೆ ತಲುಪಿದ್ದು ಹೇಗೆ? ಹೀಗಾಗಿ ಈ ಪತ್ರ ತಲುಪಿದ ಕೂಡಲೇ ಪ್ರಾಮಾಣಿಕವಾಗಿ ರಾಜಭವನಕ್ಕೆ ವರದಿ ನೀಡಿ ಎಂದು ರಾಜ್ಯಪಾಲರು ಸೂಚಿಸಿದ್ದಾರೆ.

ದಾಖಲೆಗಳಲ್ಲಿರುವ 43 ಸಾವಿರ ಹೆಕ್ಟೇರ್ ಅರಣ್ಯ ಭೂಮಿ ನಾಪತ್ತೆ

ಬೆಂಗಳೂರು, ಸೆ.20– ಅರಣ್ಯ ದಾಖಲೆಗಳಲ್ಲಿ ನಮೂದಾಗಿರುವ 43 ಸಾವಿರ ಹೆಕ್ಟೇರ್‌ಗೂ ಹೆಚ್ಚು ಸರ್ಕಾರಿ ಭೂಮಿ ನಾಪತ್ತೆಯಾಗಿದೆ. ಅಂದರೆ, ದಾಖಲೆಗಳಲ್ಲಿ ಉಲ್ಲೇಖವಾಗಿರುವ ನಿಗದಿತ ಸರ್ವೆ ನಂಬರ್‌ಗಳಲ್ಲಿ ಈ ಭೂಪ್ರದೇಶವೇ ಇಲ್ಲ.

ಪರಿಭಾವಿತ ಅರಣ್ಯದ (ಡೀಮ್ಡ್) ವ್ಯಾಪ್ತಿಯ ಗೊಂದಲ ಕುರಿತು ಮರುಪರಿಶೀಲಿಸಲು ಕಂದಾಯ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಜಿಲ್ಲಾ ಸಮಿತಿಗಳನ್ನು ರಚಿಸಲಾಗಿತ್ತು. ಸುಮಾರು 43 ಸಾವಿರ ಹೆಕ್ಟೇರ್ ಅರಣ್ಯ ಭೂಮಿಯು ದಾಖಲೆಗಳಲ್ಲಿ ಮಾತ್ರ ಇದೆ. ವಾಸ್ತವದಲ್ಲಿ ಈ ಭೂಮಿಯೇ ಅಲ್ಲಿ ಇಲ್ಲ ಎಂದು ಈ ಸಮಿತಿಗಳು ವರದಿ ಕೊಟ್ಟಿವೆ.

ಪರಿಭಾವಿತ ಅರಣ್ಯ ಪ್ರದೇಶಗಳನ್ನು ಗುರುತಿಸಲು 2018ರಲ್ಲಿ ನೇಮಿಸಲಾಗಿದ್ದ ತಜ್ಞರ ಸಮಿತಿ ರಾಜ್ಯದಲ್ಲಿ 9,94,881 ಹೆಕ್ಟೇರ್ ವಿಸ್ತೀರ್ಣದ ಪರಿಭಾವಿತ ಅರಣ್ಯ ಪ್ರದೇಶಗಳಿವೆ ಎಂದು ವರದಿ ನೀಡಿತ್ತು. ಅದನ್ನೇ ರಾಜ್ಯ ಸರ್ಕಾರ ಯಥಾವತ್ ಸುಪ್ರೀಂಕೋರ್ಟ್‌ಗೆ ಸಲ್ಲಿಸಿತ್ತು. ವರದಿಯಲ್ಲಿನ ಲೋಪಗಳ ಕುರಿತು ದೂರುಗಳು ಬಂದಿದ್ದರಿಂದಾಗಿ ಪರಿಶೀಲನೆಗಾಗಿ ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜಂಟಿ ಸಮಿತಿ ರಚಿಸಲಾಗಿತ್ತು.

ಪುನರ್ ಪರಿಶೀಲನೆಗೆ ರಚಿಸಲಾಗಿದ್ದ ಜಿಲ್ಲಾ ಸಮಿತಿಗಳು ಪರಿಭಾವಿತ ಅರಣ್ಯದ ವ್ಯಾಪ್ತಿಯನ್ನು 3.30 ಲಕ್ಷ ಹೆಕ್ಟೇರ್ ಎಂದು ಗುರುತಿಸಿವೆ. 6.64 ಲಕ್ಷ ಹೆಕ್ಟೇರ್ ಪ್ರದೇಶವನ್ನು ವ್ಯಾಪ್ತಿಯಿಂದ ಕೈಬಿಟ್ಟಿವೆ. ಆದರೂ, ಗೊಂದಲಗಳು ಮಾತ್ರ ಮುಗಿದಿಲ್ಲ.

ಯಾವುದು ಪರಿಭಾವಿತ ಅರಣ್ಯ ಎನ್ನುವುದಕ್ಕೆ ಸರ್ಕಾರದ ಬಳಿ ನಿರ್ದಿಷ್ಟ ವ್ಯಾಖ್ಯಾನವೇ ಇಲ್ಲ. ಪೂರ್ವನಿರ್ಧರಿತ ಮಾನದಂಡಗಳನ್ನೂ ಅಳವಡಿಸಿಲ್ಲ ಎನ್ನುವುದನ್ನು ಅರಣ್ಯ ಇಲಾಖೆಯೇ ಒಪ್ಪಿಕೊಂಡಿದೆ. ಪ್ರತಿ ಹೆಕ್ಟೇರ್‌ಗೆ ಕನಿಷ್ಠ 50 ಮರಗಳಿರುವ ಪ್ರದೇಶವನ್ನು ಪರಿಭಾವಿತ ಎಂದು ನಮೂದಿಸಿದ ಪರಿಣಾಮವಾಗಿ ರೈತರ ಹೊಲ, ತೋಟ, ಪಟ್ಟ ಭೂಮಿ, ಮನೆಗಳು, ಆಸ್ಪತ್ರೆ ಪ್ರದೇಶಗಳನ್ನೂ ವ್ಯಾಪ್ತಿಗೆ ಸೇರಿಸಲಾಗಿತ್ತು ಅಷ್ಟೇ ಅಲ್ಲದೆ, ಶಾಸನಬದ್ಧ ಅರಣ್ಯ ಪ್ರದೇಶ, ಮೀಸಲು ಅರಣ್ಯ ಪ್ರದೇಶಗಳನ್ನೂ ತಪ್ಪಾಗಿ ವರ್ಗೀಕರಿಸಿ, 'ಪರಿಭಾವಿತ'ದ ಪರಿಧಿಗೆ ತಂದಿರುವುದನ್ನು ಜಿಲ್ಲಾ ಸಮಿತಿಗಳು ಪತ್ತೆ ಮಾಡಿವೆ.

ಅರಣ್ಯದ ಗುಣಲಕ್ಷಣಗಳನ್ನು ಹೊಂದಿಲ್ಲದ ಭೂಮಿ, ಖಾಸಗಿ ಪಟ್ಟಾ, ನೆಡು ತೋಪುಗಳು, ಬಗರ್‌ಹುಕುಂ ಸಾಗುವಳಿ ಮಂಜೂರಾದ ಜಮೀನು, ಮೀಸಲು ಅರಣ್ಯ, ಎರಡು ಹೆಕ್ಟೇರ್‌ಗಿಂತ ಕಡಿಮೆ ಇರುವ ಪ್ರದೇಶಗಳನ್ನು ಹೊರಗಿಟ್ಟು ಪರಿಭಾವಿತ ಅರಣ್ಯದ ವ್ಯಾಪ್ತಿಯನ್ನು ಪುನರ್ ಪರಿಶೀಲಿಸಿ, ಈ ಸಮಿತಿಗಳು ವರದಿ ಸಿದ್ಧಪಡಿಸಿವೆ.

ಪರಿಭಾವಿತ ಅರಣ್ಯ ಪ್ರದೇಶ ಮರುಪರಿಶೀಲಿಸಲು ರಚಿಸಲಾಗಿದ್ದ ಜಿಲ್ಲಾ ಸಮಿತಿಗಳು ನೀಡಿದ ವರದಿಗೂ ಆಕ್ಷೇಪಣೆಗಳು ವ್ಯಕ್ತವಾಗಿದ್ದು, ಮತ್ತೊಂದು ಸಮಿತಿ ರಚಿಸಲು ಅರಣ್ಯ ಇಲಾಖೆ ಮುಂದಾಗಿದೆ. ಅರಣ್ಯ ಹಕ್ಕು ಕಾಯ್ದೆ, ಬಗರ್‌ಹುಕುಂ ಅಡಿಯಲ್ಲಿ ಸಾಗುವಳಿ ಮಾಡಿದ ಭೂಮಿಯನ್ನೂ ಪರಿಭಾವಿತ ಅರಣ್ಯದ ವ್ಯಾಪ್ತಿಗೆ ಸೇರಿಸಲಾಗಿದೆ. ಮಂಜೂರಾತಿ ಕೋರಿ ಸಲ್ಲಿಕೆಯಾದ ಅರ್ಜಿಗಳು ಇತ್ಯರ್ಥವಾಗದೆ ಅಂತಹ ಭೂಮಿ ಕುರಿತು ನಿರ್ಧಾರ ತೆಗೆದುಕೊಳ್ಳಬಾರದು ಎಂದು ಶಾಸಕರು, ಸಚಿವರು ಸೇರಿದಂತೆ ಹಲವರು ಒತ್ತಾಯಿಸಿದ್ದಾರೆ.

ರಾಜ್ಯಮಟ್ಟದ ಬ್ರಾಹ್ಮಣ ಮಹಾ ಸಮ್ಮೇಳನಕ್ಕೆ ನಟರಾಜ್ ಜೋಯಿಸ್ ಉಪಾಧ್ಯಕ್ಷರಾಗಿ ಆಯ್ಕೆ



ಮೈಸೂರು, ಸೆ.20– ಬೆಂಗಳೂರಿನಲ್ಲಿ 2025ರ ಜನವರಿ 18 ಮತ್ತು 19ರಂದು ನಡೆಯುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸುವರ್ಣ ಸಂಭ್ರಮ ಹಾಗೂ 11ನೇ ರಾಜ್ಯ ಮಟ್ಟದ ಬ್ರಾಹ್ಮಣ ಮಹಾ ಸಮ್ಮೇಳನಕ್ಕೆ ಮೈಸೂರಿನ ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರ, ಸುರಕ್ಷ ಟ್ರಸ್ಟ್, ಜಿಲ್ಲಾ ಬ್ರಾಹ್ಮಣ ಸಭಾದ ನಟ ರಾಜ ಜೋಯಿಸ್ ಅವರನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ ಎಂದು ಮಹಾ ಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿ ದ್ದಾರೆ. ತಮ್ಮನ್ನು ಬೃಹತ್ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವ ಅಶೋಕ್ ಹಾರನಹಳ್ಳಿ ಅವರಿಗೆ ನಟರಾಜ್ ಜೋಯಿಸ್ ಅಭಿನಂದನೆ ಸಲ್ಲಿಸಿದ್ದಾರೆ.

ಇಂದು ಸಾಹಸಸಿಂಹ ಡಾ.ವಿಷ್ಣುವರ್ಧನ್ ಕರೋಕೆ ಗಾಯನ ಕಾರ್ಯಕ್ರಮ




ಮೈಸೂರು, ಸೆ.20–ಶ್ರೀ ಗಣೇಶ ಮ್ಯೂಸಿಕಲ್ ಗ್ರೂಪ್ಸ್ ವತಿಯಿಂದ ಸಾಹಸ ಸಿಂಹ ವಿಷ್ಣುವರ್ಧನ್ ಅವರ 74ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಡಾ.ವಿಷ್ಣುವರ್ಧನ್ ಅಭಿನಯದ ಗೀತೆಗಳ ಕರೋಕೆ ಗಾಯನ ಕಾರ್ಯಕ್ರಮವನ್ನು ಎ.ಕಾಂತರಾಜು ಅವರ ಸಾರಥ್ಯದಲ್ಲಿ ಮೈಸೂರು ಪುರಭವನ (ಟೌನ್‌ಹಾಲ್)ದಲ್ಲಿ ಸೆ.21ರಂದು ಸಂಜೆ 4 ಗಂಟೆಗೆ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಚಲನಚಿತ್ರ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಮೇಲುಕೋಟೆ ವಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರಾದ ಡಾ. ರೇಖಾ ಅರುಣ್, ಹೃದಯ ತಜ್ಞ ಡಾ.ಮಂಜುನಾಥ್, ಖ್ಯಾತ ಮನೋಶಾಸ್ತ್ರಜ್ಞರಾದ ಡಾ॥ ರೇಖಾ ಮನಃಶಾಂತಿ, ಕೆಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಇನ್ನಿತರರು ಭಾಗವಹಿಸಲಿದ್ದಾರೆ.

ಮಕ್ಕಳ ದಸರಾದ ವಿಶೇಷ ಆಕರ್ಷಣೆ : ಕಲಾಥಾನ್, ಸ್ವಯಂ ರಕ್ಷಣೆ ಅರಿವು, ಫ್ಯಾಷನ್ ಶೋ ಹೀಗೆ ಹತ್ತು ಹಲವು ವಿಶೇಷ

ಮೈಸೂರು,ಸೆ.20(ಎಸ್‌ಪಿಎನ್)– ಮಕ್ಕಳಿಗಾಗಿ 'ಕಲಾಥಾನ್'... ಸೈಬರ್ ಕ್ರೈಂ, ಸ್ವಯಂ ರಕ್ಷಣೆಯ ಅರಿವಿನ ಜೊತೆಗೆ ಸಾಂಪ್ರದಾಯಿಕ 'ಫ್ಯಾಷನ್ ಶೋ'... ಹಾಸ್ಯ ಕಚಗುಳಿ ನಡುವೆ ವಿಜ್ಞಾನ ವಿಷಯಗಳ ಕುರಿತು ಸಂವಾದ...! ಇದೆಲ್ಲವೂ ಈ ವರ್ಷದ ಮಕ್ಕಳ ದಸರಾದ ವಿಶೇಷ ಆಕರ್ಷಣೆಗಳಾಗಿವೆ.

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ದಿನಗಣನೆ ಆರಂಭವಾಗುತ್ತಿದ್ದು, ವಿಶೇಷ, ವಿನೂತನ, ಅರ್ಥಗರ್ಭಿತ ರೀತಿಯಲ್ಲಿ ಮಕ್ಕಳ ದಸರಾ ಆಯೋಜನೆಗೆ ಹತ್ತು–ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅ.5 ರಿಂದ 7ರವರೆಗೆ ಕಲಾಮಂದಿರದಲ್ಲಿ ನಡೆಯುವ ಮಕ್ಕಳ ದಸರಾದಲ್ಲಿ ಶಿಕ್ಷಣದಲ್ಲಿ ಮಕ್ಕಳ ಹಕ್ಕುಗಳು, ಹೆಣ್ಣು ಮಕ್ಕಳ ಸುರಕ್ಷತೆ ಹಾಗೂ ಸೈಬರ್ ಸುರಕ್ಷತೆ ಅರಿವು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸುವ ಸಲುವಾಗಿ ಸಾವಿರಕ್ಕೂ ಹೆಚ್ಚು ಪ್ರೌಢಶಾಲಾ ಮಕ್ಕಳಿಂದ 'ಕಲಾಥಾನ್' ಜಾಥಾ ಹಮ್ಮಿಕೊಳ್ಳಲಾಗಿದೆ.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಿಂದ ಆರಂಭಗೊಳ್ಳುವ 'ಕಲಾಥಾನ್' ಜಾಥಾ ದೇವರಾಜ ಅರಸು ರಸ್ತೆಯಲ್ಲಿ ಸಾಗಿ, ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ಕಲಾಮಂದಿರ ಆವರಣ ತಲುಪಲಿದೆ. ಕಂಸಾಳೆ, ಡೊಳ್ಳು, ವೀರಗಾಸೆ ಸೇರಿದಂತೆ ಹಲವು ಜಾನಪದ ಕಲಾತಂಡಗಳೊಂದಿಗೆ ಸಾವಿರಾರು ಸಂಖ್ಯೆಯಲ್ಲಿ ಮಕ್ಕಳು ಭಾಗಿಯಾಗ ಲಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಡಿಡಿಪಿಐ ಜವರೇಗೌಡ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಕೌಶಲ್ಯ ಮೇಳೈಸಲಿದೆ: 'ಮಕ್ಕಳ ದಸರಾ' ಇದು ನಮ್ಮ ಮಕ್ಕಳ ಹಬ್ಬ. ಸರ್ಕಾರಿ, ಅನುದಾನಿತ ಶಾಲಾ ಮಕ್ಕಳ ಕೌಶಲ್ಯ ಮೇಳೈಸುವ ಹಬ್ಬ. ಮಕ್ಕಳ ದಸರಾಕ್ಕೆ ಈ ವರ್ಷ ದಶಮಾನೋತ್ಸವದ ಸಂಭ್ರಮ. ಕಳೆದ 9 ವರ್ಷಗಳಲ್ಲಿ 'ಮಕ್ಕಳ ದಸರಾ' ವಿಶೇಷ ಕಾರ್ಯಕ್ರಮಗಳನ್ನು ಪ್ರದರ್ಶಿಸುವ ಮೂಲಕ ವಿಶಿಷ್ಟ ಛಾಪು ಮೂಡಿಸಿದೆ. ಮಕ್ಕಳ ಮನೋರಂಗದಲ್ಲಿ ನೆನಪಿಡುವ ಕಾರ್ಯಕ್ರಮಗಳ ಪ್ರದರ್ಶನಕ್ಕೆ 'ಮಕ್ಕಳ ದಸರಾ' ಸೂಕ್ತ ವೇದಿಕೆಯಾಗಿದೆ ಎಂದರು.

ಮಕ್ಕಳ ದಸರಾದಲ್ಲಿ ಚಿತ್ರಕಲೆ, ಸಾಂಸ್ಕೃತಿಕ ನೃತ್ಯ, ಶೈಕ್ಷಣಿಕ ವಸ್ತು ಪ್ರದರ್ಶನ, ದೇಶಿ ಆಟಗಳ ಪರಿಚಯ, ಕಸ್ತೂರ ಬಾ ಗಾಂಧಿ ವಸತಿ ಶಾಲೆ ಹಾಗೂ ನಿರ್ದಿಷ್ಟ ವರ್ಗದ ವಸತಿ ಶಾಲಾ ಮಕ್ಕಳಿಂದ ಕರಕುಶಲ ವಸ್ತು ಪ್ರದರ್ಶನಗಳನ್ನು ನಡೆಸಲಾಗುತ್ತದೆ.ಇದರ ಜೊತೆಗೆ ಮಕ್ಕಳ ನಾಟಕ ಪ್ರದರ್ಶನ, ಸಮೂಹ ಜಾನಪದ, ದೇಶಭಕ್ತಿ, ಭಕ್ತಿಗೀತಾ ಗಾಯನ ಹಾಗೂ ವಿಶೇಷ ಚೇತನ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಆಯೋಜಿಸಲಾಗುತ್ತಿದೆ ಎಂದರು.

ಸೆ.6ರಂದು ಶೈಕ್ಷಣಿಕ ವಸ್ತುಪ್ರದರ್ಶನ ಉದ್ಘಾಟನೆ: ಮಕ್ಕಳ ದಸರಾದಲ್ಲಿ ಸೆ.6ರಂದು ಬೆಳಗ್ಗೆ 9.30ಕ್ಕೆ ಶೈಕ್ಷಣಿಕ ವಸ್ತು ಪ್ರದರ್ಶನ ಉದ್ಘಾಟನೆಗೊಳ್ಳಲಿದ್ದು, ನಂತರ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಂದ 'ಗೀತಸೌರಭ', ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ರೀತೂ ಸಿಂಗ್, ರಿಷಿ ಶಿವಪ್ರಸನ್ನ, ಹೆಚ್.ಸಿ. ಮಹೇಶ್‌ಕುಮಾರ್ ಹಾಗೂ ಆರ್.ಸಿ. ಗೌಡ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

> ಈ ಬಾರಿ ಮಕ್ಕಳ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲಾ ತಾಲೂಕಿನ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸಿದ್ದು, ಹೆಚ್.ಡಿ.ಕೋಟೆಯಿಂದ 45 ಮಕ್ಕಳು, ಹುಣಸೂರು 50, ಕೆ.ಆರ್.ನಗರ 40, ಮೈಸೂರು ಉತ್ತರವಲಯದಿಂದ 346, ನಂಜನಗೂಡು ತಾಲೂಕಿನಿಂದ 30, ಮೈಸೂರು ತಾಲೂಕಿನಿಂದ 148, ಮೈಸೂರು ದಕ್ಷಿಣ ವಲಯದಿಂದ 419 ಪಿರಿಯಾಪಟ್ಟಣದಿಂದ 45, ಟಿ.ನರಸೀಪುರ ತಾಲೂಕಿನ ಸ್ಕೌಟ್ಸ್ ತಂಡಕ್ಕೆ 25 ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಗಿದೆ.
> – **ಶೋಭಾ,** ನೋಡಲ್ ಅಧಿಕಾರಿ, ಮಕ್ಕಳ ದಸರಾ ಉಪಸಮಿತಿ

ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಅನಾವರಣ: ಮಧ್ಯಾಹ್ನ 12ಕ್ಕೆ ತೋಷಿನ್ ಜಿ.ರಾವ್ ಅವರಿಂದ ಕೀಬೋರ್ಡ್ ಕಾರ್ಯಕ್ರಮ, ಶ್ರೀನಿಮಿಷಾಂಭ ನೃತ್ಯಶಾಲೆಯ ಮಕ್ಕಳಿಂದ ಭಾರತೀಯ ನೃತ್ಯ ವೈಭವ ನಡೆಯಲಿದೆ. ಪ್ರಾಥಮಿಕ ಶಾಲಾ ವಿಭಾಗದಿಂದ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ ಎಂದ ಅವರು, ಹೆಚ್.ಡಿ.ಕೋಟೆ ತಾಲೂಕಿನ ವಿದ್ಯಾರ್ಥಿಗಳಿಂದ ಜಾನಪದ ಗೀತೆಗಳ ಸಮೂಹ ಗಾಯನ, ನಂಜನಗೂಡು ಕುಪ್ಪರವಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ವಿಜ್ಞಾನ ನಾಟಕ ಪ್ರದರ್ಶನ, ಸೈಬರ್ ಇನ್ವೆಸ್ಟಿಗೇಷನ್ ತರಬೇತುದಾರ ಲಿಂಗರಾಜು ಅವರಿಂದ ಮಕ್ಕಳಲ್ಲಿ 'ಸೈಬರ್ ಸುರಕ್ಷತೆ' ಕುರಿತು ಜಾಗೃತಿ ಕಾರ್ಯಕ್ರಮ, ಮೈಸೂರು ದಕ್ಷಿಣ ವಲಯ ವಿದ್ಯಾರ್ಥಿಗಳಿಂದ 'ಮೈಸೂರು ರಾಜ ಒಡೆಯರ್ ಪರಂಪರೆಯನ್ನು ಪ್ರತಿಬಿಂಬಿಸುವ ನೃತ್ಯರೂಪಕ ಮೂಡಿಬರಲಿದೆ.

ಗೀತ ವೊಂಟಡ್ಕರಿಂದ ವಿವಿಧ ಪ್ರಾಣಿಗಳ ಧ್ವನಿ ಮಿಮಿಕ್ರಿ: ರಂಗಾಯಣ ಹಿರಿಯ ಕಲಾವಿದೆ ಗೀತ ಮೋಂಟಡ್ಕ ಅವರಿಂದ ವಿವಿಧ ಪ್ರಾಣಿಗಳ ಧ್ವನಿ ಮಾದರಿಯ ಮಿಮಿಕ್ರಿ ಪ್ರದರ್ಶನ ನಡೆಸಿಕೊಡಲಿದ್ದಾರೆ. ಬೆಂಗಳೂರಿನ ಬಾಲ ಪ್ರತಿಭೆ ವೈಷ್ಣವಿ ಅವರಿಂದ ವಚನಗಾಯನ, ದೇವರನಾಮ, ಭಗವದ್ಗೀತೆ ಪಠಣ ನಡೆಸಿಕೊಡಲಿದ್ದಾರೆ. ಪಿರಿಯಾಪಟ್ಟಣ ಮಾಕೋಡು ಪ್ರೌಢಶಾಲಾ ಮಕ್ಕಳಿಂದ ದೇಶಭಕ್ತಿಗೀತೆಗಳ ಸಮೂಹ ಗಾಯನ, ಹೆಚ್.ಡಿ.ಕೋಟೆಯ ಜ್ಞಾನವೇಣಿ ಜಾನಪದ ಗೀತೆಗಾಯನ ಇರಲಿದೆ. ಸೆ.6ರಂದು ಸಂಜೆ ವೇದಿಕೆ ಕಾರ್ಯಕ್ರಮದಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಗುವುದು ಎಂದರು.

ವಿಶೇಷ ಚೇತನ ಮಕ್ಕಳಿಂದ ನೃತ್ಯ: ಸೆ.7ರಂದು ಬೆಳಗ್ಗೆ 9.30ರಿಂದ ಸಂಜೆ 5ಗಂಟೆಯವರೆಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮೊದಲಿಗೆ ಮೈಸೂರು ಪಂಚಾಕ್ಷರಿ ಸಂಗೀತ ಶಾಲೆ ಮಕ್ಕಳಿಂದ 'ತಬಲ ತರಂಗ', ಬೋಗಾದಿ ಶ್ರೀನೃತ್ಯ ನಿಕೇತನ ವಿದ್ಯಾರ್ಥಿಗಳಿಂದ 'ನವದುರ್ಗಿ ನೃತ್ಯ ರೂಪಕ', ಪ್ರೌಢಶಾಲಾ ವಿಭಾಗದ ಮಕ್ಕಳಿಂದ ಚಿತ್ರಕಲೆ ಸ್ಪರ್ಧೆ, ಶ್ರೀ ಸಾಯಿರಂಗ ವಿದ್ಯಾಸಂಸ್ಥೆ, ರಂಗರಾವ್ ವಿಕಲಚೇತನರ ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ಹಾಗೂ ಕೀಳನಪುರ ಸರ್ಕಾರಿ ಪ್ರಾಥಮಿಕ ಶಾಲೆ ಮಕ್ಕಳಿಂದ 'ಒನಕೆ ಓಬವ್ವ' ನೃತ್ಯರೂಪಕ ಪ್ರದರ್ಶನವಾಗಲಿದೆ ಎಂದರು.

ಟಿಬೇಟಿಯನ್ ನೃತ್ಯ: ಸುತ್ತೂರು ಜೆಎಸ್‌ಎಸ್ ಶಾಲೆ ಮಕ್ಕಳಿಂದ ಮಣಿಪುರಿ ಮತ್ತು ಅಸ್ಸಾಂಮೀಸ್ ನೃತ್ಯ ಪ್ರದರ್ಶನ, ಮೈಸೂರು ಉತ್ತರ ಮಕ್ಕಳಿಂದ ವಿವಿಧತೆಯಲ್ಲಿ ಏಕತೆ ಸಾರುವ ನೃತ್ಯ ಪ್ರದರ್ಶನ, ವಿದ್ಯಾರ್ಥಿನಿ ಜ್ಞಾನವೇಣಿ ಅವರಿಂದ 'ಶ್ರೀ ಮಲೈಮಹದೇಶ್ವರ ಸ್ವಾಮಿ' ಕುರಿತು ಏಕಪಾತ್ರಾಭಿನಯ, ಬೈಲಕುಪ್ಪ ಶಾಲಾ ವಿದ್ಯಾರ್ಥಿಗಳಿಂದ 'ಟಿಬೇಟಿಯನ್ ನೃತ್ಯ', ನೇರಳಕುಪ್ಪೆ ಪ್ರೌಢಶಾಲಾ ಹಾಡಿ ಮಕ್ಕಳಿಂದ ನೃತ್ಯ, ಕೆ.ಆರ್.ನಗರ ತಾಲೂಕು ಮಕ್ಕಳಿಂದ ಕೋಲಾಟ ಹಾಗೂ ಬೆಂಗಳೂರು ಸೇವಾ ಅಂದ ಮಕ್ಕಳಿಂದ ನೃತ್ಯ ಪ್ರದರ್ಶನ ಹಾಗೂ ಟಿ.ನರಸೀಪುರ ತಾಲೂಕು ವಿದ್ಯಾರ್ಥಿಗಳಿಂದ ಜಾನಪದ ಶೈಲಿಯ ಸಮೂಹ ನೃತ್ಯ, ಮಾವುತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದ್ದು, ಅಂದು ಸಂಜೆ 3 ಗಂಟೆಗೆ ಮಕ್ಕಳ ದಸರಾ ಸಮಾರೋಪ ಸಮಾರಂಭ ಇರಲಿದೆ. ಅಲ್ಲದೆ, ಸೆ.5ರಂದು ಬೆಳಗ್ಗೆ 9.30ರಿಂದ 5 ಗಂಟೆಯವರೆಗೆ ಮಹಾರಾಣಿ ಕಾಲೇಜು ಆವರಣದಲ್ಲಿ ವಿವಿಧ ದೇಸಿ ಆಟಗಳ ಸ್ಪರ್ಧೆ ಆಯೋಜಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.09.2024 ಶನಿವಾರ, ಮಳೆ ನಕ್ಷತ್ರ: ಉತ್ತರಾ, 13.09.2024 ರಿಂದ 26.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಅಶ್ವಿನಿ, ರಾಹುಕಾಲ : ಬೆಳಗ್ಗೆ 9 ರಿಂದ 10.30 ರವರೆಗೆ

■ **ಮೈಸೂರು ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ :** ಯೋಗ ಘಟಿಕೋತ್ಸವ ಸಮಾರಂಭ, ಸಾನ್ನಿಧ್ಯ : ಆಧ್ಯಾತ್ಮಿಕ ಚಿಂತಕ ಸುಚರಿತ ಮಾತಾಜಿ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಪದವಿ ಪ್ರದಾನ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಮಾಜಿ ಎಂಎಲ್‌ಸಿ ಸಿದ್ದರಾಜು, ಪ್ರಾಸ್ತಾವಿಕ ನುಡಿ : ಯೋಗ ಸ್ಪೋರ್ಟ್ಸ್ ಫೌಂಡೇಷನ್ ಅಧ್ಯಕ್ಷ ಡಾ. ಪಿ.ಎನ್. ಗಣೇಶ್‌ಕುಮಾರ್, ಉಪಸ್ಥಿತರು : ಡಾ. ಹೆಚ್.ಎ. ಶಶಿರೇಖಾ, ಜೆಎಸ್‌ಎಸ್ ಯೋಗ ಸಂಸ್ಥೆ ಮುಖ್ಯಸ್ಥ ಶ್ರೀಹರಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 8.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು, ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು, ಉಸಿರಾಟದ ಸಮಸ್ಯೆಗಳು ಮತ್ತು ಹಲ್ಲು ನೋವು, ಹುಳುಕು ಹಲ್ಲು, ಬಾಯಿಂದ ದುರ್ವಾಸನೆ, ವಸಡಿನಿಂದ ರಕ್ತಸ್ರಾವ ಮುಂತಾದ ದಂತ ಮತ್ತು ಬಾಯಿ ರೋಗಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕತ್ತು ಮತ್ತು ಭುಜದ ನೋವಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ:** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 109ನೇ ಜಯಂತಿ ಮಹೋತ್ಸವದ ಅಂಗವಾಗಿ ಆಯುರ್ ಫಾರ್ಮಾಕಾನ್–2024 ವಿಚಾರ ಸಂಕಿರಣ, ಉದ್ಘಾಟನೆ: ಜೆಎಸ್‌ಎಸ್ ಅಕಾಡೆಮಿ ಸಮಕುಲಪತಿ ಡಾ. ಬಿ. ಸುರೇಶ್, ಅತಿಥಿಗಳು: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು:** ಸ್ವಯಂ ಪ್ರೇರಿತ ರಕ್ತದಾನ ಶಿಬಿರ, ಉಪಸ್ಥಿತರು: ಜೀವಧಾರ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಇ. ಗಿರೀಶ್, ವಿಕ್ರಂ ಅಯ್ಯಂಗಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ಶಾಲಿವಾಹನ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ:** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎನ್.ಮಂಜುನಾಥ್, ಸ್ಥಳ: ಶ್ರೀ ಸಿದ್ದಪ್ಪಾಜಿ ಸಮುದಾಯ ಭವನ, ಹೆಬ್ಬಾಳು, ಬೆಳಗ್ಗೆ 10ಕ್ಕೆ.

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಶ್ರೀ ಲಕ್ಷ್ಮೀ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ಸೋಮಣ್ಣ, ಸ್ಥಳ: ಸಹಕಾರ ಸಂಘದ ಆವರಣ, ಬೆಳಗ್ಗೆ 10.30ಕ್ಕೆ.

■ **ಮಹಿಷ ದಸರಾ ಆಚರಣಾ ಸಮಿತಿ:** ಮಹಿಷ ಮಂಡಲೋತ್ಸವ–2024, ಮಹಿಷ ಮಂಡಲ ಒಂದು ಅಧ್ಯಯನ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಪ್ರಾಧ್ಯಾಪಕ ಪ್ರೊ. ಡಿ.ಆನಂದ್, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ವಿಚಾರ ಮಂಡನೆ : ಸಿದ್ದಸ್ವಾಮಿ, ಡಾ. ಲಕ್ಷ್ಮಿಪತಿ, ಡಾ. ಕೃಷ್ಣಮೂರ್ತಿ ಚಮರಂ, ಮುಖ್ಯ ಅತಿಥಿಗಳು: ಪ್ರೊ.ಕೆ.ಎಸ್. ಭಗವಾನ್, ಶ್ರೀಮತಿ ಜಯಲಕ್ಷ್ಮಿ, ಬಿ.ಎಂ. ಲಿಂಗರಾಜು, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಬೆಳಗ್ಗೆ 10.30ಕ್ಕೆ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಹಿರಿಯ ವಿದ್ಯಾರ್ಥಿ ಅವಿನಾಶ್ ಶಠಮರ್ಷಣ, ಪ್ರತಿಭಾ ವೇದಿಕೆ ಉದ್ಘಾಟನೆ : ಚಲನಚಿತ್ರ ನಟಿ ಶ್ರೀಮತಿ ಪ್ರಿಯಾ ಶಟಮರ್ಷಣ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಸ್ಥಳ: ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಭಾರತ ದರ್ಶಿತ್ವ ಟ್ರಸ್ಟ್ ಹಾಗೂ ಕನ್ನಡ ಸಾಹಿತ್ಯ ಕಲಾಕೂಟ :** ಡಾ. ಎಂ. ಕನ್ನಿಕಾ ಅವರು ರಚಿಸಿರುವ 15 ಮತ್ತು 16ನೇ ಕೃತಿಗಳಾದ ಶಿಕ್ಷಣ ಜಾನಪದ ಪಾರಂಪರಿಕ ಜನಪದ ಆಚರಣೆಗಳು ಪುಸ್ತಕಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಹಂಪಿ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಹಿ.ಚಿ. ಬೋರಲಿಂಗಯ್ಯ, ಪುಸ್ತಕ ಕುರಿತು ಮಾತನಾಡುವವರು : ಪ್ರಾಧ್ಯಾಪಕರಾದ ಪ್ರೊ. ಹೆಚ್.ಆರ್. ಚೇತನಾ, ಮುಖ್ಯ ಅತಿಥಿಗಳು : ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ. ಜಿ.ಪಿ.ದೇವರಾಜ್, ಉಪಸ್ಥಿತರು : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಯುವ ಕವಿ ಆಲಗೂಡು ಲಿಂಗರಾಜ್, ಸ್ಥಳ: ರೋಟರಿ ಕೇಂದ್ರ, ಪ್ರೊ. ಎ.ಸಿ. ದೇವೇಗೌಡ ಹಾಲ್, ಜೆಎಲ್‌ಬಿ ರಸ್ತೆ, ಮುಡಾ ಎದುರು, ಬೆಳಗ್ಗೆ 11ಕ್ಕೆ.

■ **ರಾಜು ಕ್ಷತ್ರಿಯ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್. ಶಿವಕುಮಾರ್, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ಮಹದೇಶ್ವರ ವಿವಿಧೋದ್ದೇಶ ಸಹಕಾರ ಸಂಘ:** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಜಿ. ಶೋಭ, ಸ್ಥಳ: ಶ್ರೀ ಮಹದೇಶ್ವರ ಸಮುದಾಯ ಭವನ, ಕುಂಬಾರಕೊಪ್ಪಲು, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಿಳಾ ಶಿಕ್ಷಣ ಸಂಸ್ಥೆಗಳ ವಸತಿ ನಿಲಯಗಳು:** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಮಹೋತ್ಸವ, ನುಡಿ ನಮನ: ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ, ಅಧ್ಯಕ್ಷತೆ: ಮುಖ್ಯ ನಿಲಯಪಾಲಕರಾದ ಶ್ರೀಮತಿ ಮಮತಾ ಸುರೇಶ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ ತಾಂತ್ರಿಕ ಶಿಕ್ಷಣ ಸಂಸ್ಥೆಗಳು :** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 109ನೇ ಜಯಂತಿ ಆಚರಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ, ಗೌರವ ಅತಿಥಿಗಳು : ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ. ಸುರೇಶ್, ಅಧ್ಯಕ್ಷತೆ : ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎ.ಎನ್. ಸಂತೋಷ್ ಕುಮಾರ್, ಸ್ಥಳ: ಎಸ್‌ಜೆಸಿಇ ಆವರಣ, ಶ್ರೀ ಗಣಪತಿ ದೇವಸ್ಥಾನದ ಸಮೀಪ, ಬೆಳಗ್ಗೆ 11ಕ್ಕೆ.

■ **ಸಹಜ ಸಮೃದ್ಧಿ ಸಾವಯವ ಕೃಷಿಕರ ಬಳಗ:** ಸೊಪ್ಪು ಮೇಳ–ಸೊಪ್ಪಿನ ಲೋಕ ಅನಾವರಣ, ವಿಷ ಮುಕ್ತ ಸೊಪ್ಪಿನ ಕೃಷಿ ತರಬೇತಿ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 11 ಗಂಟೆಯಿಂದ. (ಸಂಪರ್ಕಿಸಿ ಮೊ.ನಂ.9482115495).

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಎಂಐಟಿ ಪ್ರಥಮ ದರ್ಜೆ ಕಾಲೇಜು :** ಆಧುನಿಕ ವಚನ ಕವಿಗೋಷ್ಠಿ, ಸ್ಪರ್ಧಾತ್ಮಕ ಕನ್ನಡ ತರಬೇತಿ ಶಿಬಿರ, ಉದ್ಘಾಟನೆ : ಅರಮನೆ ಭದ್ರತಾ ಪಡೆಯ ಸಹಾಯಕ ಪೊಲೀಸ್ ಆಯುಕ್ತ ಹೆಚ್.ಎಂ. ಚಂದ್ರಶೇಖರ, ಮುಖ್ಯ ಅತಿಥಿಗಳು : ಎನ್.ಆರ್. ಮಂಜುನಾಥ್, ಉಪಸ್ಥಿತರು : ಎಂಐಟಿ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಚಂದ್ರಜಿತ್, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಎಂಐಟಿ ಪ್ರಥಮ ದರ್ಜೆ ಕಾಲೇಜು, ವಿಶ್ವೇಶ್ವರನಗರ, ಬೆಳಗ್ಗೆ 11.30ಕ್ಕೆ.

■ **ಕೂಡಲ ಸಂಗಮದೇವ ಗೃಹ ನಿರ್ಮಾಣ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಎ. ಮಹೇಶ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ಬೆಂಗಳೂರಿನ ಕನ್ನಡಾಂಬೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ, ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ :** ಸ್ವಾತಂತ್ರ್ಯೋತ್ಸವ ಸಂಭ್ರಮ, ಸುಗಮ ಸಂಗೀತ, ಜಾನಪದ ಗಾಯನ ಮತ್ತು ಭರತನಾಟ್ಯ, ಭಾರತ ಸೇವಾ ರತ್ನ, ಮೈಸೂರು ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಪಂಪ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ), ಪ್ರಶಸ್ತಿ ಪ್ರದಾನ : ಹಿರಿಯ ರಾಜಕೀಯ ವಿಶ್ಲೇಷಕ ಪ್ರೊ. ರಾಧಕೃಷ್ಣ, ಅಧ್ಯಕ್ಷತೆ : ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಾಷ್ಟ್ರ ಧ್ವಜಾರೋಹಣ : ಡಾ.ಜಿ.ವೈ. ಪದ್ಮನಾಗರಾಜ್, ನಾಡಗೀತೆಗೆ ಚಾಲನೆ : ಟಿ. ಸತೀಶ್ ಜವರೇಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಮಧ್ಯಾಹ್ನ 2ಕ್ಕೆ.

■ **ಶ್ರೀ ಗಣೇಶ್ ಮ್ಯೂಸಿಕಲ್ ಗ್ರೂಪ್ :** ಡಾ. ವಿಷ್ಣುವರ್ಧನ್ ಜನ್ಮ ದಿನಾಚರಣೆ ಪ್ರಯುಕ್ತ ಕನ್ನಡ ಚಲನಚಿತ್ರ ಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ, ಸ್ಥಳ: ಪುರಭವನ, ಸಂಜೆ 4ಕ್ಕೆ

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಶ್ರೀಮತಿ ಶೀಲಾ ಕುಮಾರಿ, ಆಂಗ್ಲ ಭಾಷಾ ಶಿಕ್ಷಕರು, ವಿದ್ಯಾಮಿತ್ರ ಶಾಲೆ, ರೂಪಾನಗರ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ.

■ **ಮಂಥನ ಮೈಸೂರು :** ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ, ಬಾಂಗ್ಲಾದೇಶ ವರ್ತಮಾನದ ತಲ್ಲಣಗಳು, ಉಪಸ್ಥಿತರು : ಹಿರಿಯ ಪತ್ರಕರ್ತ ವಿನಾಯಕ ಭಟ್ ಮುರೂರು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಸಂಸ್ಥೆ ಪಶ್ಚಿಮ :** ಶ್ರಾವಣ ಯುವ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ವೀಣಾವಾದನ, ವಿದುಷಿ ಶುಭ ಸಂತೋಷ್–ವೀಣೆ, ವಿದ್ವಾನ್ ಫಣೀಂದ್ರ ಭಾಸ್ಕರ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ರೋಟರಿ ಸಂಸ್ಥೆ ಪಶ್ಚಿಮ, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 6ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ರಾಗಾ ಮ್ಯೂಸಿಕ್ ಅಕಾಡೆಮಿ:** ವಿದ್ವಾನ್ ಸುದರ್ಶನ್ ಅಯ್ಯಂಗಾರ್ ಅವರಿಂದ ಗಾಯನ, ವಿದ್ವಾನ್ ರೂಪಗುಡಿ ರತ್ನ ತೇಜ– ವಯೋಲಿನ್, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ವಿದ್ವಾನ್ ಟಿ.ಎನ್. ಅಜಯ್–ಘಟಂ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣ ಶಾಸ್ತ್ರಿ ರಸ್ತೆ, ಸಂಜೆ 6ಕ್ಕೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿದುಷಿ ಶ್ರುತಿ ಎಸ್. ಭಟ್ ಅವರಿಂದ ಗಾಯನ, ವಿದುಷಿ ಶ್ರೀ ಲಕ್ಷ್ಮಿ ಎಸ್. ಭಟ್–ಪಿಟೀಲು, ವಿದ್ವಾನ್ ಪವನ್ ಮಾಧವ ಮಸೂರ್–ಮೃದಂಗ, ವಿದ್ವಾನ್ ಶ್ರೀನಿಧಿ ಆರ್.ಕೌಂಡಿನ್ಯ–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಸಂಜೆ 6ಕ್ಕೆ

■ **ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು, ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು :** 136ನೇ ಸಾಂಸ್ಕೃತಿಕ ಕಾರ್ಯಕ್ರಮ, ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯರು, ಕು.ಅನನ್ಯಾ ಸಂತೋಷ್, ಕು.ಗಾಯತ್ರಿ ಗುರುಪ್ರಸಾದ್, ಕು.ಕಾವ್ಯ ಕಾಶಿನಾಥನ್, ಕು.ಸಾಕ್ಷಿ ಅಶೋಕ್, ಚಿ.ಹರ್ಷವರ್ಧನ್ ಕೆ, ಚಿ.ಶಶಾಂಕ್ ಕಿರಣ್ ನಾಯರ್ ಪ್ರದರ್ಶನ ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ಭಾರತೀಯ ವಿದ್ಯಾ ಭವನ ಸಭಾಂಗಣ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಮೃತಾ ನಿತಿನ್ ಶಾಸ್ತ್ರಿ, ಎಂ. ಎಸ್. ಲಕ್ಷ್ಮೀಶ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೃತಿ. ಹೆಚ್. ಆರ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ : ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ಬಿಂದು, ರಚನೆ – ಎಸ್.ಎನ್. ಶಿವಸ್ವಾಮಿ, ನಿರ್ದೇಶನ–ಯಮುನಾಮೂರ್ತಿ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾಷಣದ ಧ್ವನಿಮುದ್ರಣ, 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸುಸ್ಥಿರ ಕೃಷಿಯ ಪ್ರಾಮುಖ್ಯತೆ. ಈ ಕುರಿತು ಮಂಡ್ಯ ಜಿಲ್ಲೆ ಕೆ. ಆರ್. ಪೇಟೆ ತಾಲೂಕು ಮಡುವಿನಕೋಡಿ ಅಂಚೆ, ಹೊಸಕೋಟೆ ಗ್ರಾಮದ ಲಕ್ಷ್ಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ : ಹಿಂದೋಳ್ ಮಜುಮ್ದಾರ್ – ತಬಲಾ, ಉದಯ್ ಕುಲಕರ್ಣಿ – ತಬಲಾ

ಮೈಸೂರಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಅಮೃತ ಮಹೋತ್ಸವ

ಗಿರಿರಾಜ್‌ಸಿಂಗ್, ಹೆಚ್.ಡಿ.ಕುಮಾರಸ್ವಾಮಿ ಸೇರಿ ನಾಲ್ವರು ಸಚಿವರು, ಸಿಲ್ಕ್ ಬೋರ್ಡ್ ಉನ್ನತ ಅಧಿಕಾರಿಗಳು, ದೇಶಾದ್ಯಂತ ಸಾವಿರಕ್ಕೂ ಹೆಚ್ಚು ರೇಷ್ಮೆ ಕೃಷಿಕರು ಭಾಗಿ; ಸಾಧನೆಗೈದ ರೈತರಿಗೆ ವಿವಿಧ ಪ್ರಶಸ್ತಿ ಪ್ರದಾನ



ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಶುಕ್ರವಾರ ನಡೆದ ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವದಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಗಿರಿರಾಜ್ ಸಿಂಗ್ ಹಾಗೂ ಪಬಿತ್ರ ಮಾರ್ಗರಿಟ ಅವರು ಸಿಎಸ್‌ಬಿ ಹೊರತಂದಿರುವ 75 ರೂ. ನಾಣ್ಯ ಬಿಡುಗಡೆ ಮಾಡಿದರು. ರಾಜ್ಯದ ಸಚಿವ ಕೆ. ವೆಂಕಟೇಶ್, ಸಂಸದರಾದ ಡಾ. ಕೆ.ಸುಧಾಕರ್, ನಾರಾಯಣ ಕೊರಗಪ್ಪ, ಶಾಸಕ ಜಿ.ಟಿ. ದೇವೇಗೌಡ, ಅಧಿಕಾರಿಗಳಾದ ರಚನಾ ಶಾ, ಪ್ರಜಕ್ತ ಎಲ್.ವರ್ಮ, ರಾಜೇಶ್‌ಗೌಡ, ಶಿವಕುಮಾರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಸೆ. 20(ಆರ್‌ಕೆ)– 1949ರಲ್ಲಿ ಸ್ಥಾಪನೆಯಾದ ಕೇಂದ್ರ ರೇಷ್ಮೆ ಮಂಡಳಿ (ಸೆಂಟ್ರಲ್ ಸಿಲ್ಕ್ ಬೋರ್ಡ್)ಯ ಅಮೃತ ಮಹೋತ್ಸವ ಕಾರ್ಯಕ್ರಮ ಶುಕ್ರವಾರ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ನಡೆಯಿತು.

ಭಾರತ ಸರ್ಕಾರದ ಜವಳಿ ಮಂತ್ರಾಲಯದ ಸಹಯೋಗದೊಂದಿಗೆ ಸೆಂಟ್ರಲ್ ಸಿಲ್ಕ್ ಬೋರ್ಡ್ ಆಯೋಜಿಸಿದ್ದ 75ನೇ ವರ್ಷದ ಆಚರಣೆ ಸಮಾರಂಭದಲ್ಲಿ ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಹಾಗೂ ಕೇಂದ್ರ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ, ದೀಪ ಬೆಳಗಿ, ಕೇಂದ್ರ ರೇಷ್ಮೆ ಮಂಡಳಿ ಸಂಸ್ಥಾಪಕ ಶ್ಯಾಂಪ್ರಸಾದ್ ಮುಖರ್ಜಿ ಅವರ ಭಾವಚಿತ್ರಕ್ಕೆ ನಮಿಸುವ ಮೂಲಕ ಉದ್ಘಾಟಿಸಿದರು. ಕರ್ನಾಟಕ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ, ಅಸ್ಸಾಂ, ಮೇಘಾಲಯ ಸೇರಿದಂತೆ ದೇಶದಾದ್ಯಂತ ರೇಷ್ಮೆ ಕೃಷಿಯಲ್ಲಿ ಸಾಧನೆಗೈದ 60ಕ್ಕೂ ಹೆಚ್ಚು ರೈತರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಸಚಿವರು ಇದೇ ಸಂದರ್ಭ ಗೌರವಿಸಿದರು.

ಕೇಂದ್ರ ರೇಷ್ಮೆ ಮಂಡಳಿಯ ಅಮೃತ ಮಹೋತ್ಸವದ ಅಂಗವಾಗಿ ಹೊರತಂದಿರುವ ಪೋಸ್ಟ್ ಕವರ್, 75 ರೂ. ನಾಣ್ಯ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಕಾಫಿ ಟೇಬಲ್ ಬುಕ್, ಕಿರುಚಿತ್ರ, ತಂತ್ರಜ್ಞಾನ, ಪಬ್ಲಿಕೇಷನ್‌ಗಳು, ವೆಬ್‌ಸೈಟ್‌ಗಳನ್ನು ಕೇಂದ್ರ ಸಚಿವರು ಸಮಾರಂಭದಲ್ಲಿ ಬಿಡುಗಡೆ ಮಾಡಿದರು.

ರೇಷ್ಮೆ ಉದ್ಯಮದ ಅಭಿವೃದ್ಧಿ ಸಂಬಂಧ ನಾಲ್ಕು ಕಂಪನಿಯಗಳು ಮಂಡಳಿಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗೆ ಇದೇ ಸಂದರ್ಭ ಸಹಿ ಮಾಡಿ ದಾಖಲಾತಿಗಳನ್ನು ಹಸ್ತಾಂತರಿಸಲಾಯಿತು.

ವಿದೇಶಾಂಗ ವ್ಯವಹಾರಗಳು ಹಾಗೂ ಜವಳಿ ಖಾತೆ ರಾಜ್ಯ ಸಚಿವ ಪಬಿತ್ರ ಮಾರ್ಗರಿಟ, ರಾಜ್ಯದ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ. ಕೆ. ಸುಧಾಕರ್, ನಾರಾಯಣ ಕೊರಗಪ್ಪ, ಶಾಸಕ ಜಿ.ಟಿ. ದೇವೇಗೌಡ, ಜವಳಿ ಮಂತ್ರಾಲಯದ ಕಾರ್ಯದರ್ಶಿ ರಚನಾ ಶಾ, ಜಂಟಿ ಕಾರ್ಯದರ್ಶಿ ಪ್ರಜಕ್ತ ಎಲ್. ವರ್ಮ, ಸದಸ್ಯ ಕಾರ್ಯದರ್ಶಿ ಶಿವ ಕುಮಾರ್, ರಾಜ್ಯ ರೇಷ್ಮೆ ಇಲಾಖೆ ಆಯುಕ್ತ ರಾಜೇಶ್‌ಗೌಡ, ಮಂಡಳಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಘಟಿಕೋತ್ಸವ ಸಭಾಂಗಣ ಹಾಗೂ ಮುಕ್ತ ವಿಶ್ವ ವಿದ್ಯಾನಿಲಯದ ಆವರಣದಲ್ಲಿ ಕೇಂದ್ರ ರೇಷ್ಮೆ ಮಂಡಳಿ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ, ರೇಷ್ಮೆ ಕೃಷಿ ವಿಧಾನ, ಉತ್ಪನ್ನಗಳು, ಮಾರುಕಟ್ಟೆ ವ್ಯವಸ್ಥೆ ಕುರಿತಂತೆ ಮಳಿಗೆಗಳನ್ನು ತೆರೆದು ಪ್ರದರ್ಶಿಸಲಾಗಿತ್ತು.

ಮೈಸೂರು ರೇಷ್ಮೆ ಸೀರೆಗಳು ವಿಶ್ವ ಪ್ರಸಿದ್ಧಿಯಾಗಿವೆ

ಕೇಂದ್ರ ಜವಳಿ ಸಚಿವ ಗಿರಿರಾಜ್‌ಸಿಂಗ್ ಬಣ್ಣನೆ

ಮೈಸೂರು, ಸೆ. 20(ಆರ್‌ಕೆ)– ಮೈಸೂರು ರೇಷ್ಮೆ ಸೀರೆಗಳು ಇಂದು ವಿಶ್ವ ಪ್ರಸಿದ್ಧಿಯಾಗಿದ್ದು, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಈ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಕೇಂದ್ರ ಜವಳಿ ಖಾತೆ ಸಚಿವ ಗಿರಿರಾಜ್ ಸಿಂಗ್ ತಿಳಿಸಿದ್ದಾರೆ. 1949ರಲ್ಲಿ ಶ್ಯಾಂ ಪ್ರಸಾದ್ ಮುಖರ್ಜಿ ಕೇಂದ್ರ ರೇಷ್ಮೆ ಮಂಡಳಿ ಸ್ಥಾಪಿಸಿದರು. ಅವರು ನಮ್ಮ ನಾಯಕರೂ ಹೌದು ಎಂದರು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರಿಗೆ ರೇಷ್ಮೆಯನ್ನು ಪರಿಚಯಿಸಿದ್ದರಿಂದ ಇಂದು ಮೈಸೂರು ರೇಷ್ಮೆ ಪ್ರಪಂಚದಾದ್ಯಂತ ಖ್ಯಾತಿಯಾಗಿ ವ್ಯಾಪಕ ಬೇಡಿಕೆ ಬರುತ್ತಿದೆ ಎಂದು ನುಡಿದರು. ಕರ್ನಾಟಕದ ತುಮಕೂರಲ್ಲಿ ತೆಂಗು ಹಾಗೆಯೇ ರೇಷ್ಮೆ ಯನ್ನು ರಾಮನಗರ, ಚಿಕ್ಕಬಳ್ಳಾಪುರ ಸೇರಿದಂತೆ ಹೆಚ್ಚು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ಚೈನಾ ರೇಷ್ಮೆಯಿಂದಾಗಿ ಭಾರತದ ರೇಷ್ಮೆಗೆ ಬೆಲೆ ಕಡಿಮೆ ಇದೆ. ಆದರೆ ಮುಂದಿನ ದಿನಗಳಲ್ಲಿ ಕೆಲಸಗಾರರ ಕೊರತೆ ಇರುವುದರಿಂದ ಅಲ್ಲಿ ಉತ್ಪಾದನೆ ಕುಂಠಿತವಾಗಿ ನಮ್ಮ ದೇಶದ ರೇಷ್ಮೆಗೆ ಉತ್ತಮ ಬೆಲೆ ಬರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ 27 ರಾಜ್ಯಗಳಲ್ಲಿ ರೇಷ್ಮೆ ಬೆಳೆಯುತ್ತಿರುವುದರಿಂದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೇಶದ ರೈತರ ಆದಾಯ ಹೆಚ್ಚಿಸುವ ಯೋಜನೆಗಳನ್ನು ಜಾರಿಗೆ ತಂದಿದ್ದು, ರೇಷ್ಮೆ ಬೆಳೆಗಾರರ ಹಿತ ಕಾಪಾಡಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಸಚಿವರು ನುಡಿದರು.

ಕೇಂದ್ರ ವಿದೇಶಾಂಗ ಸಚಿವ ಪವಿತ್ರ ಮಾರ್ಗರಿಟ ಮಾತನಾಡಿ, ಕನ್ನಡ ಹೆಚ್ಚು ಶ್ರೀಮಂತ ಭಾಷೆಯಾಗಿದೆ. ರೇಷ್ಮೆ ಬೆಳೆಯ ಅಭಿವೃದ್ಧಿಗೆ ಸೆಂಟ್ರಲ್ ಸಿಲ್ಕ್ ಬೋರ್ಡ್ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದ್ದು, ರಾಷ್ಟ್ರದ ಅಭಿವೃದ್ಧಿಗೂ ಸಹಕಾರಿಯಾಗಿದೆ. ಗ್ರಾಮೀಣ ರೈತರು, ಅದರಲ್ಲೂ ಮಹಿಳೆಯರ ನೆಚ್ಚಿನ ಬೆಳೆಯೂ ಆಗಿದೆ ಎಂದರು.

ನಾನೂ ರೇಷ್ಮೆ ಬೆಳೆದು ಚಾಕೀ ಸೆಂಟರ್ ಮಾಡಿದ್ದೆ: ಜಿಟಿಡಿ

ಮೈಸೂರು, ಸೆ. 20(ಆರ್‌ಕೆ)– ನಾನು ರೈತ. ಈ ಹಿಂದೆ ರೇಷ್ಮೆ ಬೆಳೆದು ಚಾಕೀ ಸೆಂಟರ್ ಮಾಡಿದ್ದ ಕೇಂದ್ರ ರೇಷ್ಮೆ ಮಂಡಳಿಗೂ 75 ವರ್ಷ. ನನಗೂ 75 ವರ್ಷ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸಾಂದರ್ಭಿಕವಾಗಿ ತಿಳಿಸಿದ್ದಾರೆ. ನಾನೂ ರೇಷ್ಮೆ ಬೆಳೆದಿದ್ದೆ. ನನಗೀಗ 75 ವರ್ಷ. ರೇಷ್ಮೆ ಮಂಡಳಿಯ ಅಮೃತ ಮಹೋತ್ಸವದಲ್ಲಿ ಭಾಗಿಯಾಗಿರುವುದು ಸಂತೋಷವಾಗುತ್ತಿದೆ ಎಂದರು.

ನನ್ನ ಬೆಳೆಯನ್ನು ನೋಡಿ ನನಗೆ ಪ್ರಗತಿಪರ ರೈತ ಎಂಬ ಬಿರುದು ಸಿಕ್ಕಿದೆ. ಈ ಹಿಂದೆ ರೇಷ್ಮೆ ಬೆಳೆ ಉಪಕರಣ, ಸಬ್ಸಿಡಿ ಸಾಲ, ಗೊಬ್ಬರಗಳಂತಹ ಸೌಲಭ್ಯ ಸಿಗುತ್ತಿತ್ತು. ಈಗ ರೈತರನ್ನು ಕಡೆಗಣಿಸಲಾಗಿದೆ. ನಿರುದ್ಯೋಗ ನೀಗಿಸುವ ಕ್ಷೇತ್ರವೆಂದರೆ ಅದು ರೇಷ್ಮೆ ಕೃಷಿ. ಬರಗಾಲ ಬಂದರೂ ಕಡಿಮೆ ನೀರಿರುವ ಭೂಮಿಯಲ್ಲೂ ಬೆಳೆಯಬಹುದಾದ ರೇಷ್ಮೆಗೆ ಉತ್ತೇಜನ ನೀಡಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಮೂಲಕ ರೈತರನ್ನು ಉಳಿಸಿ ಎಂದು ಜಿ.ಟಿ. ದೇವೇಗೌಡರು, ಕೇಂದ್ರ ಸಚಿವರನ್ನು ಇದೇ ಸಂದರ್ಭ ಕೋರಿಕೊಂಡರು.

ಸಂಸದ ಡಾ.ಕೆ.ಸುಧಾಕರ್ ಮಾತನಾಡಿ, ಜರ್ಮನಿಯಲ್ಲಿ ಎಲಿಜಬೆತ್ ರಾಣಿಗೆ ಉಡುಗೊರೆಯಾಗಿ ನೀಡಿದ ರೇಷ್ಮೆಯನ್ನು ಮೈಸೂರಿಗೆ ತಂದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಮಧ್ಯವರ್ತಿಗಳನ್ನು ತಡೆದು ನೇರವಾಗಿ ರೈತ ಬೆಳೆದ ರೇಷ್ಮೆಯನ್ನು ಮಾರುವ ವ್ಯವಸ್ಥೆಯಾಗಬೇಕಿದೆ ಎಂದರಲ್ಲದೆ, ಶಿಡ್ಲಘಟ್ಟದಲ್ಲಿ ಹೈಟೆಕ್ ಮಾರುಕಟ್ಟೆ ನಿರ್ಮಿಸುತ್ತಿದ್ದು, ಮೂಲ ಸೌಲಭ್ಯ ಕಲ್ಪಿಸಬೇಕು ಎಂದರು.



ಮೈಸೂರು ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಶುಕ್ರವಾರ ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವ ಕಾರ್ಯಕ್ರಮ ನಿಮಿತ್ತ ಆಯೋಜಿಸಿದ್ದ ಕಕೂನ್ಸ್ ಅನ್ನು ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ಗಿರಿರಾಜ್ ಸಿಂಗ್, ಪವಿತ್ರ ಮಾರ್ಗರಿಟ, ಶಾಸಕ ಜಿ.ಟಿ. ದೇವೇಗೌಡರು ವೀಕ್ಷಿಸಿದರು.

ಒಂದು ದೇಶ, ಒಂದು ಚುನಾವಣೆ ಸಮರ್ಥ ನಿರ್ಧಾರ

ಮೈಸೂರು, ಸೆ. 20– ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರವು 'ಒಂದು ದೇಶ, ಒಂದು ಚುನಾವಣೆ' ಒಂದು ಸಮರ್ಥ ನಿರ್ಧಾರ, ಮಾತ್ರವಲ್ಲದೆ, ಚುನಾವಣೆ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಹೆಜ್ಜೆಯಾಗಿದೆ ಎಂದು ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷೆ ಹೇಮಾ ನಂದೀಶ್ ಕೇಂದ್ರ ಸರ್ಕಾರದ ಕ್ರಮವನ್ನು ಸ್ವಾಗತಿಸಿದ್ದಾರೆ. ಮೊದಲ ಹಂತದಲ್ಲಿ ಲೋಕಸಭೆ ಮತ್ತು ಎಲ್ಲ ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಮತ್ತು ಈ ಸಾರ್ವತ್ರಿಕ ಚುನಾವಣೆ ನಡೆದ 100 ದಿನಗಳ ಒಳಗೆ ಎರಡನೇ ಹಂತದಲ್ಲಿ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಪುರಸಭೆ ಮತ್ತಿತರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಉದ್ದೇಶವಿದೆ. ಇದಕ್ಕೆ ಒಂದೇ ಮತದಾರರ ಪಟ್ಟಿ ಬಳಕೆಗೆ ಅವಕಾಶವಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> "ರೇಷ್ಮೆ ಕರ್ನಾಟಕ ರಾಜ್ಯದ ಪ್ರತಿಷ್ಠಿತ ಬೆಳೆಯಾಗಿದೆ. ಮೈಸೂರು ರೇಷ್ಮೆ ಸೀರೆಗಳಿಗೆ ಅತಿ ಹೆಚ್ಚು ಬೇಡಿಕೆ ಇದೆ. ಅದಕ್ಕನುಗುಣವಾಗಿ ಉತ್ಪಾದಿಸಲು ಕೇಂದ್ರ ಸರ್ಕಾರ ಬೆಳೆಗಾರರಿಗೆ ಉತ್ತೇಜನ ನೀಡಬೇಕು. ಕರ್ನಾಟಕದಿಂದ ಹೋಗಿರುವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಸಂಸದರು, ಸಚಿವರು ಈ ಬಗ್ಗೆ ಗಮನಹರಿಸಿ ಈ ಉದ್ದಿಮೆಗೆ ಪ್ರೋತ್ಸಾಹ ನೀಡಬೇಕು.
>
> –ಕೆ.ವೆಂಕಟೇಶ್, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ

> "ಮೈಸೂರಿಗೂ ರೇಷ್ಮೆಗೂ ಅವಿನಾಭಾವ ಸಂಬಂಧವಿದೆ. ವಿಜಯನಗರ ಅರಸರ ಕಾಲದಿಂದಲೂ ಮೈಸೂರಲ್ಲಿ ರೇಷ್ಮೆ ಪ್ರಚಲಿತದಲ್ಲಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ರೇಷ್ಮೆ ಬೆಳೆಯ ಪ್ರಗತಿಗೆ ಕೊಡುಗೆ ನೀಡಿದ್ದಾರೆ. ಇಲ್ಲಿನ ಭೌಗೋಳಿಕ ವಿಶೇಷಗಳಲ್ಲಿ ರೇಷ್ಮೆ ಪ್ರಮುಖವಾಗಿರುವುದರಿಂದ ಈ ಉದ್ದಿಮೆಯ ಬೆಳವಣಿಗೆಗೆ ಕೇಂದ್ರದಲ್ಲಿ ನಾವು ಧ್ವನಿ ಎತ್ತುತ್ತೇವೆ.
>
> –ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು

ದೆಹಲಿಗೆ ಹೋಗುತ್ತೇನೆಂದು ಕನಸಲ್ಲೂ ನೆನೆಸಿರಲಿಲ್ಲ

ಮೈಸೂರು, ಸೆ. 20(ಆರ್‌ಕೆ)– ದೆಹಲಿಗೆ ಹೋಗುತ್ತೇನೆಂದು ನಾನು ಕನಸಿನಲ್ಲೂ ನೆನೆಸಿರಲಿಲ್ಲ ಎಂದು ಕೇಂದ್ರದ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮಾರ್ಮಿಕವಾಗಿ ನುಡಿದಿದ್ದಾರೆ.

ಮೈಸೂರಲ್ಲಿ ಇಂದು ಆಯೋಜಿಸಿದ್ದ ಕೇಂದ್ರ ರೇಷ್ಮೆ ಮಂಡಳಿಯ ಅಮೃತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ರೇಷ್ಮೆ, ಉದ್ದಿಮೆ ಕುರಿತು ಮಾತನಾಡುವಾಗ ಭಾಷಣದ ಮಧ್ಯೆ ನಾನೂ ರೈತಾಪಿ ಕುಟುಂಬದಿಂದ ಬಂದವನು. ದೇವರ ಕೃಪೆ, ತಂದೆ–ತಾಯಿ ಆಶೀರ್ವಾದ, ನಾಡಿನ ಜನರ ಬೆಂಬಲದೊಂದಿಗೆ ರಾಜಕೀಯದಲ್ಲಿ ಬೆಳೆದ ನಾನು ರಾಜ್ಯದ ಜನರ ಸೇವೆ ಮಾಡುತ್ತಿದ್ದೆ ಎಂದರು. ನಾನು ಯಾವುದೇ ಸ್ಥಾನಕ್ಕೇರಿದರೂ ಅದೃಷ್ಟದಿಂದಾಗಿ ಆಕಸ್ಮಿಕವಾಗಿ ಅಧಿಕಾರ ಸಿಕ್ಕಿದೆ. ಈಗಲೂ ನಾನು ದೆಹಲಿಗೆ ಹೋಗುತ್ತೇನೆಂದು ಕನಸಿನಲ್ಲೂ ನೆನೆಸಿರಲಿಲ್ಲ. ಅದೂ ಆಕಸ್ಮಿಕವಾಗಿಯೇ ಅವಕಾಶ ಸಿಕ್ಕಿದೆ ಎಂದು ಕೇಂದ್ರ ಸಚಿವ ಸ್ಥಾನ ಲಭಿಸಿದ ಬಗ್ಗೆ ತಿಳಿಸಿದರು.

ರೇಷ್ಮೆ ಕೃಷಿಗೆ ಉತ್ತೇಜನ; ಅನ್ನದಾತನ ನೆರವಿಗೆ ಒತ್ತು ನೀಡುತ್ತೇವೆ...

ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವ ಉದ್ಘಾಟಿಸಿದ ಕೇಂದ್ರದ ಭಾರೀ ಕೈಗಾರಿಕಾ ಸಚಿವ ಕುಮಾರಸ್ವಾಮಿ ಭರವಸೆ

ಮೈಸೂರು, ಸೆ. 20(ಆರ್‌ಕೆ)–ರೇಷ್ಮೆ ಕೃಷಿ ಮತ್ತು ಉದ್ದಿಮೆಗೆ ಉತ್ತೇಜನ ನೀಡಿ, ಅನ್ನದಾತನ ಬದುಕು ಹಸನು ಮಾಡಲು ಕೇಂದ್ರ ಸರ್ಕಾರ ಒತ್ತು ನೀಡಲಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಸಚಿವ ಸಂಪುಟದಲ್ಲಿ ಕೃಷಿ ವಲಯಕ್ಕೆ 1,52,000 ಕೋಟಿ ರೂ.ಗಳ ಯೋಜನೆ ನೀಡಿರುವುದು ರೈತರ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡುತ್ತಿರುವುದಕ್ಕೆ ನಿದರ್ಶನವಾಗಿದೆ ಎಂದರು.

ಹಳೇ ಮೈಸೂರು ಭಾಗವೂ ಸೇರಿದಂತೆ ರಾಜ್ಯದಲ್ಲಿ ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ ಸೇರಿದಂತೆ ಹಲವು ಕ್ಷೇತ್ರಗಳಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸೇರಿದಂತೆ ಮೈಸೂರು ಅರಸರು ನೀಡಿರುವ ಕೊಡುಗೆಯನ್ನು ಸ್ಮರಿಸಿದ ಅವರು, 1949ರಲ್ಲಿ ಸಿಲ್ಕ್ ಬೋರ್ಡ್ ಸ್ಥಾಪಿಸಿ ರೇಷ್ಮೆ ಕೃಷಿ ಸಂಶೋಧನೆ, ಅಭಿವೃದ್ಧಿಗೆ ಕಾರಣರಾದ ಶ್ಯಾಂ ಪ್ರಸಾದ್ ಮುಖರ್ಜಿ ಅವರ ಕೊಡುಗೆಯನ್ನೂ ಮರೆಯುವಂತಿಲ್ಲ ಎಂದರು.

ಈ ಹಿಂದೆ ರೇಷ್ಮೆ ಕೃಷಿ ಬಗ್ಗೆ ರೈತರಿಗೆ ಅಷ್ಟು ತಿಳುವಳಿಕೆ ಇರಲಿಲ್ಲ. ಇದೀಗ ಸಂಶೋಧನೆ, ತಂತ್ರಜ್ಞಾನ ಅಭಿವೃದ್ಧಿಯಾಗುತ್ತಿದ್ದಂತೆಯೇ 41 ಲಕ್ಷ ರೈತರು ಈ ಕೃಷಿ ಅಳವಡಿಸಿಕೊಂಡಿದ್ದು, ಪ್ರತೀ ವರ್ಷ 2,800 ಕೋಟಿ ರೂ. ಮೊತ್ತದ ರೇಷ್ಮೆ ರಫ್ತಾಗುತ್ತಿದೆ ಎಂದರೆ, ಈ ಉದ್ದಿಮೆ ರೈತರಿಗೆ ಬೆನ್ನೆಲುಬಾಗಿದೆ ಎಂಬುದರ ದ್ಯೋತಕ ಎಂದು ಕುಮಾರಸ್ವಾಮಿ ನುಡಿದರು.

ನಮ್ಮ ದೇಶದ ರೈತರು ಚೈನಾ ಸಿಲ್ಕ್ ಅನ್ನು ಹಿಂದೆ ದೂಡಿ ಗುಣಮಟ್ಟದ ರೇಷ್ಮೆ ಬೆಳೆಯುತ್ತಿದ್ದಾರೆ. ಅದರಲ್ಲೂ ಕರ್ನಾಟಕದ ಮೈಸೂರು ರೇಷ್ಮೆಗೆ ಹೆಚ್ಚು ಬೇಡಿಕೆ ಇದೆ, ಬೆಲೆಯೂ ಬಂದಿದೆ. ಕೇಂದ್ರ ರೇಷ್ಮೆ ಉದ್ದಿಮೆಗೆ ಉತ್ತೇಜನ ನೀಡುವ ಮೂಲಕ ರೈತರ ಅಭಿವೃದ್ಧಿಗೆ ಪೂರಕ ಬೆಂಬಲ ನೀಡಲಿದೆ ಎಂದು ಇದೇ ಸಂದರ್ಭ ಪುನರುಚ್ಚರಿಸಿದರು.

ಅಚ್ಚುಕಟ್ಟು, ಅದ್ಧೂರಿ ದಸರಾ ಆಚರಣೆಗೆ ಕೈ ಜೋಡಿಸಿ

ಸ್ಥಳೀಯ ಅಧಿಕಾರಿ ವರ್ಗಕ್ಕೆ ಉಸ್ತುವಾರಿ ಸಚಿವ ಮಹದೇವಪ್ಪ, ಕನ್ನಡ–ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸೂಚನೆ



ದಸರಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಮೈಸೂರು ದಸರಾ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು, ಸೆ.20(ಎಂಕೆ)– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಎಲ್ಲಾ ಬಗೆಯ ಪೂರ್ವ ಸಿದ್ಧತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಅಚ್ಚುಕಟ್ಟು ಹಾಗೂ ಅದ್ಧೂರಿ ದಸರಾ ಆಚರಣೆಗೆ ಕೈಜೋಡಿಸುವಂತೆ ಅಧಿಕಾರಿಗಳಿಗೆ ಸಚಿವದ್ವಯರು ಸೂಚಿಸಿದರು.

ಜಿಪಂ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಜಂಟಿ ನೇತೃತ್ವದಲ್ಲಿ ನಡೆದ ದಸರಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ದಸರಾದ ಪ್ರತಿಯೊಂದು ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಬೇಕು. ದಸರಾ ವೈಭವ, ಪ್ರಜಾ ಪ್ರಭುತ್ವ ಏಕತೆ, ಸಮಾನತೆ, ಸಂವಿಧಾನದ ವಿಚಾರಧಾರೆಗಳನ್ನು ತಿಳಿಸುವುದರ ಜೊತೆಗೆ ಸರ್ಕಾರದ ಕಾರ್ಯಕ್ರಮಗಳ ಪ್ರಚಾರವೂ ಆಗುವಂತೆ ಜವಾಬ್ದಾರಿ ನಿರ್ವಹಿಸುವಂತೆ ಸೂಚಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, ರಾಜ್ಯದಲ್ಲಿನ ಬರ ಪರಿಸ್ಥಿತಿಯಿಂದಾಗಿ ಕಳೆದ ವರ್ಷ ದಸರಾ ಹಬ್ಬವನ್ನು ಸರಳ ಹಾಗೂ ಸಾಂಪ್ರದಾಯಿಕವಾಗಿ ಆಚರಿಸಲಾಗಿತ್ತು. ಆದರೆ, ಈ ವರ್ಷ ಉತ್ತಮ ಮುಂಗಾರು ಮಳೆ ಆಗಿರುವುದರಿಂದ ಅದ್ಧೂರಿಯಾಗಿ ದಸರಾ ಆಚರಣೆಯಾಗಬೇಕು. ಈಗಾಗಲೇ ನೇಮಕಗೊಂಡಿರುವ 19 ದಸರಾ ಉಪಸಮಿತಿಗಳು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಅಲ್ಲದೆ ಈ ಬಾರಿ ದಸರಾದಲ್ಲಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ಬಿಂಬಿಸುವ ಕಲಾಕೃತಿಗಳು ಹಾಗೂ ಸರ್ಕಾರದ ಅಭಿವೃದ್ಧಿ ಯೋಜನೆಗಳು ಹಾಗೂ ಗ್ಯಾರಂಟಿ ಯೋಜನೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸ್ತಬ್ಧ ಚಿತ್ರಗಳು ಪ್ರದರ್ಶನಗೊಳ್ಳಬೇಕು ಎಂದು ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಮಾತನಾಡಿ, ಕಳೆದ ಬಾರಿ ಆಗಿರುವ ನ್ಯೂನತೆಗಳನ್ನು ಈ ಬಾರಿ ಸರಿಪಡಿಸಿಕೊಂಡು ಯಾವುದೇ ಅಡಚಣೆ ಹಾಗೂ ತೊಂದರೆ ಉಂಟಾಗದಂತೆ ಅಚ್ಚುಕಟ್ಟಾಗಿ ದಸರಾ ಆಚರಣೆ ಮಾಡಬೇಕು. ದಸರಾದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮದ ಬಗ್ಗೆ ಎಚ್ಚರಿಕೆ ವಹಿಸಿ, ದಸರಾ ವೀಕ್ಷಿಸಲು ಬಂದಂತಹ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಯಾವುದೇ ರೀತಿಯ ನಿರಾಸೆಯಾಗದಂತೆ ನೋಡಿಕೊಳ್ಳಬೇಕು. ಉಪ ಸಮಿತಿಯಲ್ಲಿನ ಅಧಿಕಾರಿಗಳು ಆಸಕ್ತಿಯಿಂದ ಕೆಲಸ ನಿರ್ವಹಿಸಿ ದಸರಾ ಮಹೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು. ಅಲ್ಲದೆ ಎಲ್ಲಾ ದಸರಾ ಉಪ ಸಮಿತಿಗಳ ಸಿದ್ದತೆ ಕುರಿತು ಮಾಹಿತಿ ಪಡೆದುಕೊಂಡರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಲೋಕಸಭಾ ಸದಸ್ಯ ಸುನೀಲ್ ಬೋಸ್, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್‌ಪಿ ವಿಷ್ಣುವರ್ಧನ್, ಅಪರ ಡಿಸಿ ಪಿ.ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ, ಜಿಪಂ ಸಿಇಓ ಕೆ.ಎಂ. ಗಾಯತ್ರಿ, 19 ದಸರಾ ಉಪ ಸಮಿತಿಯ ಕಾರ್ಯದರ್ಶಿಗಳು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಯುವ ದಸರಾ ಸ್ಥಳಾಂತರ...!

ಮೈಸೂರು ದಸರಾ ಮೆಗಾ ಇವೆಂಟ್ ಯುವ ದಸರಾ ಸ್ಥಳಾಂತರಕ್ಕೆ ಚಿಂತನೆ ನಡೆದಿದೆ ಪ್ರತೀ ವರ್ಷ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಯುವ ದಸರಾ ಸಾಂಸ್ಕೃತಿಕ, ಸಂಗೀತ ಕಾರ್ಯಕ್ರಮವನ್ನು ಬೇರೆ ಸ್ಥಳದಲ್ಲಿ ನಡೆಸಲು ಚಿಂತನೆ ನಡೆಸಲಾಗಿದ್ದು, ಸ್ಥಳ ಗುರ್ತಿಸುವ ಕಾರ್ಯ ನಡೆಯುತ್ತಿದೆ. ಒಂದೆರಡು ದಿನಗಳಲ್ಲಿ ಸ್ಥಳ ಅಂತಿಮಗೊಳಿಸಲಾಗುವುದು.

–ಎನ್.ವಿಷ್ಣುವರ್ಧನ್, ವಿಶೇಷಾಧಿಕಾರಿ, ಯುವ ದಸರಾ ಉಪ ಸಮಿತಿ

24ಕ್ಕೆ ಯುವ ಸಂಭ್ರಮ...

ಮೈಸೂರು ವಿವಿ ಬಯಲು ರಂಗಮಂದಿರದಲ್ಲಿ ದಸರಾ ಮಹೋತ್ಸವದ ಮುನ್ನುಡಿ ಯುವ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮ ಸೆ.24ರ ಸಂಜೆ ಉದ್ಘಾಟನೆಯಾಗಲಿದೆ. ಈಗಾಗಲೇ 350 ಕಾಲೇಜು ತಂಡಗಳ ಪಟ್ಟಿ ತಯಾರಿಸಲಾಗಿದ್ದು, ಅಂತಿಮ ಪಟ್ಟಿ ಸಿದ್ದಪಡಿಸಲಾಗುತ್ತಿದೆ. ಆಯಾ ಕಾಲೇಜು ಪ್ರಾಂಶುಪಾಲರೊಂದಿಗೆ ಚರ್ಚಿಸಲಾಗುತ್ತಿದೆ ಎಂದು ದಸರಾ ಯುವ ಸಂಭ್ರಮ ಉಪ ಸಮಿತಿ ವಿಶೇಷಾಧಿಕಾರಿಯೂ ಆದ ಎಸ್‌ಪಿ ಎನ್.ವಿಷ್ಣುವರ್ಧನ್ ಸಭೆಯಲ್ಲಿ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಸೊಳ್ಳೆ ಮತ್ತು ಇರುವೆ ಪ್ರೀತಿಸಿ ಮದುವೆ ಆಗಿದ್ದರು.
ಮೊದಲ ರಾತ್ರಿ ಸೊಳ್ಳೆ ಹೊರಗಡೆ ಕುಳಿತಿತ್ತು.
ಸೊಳ್ಳೆಯ ಗೆಳೆಯರು ಬಂದು ಹೊರಗಡೆ ಯಾಕೆ ಕೂತಿದ್ದೀಯಾ ಅಂತ ಕೇಳಿದ್ರು...
ಸೊಳ್ಳೆ : ಅವಳಜ್ಜಿ ಗುಡ್‌ನೈಟ್ ಹಾಕೊಂಡು ಮಲಗವಳೇ...

ಮೈಸೂರು ಮಿತ್ರ

ಶನಿವಾರ, 21 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಿಮ್ಮ ವಿಚಾರಗಳನ್ನು ಎತ್ತರಿಸಬೇಕೇ ಹೊರತು ದನಿಯನ್ನಲ್ಲ. ಮಳೆ ನೀರಿನಿಂದ ಮರಗಳು ಬೆಳೆಯುತ್ತವೆಯೇ ಹೊರತು ಗುಡುಗು ಸಿಡಿಲಿನಿಂದಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತತ್ವದಲ್ಲಿ ಸತ್ವ ಹುಡುಕು, ವ್ಯಥೆಯಲ್ಲಿ ಕಥೆ ಹುಡುಕು.

ನಿಮ್ಮ ಪತ್ರಗಳು

ಡೂಫ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ ಶುಚಿತ್ವವಿಲ್ಲದ ಶೌಚಾಲಯ



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಸದಾ ಜನಸಂದಣಿಯಿಂದ ಕೂಡಿರುವ ದೇವರಾಜ ಮಾರುಕಟ್ಟೆ ಸಮೀಪ ಸಂತೇಪೇಟೆಯಲ್ಲಿರುವ ಡೂಫ್ಲಿನ್ ಕಾಂಪ್ಲೆಕ್ಸ್‌ನಲ್ಲಿ ಶಿಥಿಲಾವಸ್ಥೆಯಲ್ಲಿರುವ ತೀರಾ ಹಳೆಯದಾದ ಮೈಸೂರು ಮಹಾನಗರ ಪಾಲಿಕೆ ನಿರ್ವಹಣೆ ಮಾಡುತ್ತಿರುವ ಪಾವತಿ ಮಾಡಿ ಉಪಯೋಗಿಸುವ ಶೌಚಾಲಯವಿರುವುದು ಸರಿಯಷ್ಟೆ. ಈ ಕಾಂಪ್ಲೆಕ್ಸ್‌ನಲ್ಲಿ ಹತ್ತಾರು ದಿನಸಿ ಅಂಗಡಿಗಳಿವೆ. ಇಲ್ಲಿಗೆ ನಿತ್ಯ ನೂರಾರು ಸಂಖ್ಯೆಯಲ್ಲಿ ಗ್ರಾಹಕರು ಬರುತ್ತಾರೆ. ಈ ಶೌಚಾಲಯದಲ್ಲಿ ಮಲಮೂತ್ರ ವಿಸರ್ಜನೆ ಮಾಡುವ ಬೇಸಿನ್‌ಗಳು ತೂತು ಬಿದ್ದು ಬಾಗಿಲುಗಳು ಕಿತ್ತು ಹೋಗಿದೆ. ಕಿತ್ತು ಬಿದ್ದಿರುವ ನಲ್ಲಿಗಳಲ್ಲಿ ನಿರಂತರವಾಗಿ ನೀರು ಸೋರುತ್ತಿದೆ ಅಸಹನೀಯ ವಾಸನೆಯಿಂದ ಗಬ್ಬೆದ್ದು ನಾರುತ್ತಿದೆ. ಅನಿವಾರ್ಯವಾಗಿ ಜನರು ಹಣ ಪಾವತಿ ಮಾಡಿ ಮೂಗು ಮುಚ್ಚಿಕೊಂಡು ಪ್ರಕೃತಿ ಕರೆ ಮುಗಿಸಿಕೊಂಡು ಬರುತ್ತಾರೆ. ಪಾಲಿಕೆ ಸಿಬ್ಬಂದಿ ನಿತ್ಯ ಮಾರುಕಟ್ಟೆಯ ಸುತ್ತಮುತ್ತ ಪ್ಲಾಸ್ಟಿಕ್ ತಪಾಸಣೆ ಹಾಗೂ ಇನ್ನಿತರ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಆದರೆ ಈ ಕಾಂಪ್ಲೆಕ್ಸ್ ಒಳಗೆ ಇರುವ ಅವ್ಯವಸ್ಥೆ ಹಾಗೂ ಶುಚಿತ್ವವಿಲ್ಲದ ಶೌಚಾಲಯದ ಬಗ್ಗೆ ಗಮನಹರಿಸದೆ ಇರುವುದು ವಿಷಾದನೀಯ. ಈ ಕೂಡಲೇ ಪಾಲಿಕೆ ಆಯುಕ್ತರು ಸೂಕ್ತ ಕ್ರಮ ವಹಿಸಿ ಈ ಶೌಚಾಲಯವನ್ನು ದುರಸ್ತಿಗೊಳಿಸಿ ಇಲ್ಲಿಗೆ ಬರುವ ಜನರಿಗೆ ಉತ್ತಮ ಸೌಲಭ್ಯ ಕಲ್ಪಿಸಿಕೊಡಬೇಕಾಗಿ ಮನವಿ.

–ಡಿ. ರಘು, ಟೈಲರ್, ಶ್ರೀ ಟಾರ್ಪಾಲಿನ್ಸ್, ಮೈಸೂರು.

ಚಿಕ್ಕಗಡಿಯಾರವನ್ನು ಸರಿಪಡಿಸಿ

ಮಾನ್ಯರೆ,



ಸಾಂಸ್ಕೃತಿಕ ನಗರಿ ಎಂದೆ ಕರೆಯಲ್ಪಡುವ ಮೈಸೂರಿನ ಕೇಂದ್ರ ಬಿಂದು ದೇವರಾಜ ಮಾರುಕಟ್ಟೆ ಎದುರು ಇರುವ ಚಿಕ್ಕ ಗಡಿಯಾರ ಯಾರಿಗೆ ತಾನೇ ಗೊತ್ತಿಲ್ಲ. ಚಿಕ್ಕ ಗಡಿಯಾರವನ್ನು ಮೈಸೂರಿನ ಒಂದು ಐತಿಹಾಸಿಕ ಲ್ಯಾಂಡ್ ಮಾರ್ಕ್ ಎಂದರೆ ತಪ್ಪಾಲ್ಲ. ಚಿಕ್ಕ ಗಡಿಯಾರದ ಸುತ್ತಲೂ ವಾಣಿಜ್ಯ ಮಳಿಗೆಗಳು, ವ್ಯಾಪಾರಿಗಳು ಮತ್ತು ಗಡಿಯಾರದ ಎದುರಿಗೆ ಸಯ್ಯಾಜಿರಾವ್ ಮುಖ್ಯರಸ್ತೆ ಇರುವುದರಿಂದ ದಿನವಿಡಿ ಜನಸಂದಣಿ ಇರುತ್ತದೆ. ಪ್ರತಿ ಸೆಕೆಂಡಿಗೂ ಅಲ್ಲಿನ ಜನರ ಗಮನ ತನ್ನತ್ತ ಸೆಳೆಯುವ ಚಿಕ್ಕಗಡಿಯಾರ ಸುಮಾರು ಒಂದು ವರ್ಷದಿಂದಲೂ ದುರಸ್ತಿ ಇಲ್ಲದೆ ಸೊರಗಿದೆ. ನಾಡ ಹಬ್ಬ ಮೈಸೂರು ದಸರಾ ಹತ್ತಿರವಾಗುತ್ತಿದ್ದು ಹೊರರಾಜ್ಯದಿಂದ ಲಕ್ಷಾಂತರ ಪ್ರವಾಸಿಗರ ಆಗಮಿಸುವುದುಂಟು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಚಿಕ್ಕಗಡಿಯಾರವನ್ನು ದುರಸ್ತಿಗೊಳಿಸಬೇಕೆಂದು ಈ ಮೂಲಕ ಮನವಿ.

–ಕೆ. ನಾಗಮಣಿ, ವಕೀಲರು, ಜೆಪಿ ನಗರ ಮೈಸೂರು

ಉದ್ಯಾನವನದಲ್ಲಿ ಒಣಗಿರುವ ಮರವನ್ನು ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ವಿಜಯನಗರ ಒಂದನೇ ಹಂತದ ಕಾಳಿದಾಸ ರಸ್ತೆಯಲ್ಲಿರುವ ಮುಡಾ ಕಾಂಪ್ಲೆಕ್ಸ್ ಪಕ್ಕದ ಉದ್ಯಾನವನದಲ್ಲಿ ಗೆದ್ದಲು ಹಿಡಿಯುತ್ತಿರುವ ಒಣಗಿದ ಮರವೊಂದಿದೆ. ಇದು ಇನ್ನೊಂದು ಮರದ ಆಸರೆಯಲ್ಲಿ ನಿಂತಿರುವಂತೆ ಕಾಣುತ್ತಿದ್ದು, ಯಾವಾಗಲಾದರೂ ಬೀಳುವ ಸ್ಥಿತಿಯಲ್ಲಿದೆ. ಸದರಿ ಉದ್ಯಾನವನದಲ್ಲಿ ಹಿರಿಯ ನಾಗರೀಕರೂ ಸೇರಿದಂತೆ ಅನೇಕ ಮಂದಿ ವಾಕಿಂಗ್‌ಗಾಗಿ ಬರುತ್ತಾರೆ. ಆದುದರಿಂದ ಮುಂದೆ ಇದರಿಂದ ಆಗಬಹುದಾದ ಅಪಾಯವನ್ನು ತಡೆಗಟ್ಟುವ ಸಲುವಾಗಿ ಸಂಬಂಧಪಟ್ಟವರು ಸದರಿ ಮರವನ್ನು ತೆರವುಗೊಳಿಸಲು ಮನವಿ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

ಭಾರತ್ ಅಕ್ಕಿ ಎಲ್ಲಾ ದಿನಸಿ ಅಂಗಡಿಗಳಲ್ಲೂ ಕಲ್ಪಿಸುವಂತೆ ಮನವಿ

ಮಾನ್ಯರೆ,

ಕೇಂದ್ರ ಸರ್ಕಾರದ ಯೋಜನೆಯಾದ ಭಾರತ್ ಅಕ್ಕಿ ದೇಶದ ಎಲ್ಲಾ ನಾಗರಿಕರಿಗೆ ಪ್ರತಿ ಕೆಜಿಗೆ ರೂ.29 ರಂತೆ 5 ಕೆಜಿ ಹಾಗೂ 10 ಕೆಜಿ ಚೀಲಗಳಲ್ಲಿ ಈ ಹಿಂದೆ ವಿತರಿಸಲಾಗುತ್ತಿದ್ದುದನ್ನು ಹೊಣೆಗೇಡಿ, ಬೇಜವಾಬ್ದಾರಿ ಕೇಂದ್ರ ಸರ್ಕಾರ ಕುತಂತ್ರದಿಂದ ನಿಲ್ಲಿಸಿದ್ದು, ಇದು ಖಂಡನೀಯ. ಈ ಬಗ್ಗೆ ಕೇಂದ್ರ ಅರ್ಥ ಸಚಿವೆ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹಾಗೂ ವಿಪಕ್ಷ ನಾಯಕ ಆರ್.ಅಶೋಕ್ ಇವರೆಲ್ಲರಿಗೆ ಅಸಂಖ್ಯಾ ಪತ್ರಗಳನ್ನು ಬರೆದು ಒತ್ತಾಯಿಸಿದ್ದರೂ ಇವರುಗಳು ಭಾರತ್ ಅಕ್ಕಿ ಖಾಯಂ ಆಗಿ ವಿತರಣೆ ಮಾಡಲು ಕ್ರಮ ಕೈಗೊಂಡಿಲ್ಲ. ಕೇಂದ್ರ ಸರ್ಕಾರ ಎಲ್ಲಾ ನಾಗರಿಕರಿಗೆ ಸುಲಭ ದರದಲ್ಲಿ ಭಾರತ್ ಅಕ್ಕಿ ಎಲ್ಲಾ ದಿನಸಿ ಅಂಗಡಿಗಳಲ್ಲೂ ದೊರಕುವಂತೆ ಮಾಡಬೇಕೆಂದು ಮನವಿ.

–ನೊಂದ ಅಸಂಖ್ಯಾ ನಾಗರಿಕರು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ


ಒಂಟಿತನದೆಡೆಗೆ ತುಡಿವ ಜೀವನ !!

ನಮ್ಮ ಜೀವನ ಕ್ರಮ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಒಂದು ರೀತಿ ಯಾಂತ್ರಿಕ ಜೀವನವೂ ಆಗುತ್ತಿದೆ. ಜೀವನದ ಉದ್ದೇಶ ಏನು ಎಂದರೆ ಹೇಳಲಾಗದ ಪರಿಸ್ಥಿತಿ. ಕೇವಲ ದುಡಿಯುವುದು, ಖರ್ಚು ಮಾಡುವುದು, ಇದನ್ನೇ 'ಎಂಜಾಯ್‌ಮೆಂಟ್' ಎಂದು ಭಾವಿಸುವುದು ಇಷ್ಟೇ ಜೀವನವಾಗಿದೆ. ಹಾಗೆಯೇ ನಮ್ಮ ಕುಟುಂಬದ ಕಲ್ಪನೆಯೂ ಮಿತಿಗೊಳ್ಳುತ್ತಿದೆ. ಪತಿ, ಪತ್ನಿ ಹಾಗೂ ಒಂದೇ ಮಗು. ಇದೇ ನಮ್ಮ ದೊಡ್ಡದಾದ ಕಲ್ಪನೆ. ನಮ್ಮ ಜೀವನ ವೈಭವಯುತವಾಗಿರಬೇಕು, ಏನು ಬೇಕೋ ಅದೆಲ್ಲಾ ಕ್ಷಣಾರ್ಧದಲ್ಲಿ ನಮ್ಮ ಮುಂದೆ ಅಣಿಯಾಗಬೇಕು. ಅದು ಎಷ್ಟು ವೆಚ್ಚವಾದರೂ ಸರಿಯೇ. ಅದು ಅಗತ್ಯವೋ ಅಲ್ಲವೋ ಎಂಬುದನ್ನೂ ಯೋಚಿಸದೆ ಅವುಗಳನ್ನು ಕೊಳ್ಳುವುದು, ಕೆಲ ದಿನಗಳ ನಂತರ ಅದನ್ನು ಉಪಯೋಗಿಸದೆ ಮೂಲೆ ಗುಂಪು ಮಾಡುವುದು, ನಂತರ ಮತ್ತೊಂದು ವಸ್ತು ಕೊಳ್ಳುವುದು. ಇದೇ ಜೀವನ.

ಈಗಂತೂ ಈ ಆನ್‌ಲೈನ್‌ನಲ್ಲಿ ಖರೀದಿಸುವ ಹಲವು ವಸ್ತುಗಳು ಸಾಕಷ್ಟು ನಮಗೆ ಉಪಯೋಗಕ್ಕೇ ಬರುವುದೇ ಇಲ್ಲ. ಆದರೆ ಮೊಬೈಲ್‌ನಲ್ಲಿ ಚಿತ್ರ ನೋಡಿ ಖರೀದಿಸುವುದು. ಆ ವಸ್ತು ಕೈಸೇರಿದಾಗ ನೋಡಿದ ಚಿತ್ರದಲ್ಲಿ ಹೀಗಿರಲಿಲ್ಲ. ಆಯಿತು, ಅಷ್ಟೇನು ಹೆಚ್ಚು ಹಣ ಪಾವತಿಸಿಲ್ಲ. ಮತ್ತೊಂದು ಕೊಂಡರಾಯಿತು ಎಂಬ ಮನೋಭಾವ ಜಾಸ್ತಿಯಾಗುತ್ತಿದೆ. ಆನ್‌ಲೈನ್ ವ್ಯವಹಾರ ಹೇಗಿದೆ ಎಂದರೆ ನೀವು ಕಂಪನಿಯ ಯಾವುದಾದರೂ ಒಂದು ವಸ್ತುವನ್ನು ಶೋಧಿಸಿದರೆ, ಕ್ಷಣ ಮಾತ್ರದಲ್ಲಿ ಹಲವು ಕಂಪನಿಗಳ ಅದೇ ರೀತಿಯ ಹಲವು ಉತ್ಪನ್ನಗಳು ಧುತ್ತನೆ ನಮ್ಮ ಮುಂದೆ ರಾರಾಜಿಸುತ್ತವೆ. ಅದರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೋ ತಿಳಿಯದು. ಒಂದಕ್ಕೂ ಮತ್ತೊಂದಕ್ಕೂ ಅಲ್ಪಸ್ವಲ್ಪ ಭಿನ್ನ ಅಷ್ಟೇ. ಕೆಲವರ ಮನೆಗೆ ಈ ರೀತಿಯ ಆನ್‌ಲೈನ್ ಉತ್ಪನ್ನಗಳು ಪ್ರತೀ ದಿನ ಬರುತ್ತವೆ. ಅವುಗಳಲ್ಲಿ ಕಾಲು ಭಾಗಕ್ಕಿಂತ ಹೆಚ್ಚಿನ ವಸ್ತುಗಳು ನಮಗೆ ಬೇಡವಾದಂತಹವು. ಇಂತಹುದಕ್ಕೆ ಖರ್ಚು ಮಾಡಲು ನಾವು ಹಿಂದೇಟು ಹಾಕುವುದಿಲ್ಲ. ಆದರೆ ಯಾವುದಾದರೂ ಧಾರ್ಮಿಕ, ಸಾಮಾಜಿಕ ಕಾರ್ಯಕ್ಕೆ ಹಣ ನೀಡಬೇಕೆಂದರೆ ಮನಸ್ಸು ಒಪ್ಪುವುದಿಲ್ಲ. ಮೊಬೈಲ್ ನೋಡಲು ಗಂಟೆಗಟ್ಟಲೆ ವಿನಿಯೋಗಿಸುವ ನಾವು ಅರ್ಧ ಗಂಟೆ ದೇವಸ್ಥಾನಕ್ಕೆ ಹೋಗಲು ಸಮಯವಿಲ್ಲ ಎನ್ನುತ್ತೇವೆ. ಹೊರಗಿನಿಂದ ತರಿಸಿ ತಿನ್ನುವ ತಿಂಡಿ ಪದಾರ್ಥಗಳಲ್ಲಿ ಅರ್ಧಕ್ಕಿಂತ ಹೆಚ್ಚನ್ನು ವ್ಯರ್ಥಗೊಳಿಸುವ ನಾವು ಅದನ್ನು ಹಸಿದವರಿಗೆ ನೀಡುವ ಮನಸ್ಸು ಮಾಡುವುದಿಲ್ಲ.

ಹಿಂದೆ ಹೀಗಿರಲಿಲ್ಲ. ನಮ್ಮದು ಸಮಾಜಮುಖಿ ಜೀವನವಾಗಿತ್ತು. ಊರಿನಲ್ಲಿ ನಡೆಯುವ ರಥೋತ್ಸವಗಳು, ಉತ್ಸವಗಳು, ಹಬ್ಬಗಳು ನಮಗೆ ಖುಷಿ ನೀಡುತ್ತಿದ್ದವು. ಇಂತಹ ಉತ್ಸವಗಳಲ್ಲಿ ನಾವು ತನು–ಮನ–ಧನ ವಿನಿಯೋಗದೊಂದಿಗೆ ಪಾಲ್ಗೊಳ್ಳುತ್ತಿದ್ದೆವು. ಊರ ಉತ್ಸವ ಯಶಸ್ವಿಯಾದರೆ ನಮ್ಮ ಮನೆಯ ಸಮಾರಂಭ ಯಶಸ್ವಿಯಾದಂತೆ ಭಾವಿಸುತ್ತಿದ್ದೆವು. ಒಂದು ಉತ್ಸವ ಮುಗಿದರೆ, ಮತ್ತೆ ಯಾವ ಉತ್ಸವ, ಹಬ್ಬ ಬರುತ್ತದೆ ಎಂದು ಕ್ಯಾಲೆಂಡರ್‌ನಲ್ಲಿ ಕುತೂಹಲದಿಂದ ಹುಡುಕುತ್ತಿದ್ದೆವು. ಹಬ್ಬಕ್ಕೆ, ಊರ ಉತ್ಸವಕ್ಕೆ ಹಲವು ದಿನಗಳ ಸಿದ್ಧತೆ ನಡೆಯುತ್ತಿತ್ತು. ಆದರೆ ಇಂದು ಅಂತಹ ಯಾವ ಉತ್ಸಾಹವೂ ನಮ್ಮಲ್ಲಿ ಉಳಿದಿಲ್ಲ. ನಾವು ಕೆಲಸ ಕಾರ್ಯಗಳಿಗೆಂದು ಪಟ್ಟಣ ಸೇರಿದ ನಂತರ ನಮ್ಮ ಮೂಲ ನೆಲೆ ಗ್ರಾಮಗಳನ್ನೇ ಮರೆತುಹೋದೆವು. ಊರಿನಲ್ಲಿ ನಾವು ಹಿಂದೆ ಉತ್ಸಾಹದಿಂದ ಭಾಗವಹಿಸುತ್ತಿದ್ದ ಉತ್ಸವ, ಈಗ ಮತ್ತೆ ಬರುತ್ತಿದೆ ಎಂದರೆ ಅಲ್ಲಿಗೆ ಹೋಗುವ ಮನಸ್ಸೇ ಇಲ್ಲ. ಇದಕ್ಕೆ ಹೇಳುವ ಕಾರಣ ನಮಗೆ ಸಮಯವಿಲ್ಲ, ಮಕ್ಕಳಿಗೆ ಶಾಲೆ ಇದೆ ಇತ್ಯಾದಿ. ನಮಗೂ ರಜೆ ಇದೆ, ಮಕ್ಕಳಿಗೂ ರಜೆ ಇದೆ ಎಂದಾಗಲೂ ಹೋಗದಿರಲು ಕಾರಣ ಹುಡುಕುತ್ತೇವೆ. ಮಕ್ಕಳಿಗೆ ವಾರ್ಷಿಕ, ಅರೆ ವಾರ್ಷಿಕ ರಜೆ ಬಂದಾಗಲೂ ಅವರಿಗೆ ಊರಿನ ಮುಖ ತೋರಲ್ಲ. ಮಕ್ಕಳಿಗೆ ಹಳ್ಳಿಯ ವಾತಾವರಣ ಇಷ್ಟವಾಗುವುದಿಲ್ಲ ಎಂದು ನಾವೇ ತೀರ್ಮಾನಿಸಿದ್ದೇವೆ. ಕಾಲ ಕ್ರಮೇಣ ಮಕ್ಕಳು ಅಲ್ಲಿಗೆ ಹೋಗುವ ಉತ್ಸಾಹವನ್ನೇ ತೋರುವುದಿಲ್ಲ. ಕೊನೆಗೆ ನಮ್ಮ ಮೂಲ ಬೇರು ಕಳಚಿಹೋಗಿ, ನಗರದ ಆಡಂಭರದ ಜೀವನದ ದಾಸರಾಗಿಬಿಡುತ್ತಿದ್ದೇವೆ.

ಇದೇಕೆ ಹೀಗೆ ಬದಲಾವಣೆ? ಇದಕ್ಕೇ ನಾವು ಬದಲಾವಣೆ ಜಗದ ನಿಯಮ ಎಂದು ಹೇಳುವುದೇ? ಎಂದು ಪ್ರಶ್ನಿಸಿಕೊಳ್ಳುವಂತಾಗುತ್ತಿದೆ. ಆದರೆ ಇಲ್ಲಿ ಜಗ ಬದಲಾಗುತ್ತಿಲ್ಲ. ನಾವು, ನಮ್ಮ ಮಾನಸಿಕ ಸ್ಥಿತಿಯನ್ನು ಬದಲಿಸಿಕೊಂಡಿದ್ದೇವೆ. ಹಾಗೆ ನೋಡಿದರೆ ನಮಗೆ ಏನು ಬೇಕು, ನಾವು ಹೇಗಿರಬೇಕು ಎಂಬುದನ್ನು ನಿರ್ಧರಿಸಿಲ್ಲ. ಜೀವನ ಎಂದರೆ ದುಡಿ, ಖರ್ಚು ಮಾಡು ಎಂಬಷ್ಟಕ್ಕೆ ಸೀಮಿತವಾಗುತ್ತಿದೆ.



> "ಇಂದು ಮನೆಯಲ್ಲಿ ಮಕ್ಕಳು ಒಂಟಿಯಾಗುತ್ತಿರುವುದರಿಂದ ಅವರು ಮಾನಸಿಕ ಖಿನ್ನತೆ ಅನುಭವಿಸುತ್ತಿದ್ದಾರೆ. ಅವರು ಯಾರೊಡನೆ ಬೆರೆಯುವುದಿಲ್ಲ, ಯಾರೊಡನೆಯೂ ಮಾತನಾಡುವ ಅವಕಾಶವೂ ಇರುವುದಿಲ್ಲ. ಕೆಲಸದಿಂದ ಮರಳಿದ ತಂದೆ–ತಾಯಿ ಸುಸ್ತು ಎಂದು ಮಕ್ಕಳನ್ನು ಸಹಜ ಪ್ರೀತಿಯಿಂದ ಮಾತನಾಡಿಸಲಾಗುತ್ತಿಲ್ಲ. ಇದರಿಂದ ಮಕ್ಕಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರಿಗೆ ಮಾತೂ ಸಹ ಸ್ಪಷ್ಟವಾಗಿ ಬರುವುದಿಲ್ಲ. ಹೊಸಹೊಸ ಪದಗಳ ಪರಿಚಯವೇ ಆಗುವುದಿಲ್ಲ. ಕ್ರಮೇಣ ಅವು ಮೌನಕ್ಕೆ ಜಾರುತ್ತವೆ. ಅದನ್ನು ಸರಿಪಡಿಸುವುದು ಬಹಳ ಕಷ್ಟ. ಹಾಗೆ ನೋಡಿದರೆ ಸರ್ಕಾರಿ ಶಾಲೆಗಳಲ್ಲಿ ಮುಕ್ತ ವಾತಾವರಣದಲ್ಲಿ ಬೆಳೆಯುವ ಮಕ್ಕಳು ವಾಚಾಳಿಗಳಾಗುತ್ತಾರೆ. ಖಾಸಗಿ ಶಾಲೆಯಲ್ಲಿ ಮಾತನಾಡಲೂ ನಿರ್ಬಂಧವಿರುತ್ತದೆ. ಶಾಲೆಯವರು ನಿಗದಿಪಡಿಸಿದ ಸಮಯದಲ್ಲಿ ಮಾತ್ರ ಮಾತನಾಡಬೇಕು. ಗಟ್ಟಿಯಾಗಿ ಮಾತನಾಡುವಂತಿಲ್ಲ.

ಇದಕ್ಕೆ ಕಾರಣ ಅತ್ಯಂತ ಸ್ಪಷ್ಟ. ನಾವು ಕೂಡು ಕುಟುಂಬಗಳಿಂದ (ಜಾಯಿಂಟ್ ಫ್ಯಾಮಿಲಿ) ವಿಮುಖರಾಗುತ್ತಿರುವುದು. ಚಿಕ್ಕವರಿದ್ದಾಗ ಈ ಕುಟುಂಬ ಯೋಜನೆ ಆರಂಭವಾಯಿತು. ನಾವಿಬ್ಬರು, ನಮಗಿಬ್ಬರು ಎಂಬ ಆಕರ್ಷಕ ಘೋಷಣೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಅನೇಕ ಗೋಡೆಗಳ ಮೇಲೆ ಚಿತ್ರ ನೋಡುತ್ತಿದ್ದೆವು. ಜೊತೆಗೆ 'ಆರತಿಗೊಂದು, ಕೀರುತಿಗೊಂದು' ಘೋಷಣೆಯೂ ಆಯಿತು. ಅಲ್ಲಿಯವರೆಗೆ ಮನೆಯಲ್ಲಿ ಎಷ್ಟು ಮಕ್ಕಳು ಎಂದರೆ ಎಣಿಸಿ ಹೇಳಬೇಕಾದಂತಹ ಪರಿಸ್ಥಿತಿ ಇತ್ತು. ಕನಿಷ್ಠ ನಾಲ್ಕು ಮಕ್ಕಳು ಎಂಬಂತಿತ್ತು. ನಿಮಗೆ ಎಷ್ಟು ಮಕ್ಕಳು ಎಂದಾಗ ಮೂರೋ ನಾಲ್ಕೋ ಎಂದರೆ ಅಷ್ಟೇನಾ ಎಂದು ಹಿರಿಯರು ಮುಸುಮುಸು ನಗುತ್ತಿದ್ದರು. ಮನೆ ಎಂದರೆ ಮನೆ ತುಂಬಾ ಮಕ್ಕಳು ಇರಬೇಕು. ಅಲ್ಲಿ ಬಡತನ ಸಿರಿತನದ ವಿಚಾರವೇ ಬರುತ್ತಿರಲಿಲ್ಲ. ಸರಳ ಜೀವನ. ಜೊತೆಗೆ ಅವಶ್ಯಕತೆಯೂ ಇತಿ–ಮಿತಿಯಲ್ಲಿತ್ತು. ಅವರಿಗೆ ಆರ್ಥಿಕ ಬಿಕ್ಕಟ್ಟು ಅಷ್ಟಾಗಿ ಕಾಡುತ್ತಿರಲಿಲ್ಲ. ಏಕೆಂದರೆ ಅಂತಹ ದೊಡ್ಡ ಆಸೆಗಳೇ ಇರುತ್ತಿರಲಿಲ್ಲ. ಬೇಡದ್ದನ್ನು ಖರೀದಿಸುವ ಮನೋಭಾವವೂ ಇರಲಿಲ್ಲ. ಜೀವನ ಎಂದರೆ ಮಕ್ಕಳನ್ನು ಸಾಕಿ–ಸಲಹುವುದು. ಅವರಿಗೆ ಸೂಕ್ತ ವಿದ್ಯಾಭ್ಯಾಸ ಕೊಡಿಸುವುದು ಎಂಬಂತಿತ್ತು. ಮನೆಯಲ್ಲಿ ಮಕ್ಕಳು ಹಾಗೂ ಬಡತನ ಜಾಸ್ತಿ ಎಂದಾದಾಗ ಆ ಮಕ್ಕಳು ಊರಿನ ಆಸ್ತಿ ಎಂಬಂತೆ ಊರವರೂ ಸಹಾಯ ಮಾಡುತ್ತಿದ್ದರು. ಶಾಲೆಗೆ ಸೇರಿಸಲು ಹಣ ಬೇಕಾಗಿರಲಿಲ್ಲ. ಉಚಿತ ಶಾಲೆಗಳಿದ್ದವು. ಪಠ್ಯಗಳು, ಹಿಂದೆ ತರಗತಿಯಲ್ಲಿ ಓದಿ ಮುಂದಿನ ತರಗತಿಗೆ ಪದೋನ್ನತಿಗೊಂಡ ಮಕ್ಕಳ ಪುಸ್ತಕ ಹಸ್ತಾಂತರವಾಗುತ್ತಿತ್ತು. ಮನೆಯಲ್ಲಿ ಇಂತಹುದೇ ಊಟ–ತಿಂಡಿ ಎಂದು ಬಯಸುತ್ತಿರಲಿಲ್ಲ. ಸಿಕ್ಕಿದ್ದು, ಬದುಕಲು ಬೇಕಾದಷ್ಟು ಸಿಕ್ಕಿದರೆ ಸಾಕಾಗುತ್ತಿತ್ತು.

ನಂತರ ಸರ್ಕಾರದ ಜಾಹೀರಾತು ಬದಲಾಗಿ ನಾವಿಬ್ಬರು, ಗಂಡಾದರೂ ಸರಿ ಹೆಣ್ಣಾದರೂ ಸರಿ ಒಂದೇ ಮಗು ಸಾಕು ಎಂಬ ಘೋಷಣೆ ಬಂದಿತು. ಅದಕ್ಕೂ ನಾವು ಹೊಂದಿಕೊಂಡೆವು. ಮನೆಗೆ ಒಂದು ಮಗು ಸಾಕು. ಇಂದು ಹೆಣ್ಣುಮಕ್ಕಳು ಎಲ್ಲಾ ರಂಗದಲ್ಲಿ ಮುಂದೆ ಬರುತ್ತಿದ್ದಾರೆ, ಆದ್ದರಿಂದ ಗಂಡುಮಗು ಬೇಕೇ ಬೇಕು ಎಂದೇನೂ ಇಲ್ಲ ಎಂದು ಭಾವಿಸಿ ನಮ್ಮ ಸಂಸಾರವನ್ನು ಮತ್ತಷ್ಟು ಚಿಕ್ಕದು ಮಾಡಿಕೊಂಡೆವು. ಹಿಂದೆ ಕುಟುಂಬದ ಯಜಮಾನ ಹೊರಗೆ ದುಡಿಯುವುದು, ಆತನ ಮಡದಿ ಮನೆ ಕೆಲಸ, ಮಕ್ಕಳ ಲಾಲನೆಪಾಲನೆ ನೋಡಿಕೊಳ್ಳುವುದು ಎಂಬಂತಿತ್ತು. ಇದನ್ನು ಸರಿ ಎಂದು ಸಮರ್ಥಿಸುತ್ತಿಲ್ಲ. ಒಂದು ರೀತಿಯ ಅನ್ಯೋನ್ಯತೆ ಇತ್ತು. ಆದರೆ ಇಂದು ಒಬ್ಬರು ದುಡಿದರೆ ಸಾಕಾಗುವುದಿಲ್ಲ. ಗಂಡ–ಹೆಂಡತಿ ಇಬ್ಬರೂ ದುಡಿಯಬೇಕು. ಕಾರಣ ಕೇಳಿದರೆ ಜೀವನ ದುಸ್ತರವಾಗಿದೆ. ಎಲ್ಲಾ ಬೆಲೆಗಳು ಜಾಸ್ತಿಯಾಗಿವೆ. ಮಕ್ಕಳ ವಿದ್ಯಾಭ್ಯಾಸ ದುಬಾರಿಯಾಗಿದೆ. ಪ್ರತಿ ವರ್ಷ ಲಕ್ಷಗಟ್ಟಲೆ ಹಣ ಕಟ್ಟಬೇಕು. ಮನೆ ಕಟ್ಟಿದ ಸಾಲ ತೀರಿಸಬೇಕು. ಜೊತೆಗೆ ಕಾರಿನ ಸಾಲ, ಮನೆ ಬಾಡಿಗೆ ಹೀಗೆ ತಮ್ಮ ಮಾತಿಗೆ ಸಮರ್ಥನೆ ನೀಡುತ್ತಾ ಇಬ್ಬರೂ ದುಡಿಯುವುದು ಅನಿವಾರ್ಯ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಇದನ್ನೂ ತಪ್ಪು ಎಂದು ಹೇಳಲಾಗದು. ಆದರೆ ಪರಿಣಾಮ! ಇಬ್ಬರೂ ದುಡಿಯುವುದು ಎಂದರೆ ಇಬ್ಬರೂ ದಿನವಿಡೀ ಮನೆಯಿಂದ ಹೊರಗಿರುವುದು. ಹಾಗಾದರೆ ಮಕ್ಕಳ ಗತಿ ಏನು. ಅವರಿಗೆ ಉತ್ತಮ ಶಾಲೆಗೆ ದಾಖಲಿಸಿದರೆ ಸಾಕೇ. ಇತ್ತೀಚೆಗೆ ಮಕ್ಕಳನ್ನು ಮನೆಯಲ್ಲಿ ನೋಡಿಕೊಳ್ಳಲಾಗುತ್ತಿಲ್ಲ ಎಂಬ ಕಾರಣಕ್ಕೆ ವಸತಿ ಶಾಲೆಗೆ ಸೇರಿಸಲಾಗುತ್ತಿದೆ. ಅವು ಅತ್ಯಂತ ದುಬಾರಿಯಾದವು. ಮಕ್ಕಳಿಗೆ ಯಾವುದೇ ಕೊರತೆ ಇಲ್ಲ ಎಂದು ಹೇಳಿ ಸಮಾಧಾನ ಪಟ್ಟುಕೊಳ್ಳುತ್ತಿದ್ದೇವೆ.

ಮಗು ಮನೆಯಲ್ಲಿದ್ದರೂ ಒಂಟಿ, ಹೊರಗೆ ವಸತಿ ಶಾಲೆಯಲ್ಲೂ ಒಂಟಿ. ಮಗುವಿನ ಜೊತೆಗೆ ಇತರೆ ಮಕ್ಕಳು ಇರಬಹುದು. ಆದರೆ ತಂದೆ–ತಾಯಿ–ಅಜ್ಜ–ಅಜ್ಜಿ ಪ್ರೀತಿ ಮಕ್ಕಳಿಗೆ ಸಿಗುತ್ತಿದೆಯೇ. ಎಷ್ಟು ಮಕ್ಕಳು ಇಂದು ಅಜ್ಜ–ಅಜ್ಜಿಯ ಜೊತೆಗೆ ಸಂಬಂಧ ಹೊಂದಿದ್ದಾರೆ. ಹಾಗೆ ನೋಡಿದರೆ ಹಿಂದಿನಿಂದ ಹೇಳಿಕೊಂಡು ಬಂದಿರುವುದು ಅಜ್ಜ–ಅಜ್ಜಿಯ ಪ್ರೀತಿಯಲ್ಲಿ ಬೆಳೆದ ಮಕ್ಕಳು ಪುಣ್ಯವಂತರು. ಅಂತಹವರು ಮಾತ್ರ ಸಮಾಜಮುಖಿ ಜೀವನ ನಡೆಸಬಲ್ಲರು ಎಂದು. ಆದರೆ ಇಂದು ಮಕ್ಕಳಿಗೆ ಅಜ್ಜ–ಅಜ್ಜಿಯರ ಪ್ರೀತಿ ಇರಲಿ, ತಂದೆ–ತಾಯಿಯರ ಪ್ರೀತಿಯೂ ದೊರಕುತ್ತಿಲ್ಲ. ಪತಿ–ಪತ್ನಿ ಇಬ್ಬರೂ ಕೆಲಸಕ್ಕೆ ಹೋಗುತ್ತಾರೆ ಎಂದರೆ ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಆಯಾಳನ್ನು ನೇಮಿಸಿ, ಅದೇ ತಾವು ಮಗುವಿಗೆ ತೋರಿಸುವ ದೊಡ್ಡ ಪ್ರೀತಿ ಎಂದು ತೃಪ್ತಿಪಟ್ಟಿಕೊಳ್ಳುವವರು ಕಂಡುಬರುತ್ತಾರೆ. ಇತ್ತೀಚೆಗೆ ಗಮನ ಸೆಳೆದ ಒಂದು ಮಗುವಿನ ಮಾತು; ಮಗು ತಾಯಿಗೆ ಕೇಳುತ್ತದೆ, ನೀನು ಹೊರಗೆ ಹೋಗುವಾಗ ಮನೆಯ ಕಪಾಟುಗಳಿಗೆ ಬೀಗ ಹಾಕಿ ಹೋಗುತ್ತೀಯಾ, ನನ್ನನ್ನು ಆಯಾ ಹತ್ತಿರ ಬಿಟ್ಟು ಹೋಗುತ್ತೀಯಾ ಏಕೆ? ಅದಕ್ಕೆ ತಾಯಿ ಹೇಳುತ್ತಾಳೆ; ಕಪಾಟಿನಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳಿವೆ. ಹಾಗಾಗಿ ಅದಕ್ಕೆ ಬೀಗ ಹಾಕಿ ಹೋಗುತ್ತೇನೆ. ಮಗು ಕೇಳುವ ಮತ್ತೊಂದು ಪ್ರಶ್ನೆ; ಕಪಾಟಿನಲ್ಲಿ ಬೆಲೆಬಾಳುವ ವಸ್ತುವಿದೆ ಸರಿ. ಹಾಗಾದರೆ ನನ್ನನ್ನ ಆಯಾ ಬಳಿ ಇಟ್ಟು ಹೋಗುತ್ತೀರಾ. ಈ ಪ್ರಶ್ನೆಗೆ ಆ ತಾಯಿ ಏನು ಉತ್ತರ ನೀಡಲಾದೀತು. ನನಗೆ ಬೆಲೆ ಇಲ್ಲವೇ?

ಇತ್ತೀಚೆಗೆ ಭೇಟಿಯಾದ ಮಾನಸಿಕ ತಜ್ಞರೊಬ್ಬರು ಹೇಳಿದ ಮಾತಿದು. ಇಂದು ಮನೆಯಲ್ಲಿ ಮಕ್ಕಳು ಒಂಟಿಯಾಗುತ್ತಿರುವುದರಿಂದ ಅವರು ಮಾನಸಿಕ ಖಿನ್ನತೆ ಅನುಭವಿಸುತ್ತಿದ್ದಾರೆ. ಅವರು ಯಾರೊಡನೆ ಬೆರೆಯುವುದಿಲ್ಲ, ಯಾರೊಡನೆಯೂ ಮಾತನಾಡುವ ಅವಕಾಶವೂ ಇರುವುದಿಲ್ಲ. ಕೆಲಸದಿಂದ ಮರಳಿದ ತಂದೆ–ತಾಯಿ ಸುಸ್ತು ಎಂದು ಮಕ್ಕಳನ್ನು ಸಹಜ ಪ್ರೀತಿಯಿಂದ ಮಾತನಾಡಿಸಲಾಗುತ್ತಿಲ್ಲ. ಇದರಿಂದ ಮಕ್ಕಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರಿಗೆ ಮಾತೂ ಸಹ ಸ್ಪಷ್ಟವಾಗಿ ಬರುವುದಿಲ್ಲ. ಹೊಸಹೊಸ ಪದಗಳ ಪರಿಚಯವೇ ಆಗುವುದಿಲ್ಲ. ಕ್ರಮೇಣ ಅವು ಮೌನಕ್ಕೆ ಜಾರುತ್ತವೆ. ಅದನ್ನು ಸರಿಪಡಿಸುವುದು ಬಹಳ ಕಷ್ಟ. ಹಾಗೆ ನೋಡಿದರೆ ಸರ್ಕಾರಿ ಶಾಲೆಗಳಲ್ಲಿ ಮುಕ್ತ ವಾತಾವರಣದಲ್ಲಿ ಬೆಳೆಯುವ ಮಕ್ಕಳು ವಾಚಾಳಿಗಳಾಗುತ್ತಾರೆ. ಖಾಸಗಿ ಶಾಲೆಯಲ್ಲಿ ಮಾತನಾಡಲೂ ನಿರ್ಬಂಧವಿರುತ್ತದೆ. ಶಾಲೆಯವರು ನಿಗದಿಪಡಿಸಿದ ಸಮಯದಲ್ಲಿ ಮಾತ್ರ ಮಾತನಾಡಬೇಕು. ಗಟ್ಟಿಯಾಗಿ ಮಾತನಾಡುವಂತಿಲ್ಲ. ಶಾಲೆ ಮುಗಿದ ಕೂಡಲೇ ಮನೆಗೆ ಬಂದರೆ ಸಾಕಷ್ಟು ಹೋಂವರ್ಕ್. ಮಕ್ಕಳು ಶಾಲೆಯಲ್ಲೂ ಯಾರೊಡನೆಯೂ ಬೆರೆಯುವುದಿಲ್ಲ. ಮನೆಗೆ ಹೋದರೆ ನಂತರ ಹೊರಗೆ ಬರುವುದಿಲ್ಲ. ಮಕ್ಕಳ ಬೆಳವಣಿಗೆ ಹೇಗೆ ಸಾಧ್ಯ. ವಾರ್ಷಿಕ ರಜಾ ಸಮಯದಲ್ಲೂ ಮತ್ಯಾವುದೋ ಶಿಬಿರಕ್ಕೆ ಸೇರುತ್ತಾರೆ. ಅವರಿಗೆ ಮುಕ್ತವಾಗಿ ಅಜ್ಜ–ಅಜ್ಜಿಯರೊಡನೆ, ನೆರೆಹೊರೆಯವರೊಡನೆ ಬೆರೆಯುವ ಅವಕಾಶವೇ ಇಲ್ಲವಾಗುತ್ತಿದೆ. ಮಕ್ಕಳನ್ನು ನಾವು ಒಂಟಿತನಕ್ಕೆ ತಳ್ಳುತ್ತಿದ್ದೇವೆ. ಮುಂದೆ ಅವರು ಹೇಗೆ ಸಮಾಜಮುಖಿಗಳಾಗುತ್ತಾರೆ ಎಂದು ಯೋಚಿಸಬೇಕಲ್ಲವೇ?

ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಮೈಸೂರು ದಸರಾ ಪ್ರಯುಕ್ತ

ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನಕ್ಕೆ ಚಾಲನೆ

ಮೈಸೂರು, ಸೆ20– 26ರವರೆಗೆ ಭಾರತ ಸರಕಾರದ ಜವಳಿ ಮಂತ್ರಾಲಯ ಇಲಾಖೆಯ ವತಿಯಿಂದ ಗಾಂಧಿ ಶಿಲ್ಪ ಬಜಾರ್ ಹಾಗೂ 29ರವರೆಗೆ ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ ಇವರ ಪ್ರಾಯೋಜಕತ್ವದಲ್ಲಿ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟಕ್ಕೆ ಶುಕ್ರವಾರ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು

ದೇಶದ ಹಲವು ರಾಜ್ಯಗಳಿಂದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಕುಶಲಕರ್ಮಿಗಳು ಸೇರಿದಂತೆ ಸುಮಾರು 50 ರಿಂದ 60 ಕುಶಲಕರ್ಮಿಗಳು, ಕೈಮಗ್ಗ ನೇಕಾರರು ತಮ್ಮ ಉತ್ಕೃಷ್ಟ ಕಲಾ ವಸ್ತುಗಳನ್ನು ಮೈಸೂರಿನಲ್ಲಿ ನಡೆಯುವ ಪ್ರದರ್ಶನದಲ್ಲಿ ಅನಾವರಣಗೊಳಿಸಲಿದ್ದಾರೆ.

ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಮಹೇಶ್ವರಿ, ಚಂದೇರಿ ಸೀರೆಗಳು, ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಬಿದಿರು–ಬೆತ್ತದ ವಸ್ತುಗಳು, ಚಿಕನ್ ಎಂಬ್ರಾಯ್ಡರಿ, ಡ್ರೈ ಫ್ಲವರ್‌ಗಳು, ಕಲಾತ್ಮಕ ಕಲ್ಲಿನ ವಸ್ತುಗಳು, ಫುಲ್ಕಾರಿ ಬಟ್ಟೆಗಳು ಈ ಮೇಳದಲ್ಲಿ ಒಂದೇ ಸೂರಿನಡಿ ಖರೀದಿಗೆ ಸಿಗಲಿದೆ.



ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಗರ್ವಿ ಗುರ್ಜರಿ ಹಸ್ತ ಕಲಾ ಪ್ರದರ್ಶನ.

ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ 29ರವರೆಗೆ ಪ್ರಪ್ರಥಮ ಬಾರಿಗೆ ಗರ್ವಿ ಗುರ್ಜರಿ ಹಸ್ತ ಕಲಾ ಮೇಳ, ಮೊದಲ ಬಾರಿಗೆ ಗುಜರಾತ್ ರಾಜ್ಯದ ಅಂಗ ಸಂಸ್ಥೆಯಾಗಿರುವ ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ ಲಿ., ಇವರ ಪ್ರಾಯೋಜಕತ್ವದಲ್ಲಿ ಪ್ರಾಂತೀಯ ಮೇಳವನ್ನು ಆಯೋಜನೆ ಮಾಡಲಾಗಿದೆ.

ಮೇಳದ ವಿಶೇಷತೆಗಳು: ಈ ಬಾರಿಯ ಮೇಳವು ಹಿಂದಿನ ಮೇಳಗಳಿಗಿಂತ ವಿಭಿನ್ನವಾಗಿ ಇರಲಿದೆ. ಗುಜರಾತ್ ರಾಜ್ಯದ ವಿವಿಧ ಭಾಗಗಳ ಪ್ರಸಿದ್ಧ ಹಾಗೂ ಕ್ರಿಯಾಶೀಲರಾಗಿರುವ ಸುಮಾರು 30ಕ್ಕೂ ಹೆಚ್ಚು ಕುಶಲಕರ್ಮಿಗಳು ಮೇಳದಲ್ಲಿ ಭಾಗವಹಿಸುವರು. ಕುಶಲಕರ್ಮಿಗಳು ತಯಾರಿಸಿದ ಪಟೋಲ ಸೀರೆಗಳು, ಬಾಂದಿನಿ ಸೀರೆಗಳು, ಕಸೂತಿ ಮಾಡಿದ ಬೆಡ್ ಶೀಟ್‌ಗಳು, ಟವಲ್‌ಗಳು, ಕುಶನ್ ಕವರ್‌ಗಳು, ಪರಿಸರ ಸ್ನೇಹಿ ಆಭರಣಗಳು, ಡ್ರೆಸ್ ಮೆಟೀರಿಯಲ್‌ಗಳು, ಮಣ್ಣಿನಿಂದ ತಯಾರಿಸಿದ ವಸ್ತುಗಳು, ಬೀಡ್ ವರ್ಕ್, ಮೆಟಲ್ ವರ್ಕ್, ಕುರ್ತಿಗಳು, ಚನಿಯಾ ಚೋಲಿ, ಬಾಂದಿನಿ ಹಾಗೂ ಇನ್ನಿತರ ಆಕರ್ಷಣೀಯ ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡಲಿದ್ದಾರೆ. ಮೇಳದ ವಿಶೇಷ ಎಂದರೆ ತಯಾರಕರಿಂದಲೇ ನೇರವಾಗಿ ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ಒದಗಿಸುವ ಪ್ರಯತ್ನವನ್ನು ಗುಜರಾತ್ ಸರ್ಕಾರ ಮಾಡುತ್ತಿದೆ. ಈ ಕಾರಣದಿಂದಾಗಿ ಮೈಸೂರು ಹಾಗೂ ಸುತ್ತಮುತ್ತಲಿನ ಗ್ರಾಹಕರಿಗೆ ಗುಜರಾತ್ ಸಂಸ್ಕೃತಿಯ ಉಡುಗೆ–ತೊಡುಗೆಗಳು ಮತ್ತು ಆಲಂಕಾರಿಕ ವಸ್ತುಗಳು ನೇರವಾಗಿ, ಉತ್ತಮ ಗುಣಮಟ್ಟದಲ್ಲಿ, ಕಡಿಮೆ ಬೆಲೆಗೆ ದೊರೆಯಲಿದೆ. ಪ್ರವೇಶವು ಉಚಿತವಾಗಿರುತ್ತದೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರಮಠ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಅತಿಥಿಗಳಾಗಿ ಮೈಸೂರು ವಿಭಾಗದ ಐಆರ್‌ಎಎಸ್ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶ್ರೀಮತಿ ಶಿಲ್ಪಿ ಅಗರ್ವಾಲ್, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ ಡಾ. ಪಾರುಲ್ ಮನ್ಸಟ, ಕರಕುಶಲ ಸೇವಾ ಕೇಂದ್ರ ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕ ಸುನಿಲ್‌ಕುಮಾರ್ ಆಗಮಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ತಿರುಪತಿ ಲಡ್ಡು ಪ್ರಕರಣ: ರಾಜ್ಯದ ಪ್ರಮುಖ ದೇವಾಲಯಗಳ ಪ್ರಸಾದ ಪರೀಕ್ಷೆಗೆ ನಿರ್ಧಾರ

ಕೆಎಂಎಫ್ ನಂದಿನಿ ತುಪ್ಪವನ್ನೇ ಕಡ್ಡಾಯವಾಗಿ ಬಳಸಲು ಆದೇಶ



ಬೆಂಗಳೂರು, ಸೆ20(ಕೆಎಂಶಿ)– ತಿರುಪತಿ ಲಡ್ಡು ಪ್ರಕರಣದ ನಂತರ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರ ಮುಜರಾಯಿ ವ್ಯಾಪ್ತಿಗೆ ಬರುವ ಎಲ್ಲಾ ದೇವಾಲಯಗಳಲ್ಲಿ ಪ್ರಸಾದ ತಯಾರಿಕೆಯಲ್ಲಿ ಕೆಎಂಎಫ್ ನಂದಿನಿ ತುಪ್ಪವನ್ನು ಕಡ್ಡಾಯವಾಗಿ ಬಳಸುವಂತೆ ಆದೇಶಿಸಿದೆ.

ರಾಜ್ಯದಲ್ಲಿ ಮೂವತ್ನಾಲ್ಕು ಸಾವಿರ ಮುಜರಾಯಿ ದೇವಾಲಯಗಳಿದ್ದು ಅವುಗಳಲ್ಲಿ 205–ಎ ವರ್ಗದಡಿ, 193–ಬಿ–ವರ್ಗದಲ್ಲಿವೆ, ಉಳಿದವು ಸಿ–ವರ್ಗದಲ್ಲಿದ್ದು ಈ ದೇವಾಲಯಗಳಲ್ಲಿ ಪೂಜೆ ನಂತರ ಭಕ್ತರಿಗೆ ಪ್ರಸಾದ ನೀಡಲಾಗುತ್ತದೆ.

ಕರ್ನಾಟಕದ ದೇವಾಲಯಗಳಲ್ಲಿ ದನದ ಕೊಬ್ಬು, ಮೀನಿನ ಎಣ್ಣೆ ಮಿಶ್ರಿತ ಪ್ರಸಾದ ಹಂಚಿದ ಘಟನೆಗಳು ನಡೆದಿಲ್ಲ. ಆದರೂ, ಸಾರ್ವಜನಿಕ ಹಿತದೃಷ್ಟಿಯಿಂದ ನಮ್ಮ ದೇವಾಲಯಗಳ ಪ್ರಸಾದವನ್ನು ಪ್ರಯೋಗಾಲಯಕ್ಕೆ ಕಳುಹಿಸಲು ಇಲಾಖೆ ತೀರ್ಮಾನಿಸಿದೆ.

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ನೀಡುವ ಪ್ರಸಾದದ ಬಗ್ಗೆಯೂ ಎಚ್ಚರ ವಹಿಸುವಂತೆ ಸಲಹೆ ಮಾಡಿದ್ದರು. ಅಷ್ಟೇ ಅಲ್ಲ, ಈ ಬಗ್ಗೆ ಪ್ರಯೋಗಾಲಯಕ್ಕೆ ಕಳುಹಿಸಿ ತಪಾಸಣೆಗೆ ಒಳಪಡಿಸುವಂತೆಯೂ ಸೂಚಿಸಿದ್ದರು.

ಲಡ್ಡು ಪ್ರಸಾದದ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕ ಚರ್ಚೆ ಆರಂಭಗೊಂಡ ನಂತರ, ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಪ್ರಸಾದ ತಯಾರಿಕೆ ಬಗ್ಗೆ ಮಾಹಿತಿ ಪಡೆದರು.

ಯಾವ ದೇವಸ್ಥಾನಗಳಲ್ಲಿ ಪೂಜೆ ನಂತರ ಪ್ರಸಾದ ನೀಡುತ್ತಾರೋ, ಅಂತಹ ಎಲ್ಲಾ ಕಡೆಗಳಲ್ಲಿ ಕಡ್ಡಾಯವಾಗಿ ನಂದಿನಿ ತುಪ್ಪವನ್ನೇ ಬಳಸಬೇಕು. ಆಗಿಂದಾಗ್ಗೆ ಪ್ರಸಾದದ ಗುಣಮಟ್ಟವನ್ನು ತಿಳಿಯಲು ಪ್ರಯೋಗಾಲಯಕ್ಕೆ ತಪಾಸಣೆಗೆ ಕಳುಹಿಸಬೇಕು ಎಂದು ಆದೇಶಿಸಿದ್ದಾರೆ.

ವಾರ್ಷಿಕ 25 ಲಕ್ಷ ರೂ.ಗಿಂತ ಹೆಚ್ಚು ಆದಾಯ ಬರುವ ದೇವಾಲಯಗಳಲ್ಲಿ ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿನಿಯೋಗ ಮತ್ತು ಮಾರಾಟವಾಗುತ್ತಿದೆ. ಇಂತಹ ದೇವಾಲಯಗಳಲ್ಲಿ ಯಾವುದೇ ಲೋಪ ಬರದಂತೆ ಸಂಬಂಧಪಟ್ಟ ಆಡಳಿತಾಧಿಕಾರಿಗಳು ಮುಂಜಾಗ್ರತೆ ವಹಿಸುವಂತೆಯೂ ಆದೇಶಿಸಿದ್ದಾರೆ.

ಕನ್ನಡ–ಸಂಸ್ಕೃತಿ ಇಲಾಖೆ ಕಾರ್ಯಚಟುವಟಿಕೆ ಪರಿಷ್ಕರಣೆ ಸಂಬಂಧ ಸುದೀರ್ಘ ಚರ್ಚೆ

ಮೈಸೂರು, ಸೆ.20(ಎಂಕೆ)– ಸುವರ್ಣ ಸಂಭ್ರಮ ಕರ್ನಾಟಕ–50ರ ಸವಿಗಳಿಗೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಗೆ ಒಳಪಡುವ 15 ಕ್ಷೇತ್ರಗಳಲ್ಲಾಗಬೇಕಾದ ಬದಲಾವಣೆ, ಕಾರ್ಯಚಟುವಟಿಕೆಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಸಲಹಾ ಸಂಗ್ರಹ ಗೋಷ್ಠಿಗಳನ್ನು ನಡೆಸಲಾಯಿತು.

ಮುಕ್ತ ವಿವಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿರುವ 'ಕರ್ನಾಟಕ ಸಾಂಸ್ಕೃತಿಕ ಮುನ್ನೋಟ: ಚಿಂತನಾ ಸಮಾವೇಶದಲ್ಲಿ ಸಾಹಿತ್ಯ, ರಂಗಭೂಮಿ, ನೃತ್ಯ, ಚಿತ್ರಕಲೆ ಮತ್ತು ಶಿಲ್ಪಕಲೆ, ಜಾನಪದ, ಯಕ್ಷಗಾನ–ಬಯಲಾಟ, ಸಂಗೀತ(ಶಾಸ್ತ್ರೀಯ–ಸುಗಮ–ಗಮಕ), ಒಡನಾಡಿ ಭಾಷೆಗಳು(ತುಳು–ಕೊಂಕಣಿ–ಕೊಡವ–ಅರೆಭಾಷೆ–ಬಂಜಾರ–ಬ್ಯಾರಿ), ಪುಸ್ತಕೋದ್ಯಮ(ಪ್ರಕಟಣೆ–ಪ್ರೋತ್ಸಾಹ–ಪ್ರಸಾರ), ಭಾಷೆ–ಗಡಿ ಅಭಿವೃದ್ಧಿ (ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಗಡಿ ಅಭಿವೃದ್ಧಿ ಪ್ರಾಧಿಕಾರಗಳು), ಪ್ರಶಸ್ತಿ–ಪುರಸ್ಕಾರ(ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೊಡಮಾಡುವ ಪುರಸ್ಕಾರಗಳು), ಅನುವಾದ(ಕುವೆಂಪು ಭಾಷಾ ಭಾರತಿ ಪ್ರಾಧಿಕಾರ), ಸರ್ಕಾರಿ ಸ್ವಾಯತ್ತ ಸಾಂಸ್ಕೃತಿಕ ಸಂಸ್ಥೆಗಳು(ಅಕಾಡೆಮಿಗಳು–ಪ್ರಾಧಿಕಾರಗಳು–ಪ್ರತಿಷ್ಠಾನಗಳು), ಸಾಂಸ್ಕೃತಿಕ ನೀತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುನ್ನೋಟ(ಉತ್ಸವ–ಜಯಂತಿ, ಪ್ರೋತ್ಸಾಹ–ಪ್ರಾಯೋಜನೆ ಕಾರ್ಯಕ್ರಮ) ಕುರಿತು ಪ್ರತ್ಯೇಕ ಗೋಷ್ಠಿಗಳು ನಡೆದವು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಗೆ ಒಳಪಡುವ 15 ಕ್ಷೇತ್ರಗಳ ಕುರಿತು ಪ್ರತ್ಯೇಕ ಚರ್ಚಾ ಗೋಷ್ಠಿಗಳನ್ನು ನಡೆಸಲಾಯಿತು.

ಆಯಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ 8 ರಿಂದ 10 ಜನ ವಿದ್ವಾಂಸರನ್ನೊಳಗೊಂಡ ಗೋಷ್ಠಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಚಟುವಟಿಕೆಯಲ್ಲಾಗಬೇಕಿರುವ ಬದಲಾವಣೆ, ಮಾರ್ಪಾಡು, ಪರಿಷ್ಕರಣೆ ಕುರಿತು ದೀರ್ಘ ಚರ್ಚೆಗಳು ನಡೆದವು.

ಈ ವೇಳೆ ಜಾನಪದ ಗೋಷ್ಠಿಯ ನೇತೃತ್ವ ವಹಿಸಿದ್ದ ಜಾನಪದ ವಿದ್ವಾಂಸ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಸಂವಿಧಾನದ ಚೌಕಟ್ಟಿನಲ್ಲಿ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಲು ಚರ್ಚಾ ಗೋಷ್ಠಿಗಳನ್ನು ನಡೆಸಲಾಗುತ್ತಿದೆ. ರಾಜ್ಯದ ವಿವಿಧೆಡೆಯಿಂದ ಬಂದಿರುವ ಸಾಹಿತಿಗಳು, ವಿದ್ವಾಂಸರು ತಮ್ಮ ತಮ್ಮ ಸಲಹೆಗಳನ್ನು ನೀಡಲಿದ್ದಾರೆ ಎಂದರು.

ಸಲಹೆ, ಸೂಚನೆಗಳ ಮಂಡನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಪ್ರತಿಕ್ರಿಯಿಸಿ, ಚಿಂತನಾ ಸಮಾವೇಶದ ಸಮಾರೋಪ ಕಾರ್ಯಕ್ರಮದಲ್ಲಿ ಚರ್ಚಾ ಗೋಷ್ಠಿಗಳಲ್ಲಿ ಚರ್ಚಿಸಿರುವ ವಿಷಯಗಳು, ನೀಡಬೇಕಿರುವ ಸಲಹೆಗಳನ್ನು ಆಯಾ ಗೋಷ್ಠಿ ನೇತೃತ್ವ ವಹಿಸಿದ್ದ ವಿದ್ವಾಂಸರು ನಾಳೆ(ಸೆ.21) ಮಂಡಿಸಲಿದ್ದಾರೆ ಎಂದು ತಿಳಿಸಿದರು.

ಅಯೋಧ್ಯೆ ರಾಮ ಮಂದಿರಕ್ಕೂ ಕೊಬ್ಬು ಮಿಶ್ರಿತ ಲಡ್ಡು ವಿತರಣೆ?

ಸನಾತನ ಧರ್ಮದ ವಿರುದ್ಧ ಅಂತಾರಾಷ್ಟ್ರೀಯ ಸಂಚು ಎಂದ ಆಚಾರ್ಯ ಸತ್ಯೇಂದ್ರ ದಾಸ್



ಅಯೋಧ್ಯೆ, ಸೆ.20– ಖ್ಯಾತ ಧಾರ್ಮಿಕ ಕ್ಷೇತ್ರ ತಿರುಪತಿ ತಿರುಮಲ ದೇಗುಲದ ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರಣವಾಗಿದೆ ಎಂಬ ಆಂಧ್ರ ಪ್ರದೇಶ ಸರ್ಕಾರದ ಹೇಳಿಕೆ ಬೆನ್ನಲ್ಲೇ ಅಯೋಧ್ಯೆ ರಾಮ ಮಂದಿರದಲ್ಲೂ ಇದೇ ಲಡ್ಡು ವಿತರಣೆಯಾಗಿರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಈ ಹಿಂದೆ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮಕ್ಕೆ ತಿರುಮಲದಿಂದ ಟಿಟಿಡಿ ಸುಮಾರು 1 ಲಕ್ಷ ಲಡ್ಡುಗಳನ್ನು ರವಾನೆ ಮಾಡಿತ್ತು. ಈ ಲಡ್ಡುಗಳೂ ಕೂಡ ಕಲಬೆರಕೆ ಲಡ್ಡುಗಳಾಗಿತ್ತೇ ಎಂಬ ಅನುಮಾನ ಮೂಡುತ್ತಿದೆ. ಅಲ್ಲದೆ ತಿರುಪತಿಯಲ್ಲಿ ಲಡ್ಡು ಪ್ರಸಾದಕ್ಕೆ ತುಪ್ಪ ಪೂರೈಸಿದ ತಮಿಳುನಾಡಿನ ದಿಂಡಿಗಲ್‌ನ ಎಆರ್ ಡೈರಿ ಫುಡ್ಸ್ ಮೇಲೂ ಇದೀಗ ತನಿಖಾ ತೂಗುಗತ್ತಿ ತೂಗುತ್ತಿದೆ.

ತಿರುಮಲ ಲಡ್ಡು ಪ್ರಸಾದದಲ್ಲಿ ಕೊಬ್ಬು ಮಿಶ್ರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಅಯೋಧ್ಯೆ ರಾಮ ಜನ್ಮಭೂಮಿಯ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ ಅವರು, ಮೀನಿನ ಎಣ್ಣೆಯನ್ನು ಬೆರೆಸಿರುವುದು ತಪಾಸಣೆಯಿಂದ ಸ್ಪಷ್ಟವಾಗಿದೆ. ಇದೆಲ್ಲ ಯಾವಾಗಿಂದ ನಡೆಯುತ್ತಿದೆ ಎಂಬುದು ಇನ್ನೂ ತಿಳಿದಿಲ್ಲ. ಇದು ಬಹುದೊಡ್ಡ ಅಂತಾರಾಷ್ಟ್ರೀಯ ಪಿತೂರಿಯಾಗಿದೆ. ಸನಾತನ ಧರ್ಮದ ಮೇಲಿನ ದಾಳಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂದು ಆಗ್ರಹಿಸಿದ್ದಾರೆ.

ತಿರುಮಲದಲ್ಲಿ ಶ್ರೀವಾರಿ ದೇಗುಲದಲ್ಲಿ ಲಡ್ಡು ಪ್ರಸಾದ ತಯಾರಿಕೆಗೆ ಬಳಕೆ ಮಾಡಲಾಗುತ್ತಿದ್ದ ತುಪ್ಪ ಕಲ್ಮಶವಾಗಿತ್ತು. ಕಳಪೆ ಗುಣಮಟ್ಟದ್ದಾಗಿತ್ತು, ನಾನು ಇದನ್ನು ಹಲವು ವರ್ಷಗಳ ಹಿಂದೆಯೇ ಗಮನಿಸಿದ್ದೇನೆ. ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಟ್ರಸ್ಟ್ ಬೋರ್ಡ್ ಅಧ್ಯಕ್ಷರ ಮುಂದೆ ಇಟ್ಟರೂ ಅವರು ತಲೆಕೆಡಿಸಿಕೊಳ್ಳಲಿಲ್ಲ. ಹೀಗಾಗಿ ನನ್ನದು ಏಕಾಂಗಿ ಹೋರಾಟವಾಯಿತು. ಕೋಟ್ಯಾಂತರ ಭಕ್ತರು ಅಪಾರ ನಂಬಿಕೆ ಮತ್ತು ಭಕ್ತಿ ಹೊಂದಿರುವ ಪವಿತ್ರ ದೇವಾಲಯದಲ್ಲಿ ಇಂತಹ ಮಹಾಪಾಪಗಳು ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದ್ದಾರೆ.

ತಿರುಪತಿ ಲಡ್ಡು ವಿವಾದ

ರಾಜ್ಯದಲ್ಲಿ ಭಕ್ತರಿಗೆ ನೀಡುವ ಪ್ರಸಾದಗಳ ಪರೀಕ್ಷೆ

ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ



ಬೆಂಗಳೂರು, ಸೆ.20– ತಿರುಪತಿಯ ತಿರುಮಲ ದೇಗುಲದಲ್ಲಿ ನೀಡುವ ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬನ್ನು ಬಳಸಲಾಗುತ್ತಿತ್ತು ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಹೇಳಿಕೆ ನೀಡಿದ ನಂತರ ತೀವ್ರ ವಿವಾದ ಎದ್ದಿದ್ದು, ಇದರ ಬಿಸಿ ರಾಜ್ಯದ ಪ್ರಮುಖ ದೇವಾಲಯಗಳಿಗೆ ತಟ್ಟಿದೆ. ಕರ್ನಾಟಕದ ಎಲ್ಲಾ ಪ್ರಮುಖ ದೇವಾಲಯಗಳಲ್ಲಿ ಭಕ್ತರಿಗೆ ನೀಡುವ ಪ್ರಸಾದವನ್ನು ಪರೀಕ್ಷೆಗೊಳಪಡಿಸಿಯೇ ಭಕ್ತರಿಗೆ ಹಂಚಲಾಗುವುದು ಎಂದು ಧಾರ್ಮಿಕ ದತ್ತಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಕರ್ನಾಟಕದಲ್ಲಿ 34,000 ದತ್ತಿ ಇಲಾಖೆಯ ಸುಪರ್ದಿಯಲ್ಲಿರುವ ದೇವಾಲಯಗಳಿವೆ. ಅವುಗಳಲ್ಲಿ 205 ವರ್ಗ–ಎ ದೇವಾಲಯಗಳ ವಾರ್ಷಿಕ ಆದಾಯ 25 ಲಕ್ಷಕ್ಕೂ ಹೆಚ್ಚಾಗಿವೆ. 193 ವರ್ಗ–ಬಿ ದೇವಾಲಯಗಳ ವಾರ್ಷಿಕ ಆದಾಯ 5 ಲಕ್ಷದಿಂದ 25 ಲಕ್ಷ ರೂಪಾಯಿಗಳಾಗಿವೆ. ಉಳಿದವು 5 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ವರ್ಗ–ಸಿ ದೇವಾಲಯಗಳಾಗಿ ವರ್ಗೀಕರಿಸಲ್ಪಟ್ಟಿವೆ. ಈ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದ ನಂತರ ಭಕ್ತರಿಗೆ ಪ್ರಸಾದವನ್ನು ನೀಡಲಾಗುತ್ತದೆ ಎಂದರು.

ಕರ್ನಾಟಕದ ದೇವಾಲಯಗಳಲ್ಲಿ ಅಂತಹ ಯಾವುದೇ ಘಟನೆಗಳು ಅಥವಾ ಕಲಬೆರಕೆಯಾಗಿರುವ ಬಗ್ಗೆ ನನಗೆ ಮಾಹಿತಿಯಿಲ್ಲ ಎಂದು ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು. ಆದರೆ ಜನರಿಗೆ ಯಾವುದೇ ಅನುಮಾನ ಬೇಡ ನಾವು ಪರೀಕ್ಷೆಗೆ ಆದೇಶಿಸುತ್ತೇವೆ ಎಂದರು.

ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಪೂರೈಸುವ ನಂದಿನಿ ತುಪ್ಪವನ್ನು ಮಾತ್ರ ಬಳಸುವಂತೆ ಮತ್ತು ಬೇರೆ ಯಾವುದೇ ಬ್ರಾಂಡ್‌ನ ತುಪ್ಪ ಬಳಸದಂತೆ ರಾಜ್ಯ ದತ್ತಿ ಇಲಾಖೆಗೆ ಲಗತ್ತಿಸಲಾದ ಎಲ್ಲಾ ಪ್ರಮುಖ ದೇವಾಲಯಗಳಿಗೆ ಸುತ್ತೋಲೆ ಹೊರಡಿಸಲಾಗುವುದು. ಕರ್ನಾಟಕವು ಹಲವು ವರ್ಷಗಳಿಂದ ತಿರುಪತಿ ಲಾಡು ತಯಾರಿಕೆಗೆ ನಂದಿನಿ ತುಪ್ಪವನ್ನು ಪೂರೈಸುತ್ತಿದೆ ಎಂದರು.

ಗೂಡ್ಸ್ ಆಟೋ ಡಿಕ್ಕಿ: ಸೈಕಲ್ ಸವಾರ ಸಾವು

ಮೈಸೂರು, ಸೆ.20(ಎಸ್‌ಬಿಡಿ)– ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಸೈಕಲ್ ಸವಾರ ಮೃತಪಟ್ಟ ಘಟನೆ ಮೈಸೂರು–ನಂಜನಗೂಡು ಹೆದ್ದಾರಿ, ಮಂಡಕಳ್ಳಿ ಗೇಟ್ ಬಳಿ ಗುರುವಾರ ಬೆಳಗ್ಗೆ ಸಂಭವಿಸಿದೆ. ಮಂಡಕಳ್ಳಿ ಗ್ರಾಮದ ನಿವಾಸಿ, ತರಕಾರಿ ವ್ಯಾಪಾರಿ ಮಹದೇವಗೌಡ(48) ಅಪಘಾತದಲ್ಲಿ ಮೃತಪಟ್ಟವರು. ಇವರು ಎಂದಿನಂತೆ ಮುಂಜಾನೆ ಮೈಸೂರಿನ ಎಂ.ಜಿ.ರಸ್ತೆ ಮಾರುಕಟ್ಟೆಗೆ ತೆರಳಿ ವ್ಯಾಪಾರಕ್ಕೆ ಬೇಕಾದ ತರಕಾರಿ–ಸೊಪ್ಪು ಇನ್ನಿತರ ವಸ್ತುಗಳನ್ನು ಖರೀದಿಸಿ, ಸೈಕಲ್‌ನಲ್ಲಿ ಗ್ರಾಮಕ್ಕೆ ಮರಳುವಾಗ ಮಂಡಕಳ್ಳಿ ಗೇಟ್ ಬಳಿ ಹಿಂದಿನಿಂದ ಗೂಡ್ಸ್ ಆಟೋ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಮಹದೇವಗೌಡ ಅವರು ಹಾರಿ ಆಟೋ ಮುಂಭಾಗದ ಗಾಜಿನ ಮೇಲೆ ಬಿದ್ದು, ನೆಲಕ್ಕುರುಳಿದ್ದಾರೆ. ಘಟನೆಯಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದು ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾರತಮ್ಯವಿಲ್ಲದ ಸಮಸಮಾಜ ನಿರ್ಮಾಣಕ್ಕೆ ಎಲ್ಲರೂ ಪಣ ತೊಡಬೇಕು

ಜಿಲ್ಲಾ ಉಸ್ತುವಾರಿ ಸಚಿವ ಡಾ॥ ಹೆಚ್.ಸಿ.ಮಹದೇವಪ್ಪ ಮನವಿ

ಮೈಸೂರು,ಸೆ.20(ಎಂಟಿವೈ)– ಸಮಾಜ ಸುಧಾರಕ ಬಸವಣ್ಣನವರಂತೆ ಪ್ರಸ್ತುತ ಸಂದರ್ಭದಲ್ಲಿ ತಾರತಮ್ಯವಿಲ್ಲದ ಸಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಪಣತೊಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆದ 'ಕರ್ನಾಟಕ ಸಾಂಸ್ಕೃತಿ ಮುನ್ನೋಟ: ಚಿಂತನಾ ಸಮಾವೇಶ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷಗಳನ್ನು ಪೂರೈಸಿದೆ. ಈ ಸಂಭ್ರಮಾಚಾರಣೆಯನ್ನು ಜನರ ಸಾಂಸ್ಕೃತಿಕ ಮುನ್ನೋಟವನ್ನಾಗಿಸಲು ಸರ್ಕಾರ 4 ರೀತಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದೆ. ಕನ್ನಡದ ಸಾಹಿತ್ಯ ಹಾಗೂ ಸಂಸ್ಕೃತಿಯ ಪರಂಪರೆ ದೊಡ್ಡದಾಗಿದ್ದು, ಈ ಪರಂಪರೆಗೆ ಸಾಂಸ್ಕೃತಿಕ ನಾಯಕ ಬಸವಣ್ಣನವರಿಂದ ಕುವೆಂಪು, ಕಾರಂತರಂತಹ ಮಹಾನ್ ಸಾಹಿತಿಗಳು ಕೊಡುಗೆ ನೀಡಿದ್ದಾರೆ. ಸಮ ಸಮಾಜದ ನಿರ್ಮಾಣಕ್ಕಾಗಿ ಹೋರಾಡಿ, ಅವೈಜ್ಞಾನಿಕ ಮತ್ತು ಮೂಢನಂಬಿಕೆಗಳನ್ನು ಧಿಕ್ಕರಿಸಿ ಜನರಿಗೆ ನಿಜವಾದ ಸಂಸ್ಕೃತಿಯನ್ನು ತಿಳಿಸಲು ಶ್ರಮಿಸಿದ್ದಾರೆ ಎಂದರು.

ಜಾತಿ ವ್ಯವಸ್ಥೆ, ಧರ್ಮಾಧಾರಿತ ಪ್ರಾಬಲ್ಯವನ್ನು ಹೋಗಲಾಡಿಸಲು ನಮ್ಮ ನಾಡಿನ ಹಿರಿಯರು ಕಾಲ–ಕಾಲಕ್ಕೆ ಸಂಸ್ಕೃತಿಯ ಬಗ್ಗೆ ಕಾರ್ಯಕ್ರಮಗಳನ್ನು ಆಯೋಜಿಸಿ ಜನರಿಗೆ ತಿಳಿಸುವ ಕೆಲಸ ಮಾಡಬೇಕು.



ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ನಡೆದ 'ಕರ್ನಾಟಕ ಸಾಂಸ್ಕೃತಿ ಮುನ್ನೋಟ: ಚಿಂತನಾ ಸಮಾವೇಶ' ಸಿಎಂ ಸಿದ್ದರಾಮಯ್ಯ, ಸಾಹಿತಿ ಹಂಪನಾ, ಸಚಿವರಾದ ಮಹದೇವಪ್ಪ, ಶಿವರಾಜ ತಂಗಡಗಿ ಅವರನ್ನು ಕಾಣಬಹುದು

ಇಂದಿನ ಕವಿಗಳು ಮತ್ತು ಸಾಹಿತಿಗಳು ತಮ್ಮ ಸಾಹಿತ್ಯದ ಶ್ರೀಮಂತ ಬೇರನ್ನು ಹೆಚ್ಚಿನ ಜನರಿಗೆ ತಲುಪಿಸಿ, ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಅಭಿವೃದ್ಧಿಯ ಬೆಳಕನ್ನು ತರಬೇಕು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ಎಸ್. ತಂಗಡಗಿ ಮಾತನಾಡಿ, ಮೈಸೂರು ರಾಜ್ಯಕ್ಕೆ ಮೈಸೂರು ಭಾಗದವರೇ ಆಗಿದ್ದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಹಲವು ಸವಾಲುಗಳನ್ನು ಮೆಟ್ಟಿನಿಂತು 'ಕರ್ನಾಟಕ' ಎಂದು ನಾಮಕರಣ ಮಾಡಿದರು. 50 ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಮೈಸೂರು ಮೂಲದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಂದಾಳತ್ವದಲ್ಲಿ ನಡೆಸುತ್ತಿರುವುದು ಹರ್ಷ ತಂದಿದೆ. ಸುವರ್ಣ ಸಂಭ್ರಮ ಕರ್ನಾಟಕದ ರಥವನ್ನು ನಿರ್ಮಿಸಿ, ರಾಜ್ಯದ ಎಲ್ಲಾ ಜಿಲ್ಲೆಯಲ್ಲೂ ಸಂಚರಿಸಿ ಮಾಹಿತಿ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಇಂದು ಏರ್ಪಡಿಸಲಾಗಿರುವ ಸಮಾವೇಶಕ್ಕೆ ಬಂದಿರುವಂತಹ ಸಾಹಿತಿಗಳು ತಮ್ಮ ಸಲಹೆ ನೀಡುವುದರ ಮೂಲಕ ಸಂಭ್ರಮಾಚರಣೆಯನ್ನು ಇನ್ನಷ್ಟು ಮೆರಗುಗೊಳಿಸಬೇಕು. ಅಲ್ಲದೆ ಚಿಂತನಾ ಸಮಾವೇಶವು ಪ್ರತಿಯೊಬ್ಬರಿಗೂ ಉಪಯುಕ್ತವಾಗುವಂತೆ ಮಾಡಬೇಕು. ಪ್ರಸ್ತುತ ಸಮಾಜದಲ್ಲಿ ಜಾತಿ, ಧರ್ಮದ ಅರ್ಥವು ಅನ್ಯ ರೂಪತಾಳಿ ಗಲಭೆಗಳ ಸೃಷ್ಟಿಗೆ ಕಾರಣವಾಗುತ್ತಿದೆ. ಸಾಹಿತಿಗಳು ಕವಿಗಳಾದ ನೀವು ಅವುಗಳನ್ನು ಹೋಗಲಾಡಿಸಲು ಮುಂದಾಗಿ, ಎಲ್ಲಾ ಜನರಲ್ಲೂ ಸಾಮರಸ್ಯವನ್ನು ಮೂಡಿಸಿ ಅಭಿವೃದ್ಧಿಯ ಲೇಪನವನ್ನು ಹಚ್ಚಬೇಕು ಎಂದು ಹೇಳಿದರು.

ಇಂಗ್ಲೀಷ್‌ನಲ್ಲಿ ಸಹಿ ಮಾಡಿದ ಸಿಎಂ ವಿರುದ್ಧ ರಾಜ್ಯಪಾಲರಿಗೆ ದೂರು

ಹಾಸ್ಯ ಚಟಾಕಿ ಹಾರಿಸಿದ ಸಿದ್ದರಾಮಯ್ಯ



ಮೈಸೂರು,ಸೆ.20(ಎಂಟಿವೈ)– ಪ್ರಥಮ ಕನ್ನಡ ಕಾವಲು ಸಮಿತಿ ಅಧ್ಯಕ್ಷನಾದ ಬಳಿಕ ಹೆಚ್ಚಾಗಿ ಕನ್ನಡವನ್ನೇ ಬಳಸುತ್ತಿರುವ ನಾನು ಇಂಗ್ಲೀಷ್ ಭಾಷೆಯನ್ನೇ ಮರೆತಿದ್ದೇನೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವಾಗ ಇಂಗ್ಲೀಷ್‌ನಲ್ಲಿ ಸಹಿ ಮಾಡಿದ್ದಕ್ಕೆ ವ್ಯಕ್ತಿಯೊಬ್ಬ ತನಿಖೆ ಮಾಡುವಂತೆ ರಾಜ್ಯಪಾಲರಿಗೆ ದೂರು ನೀಡಿದ್ದಾನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಸ್ಯ ಚಟಾಕಿ ಹಾರಿಸಿದರು.

'ಕರ್ನಾಟಕ ಸಾಂಸ್ಕೃತಿಕ ಮುನ್ನೋಟ : ಚಿಂತನಾ ಸಮಾವೇಶ'ದಲ್ಲಿ ಮಾತನಾಡುವ ವೇಳೆ ಕನ್ನಡ ಭಾಷೆ ಮೇಲಿನ ಮಮಕಾರದ ಬಗ್ಗೆ ಪ್ರಸ್ತಾಪಿಸುತ್ತಿದ್ದಾಗ, ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿ ರಚನೆಯಾದ ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ಅಂದಿನಿಂದ ಇಂದಿನವರೆಗೂ ಕನ್ನಡವನ್ನೇ ಹೆಚ್ಚಾಗಿ ಬಳಸುತ್ತಿದ್ದೇನೆ. ಇದರಿಂದ ಇಂಗ್ಲೀಷ್ ಭಾಷೆಯನ್ನೇ ಮರೆತಿದ್ದೇನೆ. ಆಡಳಿತದಲ್ಲೂ ಕನ್ನಡವನ್ನೇ ಹೆಚ್ಚಾಗಿ ಬಳಸುತ್ತಿದ್ದೇನೆ. ಕೇಂದ್ರ ಹಾಗೂ ಬೇರೆ ರಾಜ್ಯಗಳೊಂದಿಗೆ ಪತ್ರ ವ್ಯವಹಾರ ನಡೆಸುವ ಸಂದರ್ಭದಲ್ಲಿ ಮಾತ್ರ ಇಂಗ್ಲಿಷ್‌ನಲ್ಲಿ ಸಹಿ ಮಾಡುತ್ತೇನೆ. ಉಳಿದ ಸಂದರ್ಭದಲ್ಲಿ ಕನ್ನಡದಲ್ಲಿಯೇ ಸಹಿ ಮಾಡುತ್ತೇನೆ. ಆದರೆ, ಯಾವನೋ ಒಬ್ಬ ಇಂಗ್ಲೀಷ್‌ನಲ್ಲಿ ಸಿದ್ದರಾಮಯ್ಯ ಸಹಿ ಮಾಡಿದ್ದಾರೆ. ಈ ಸಂಬಂಧ ತನಿಖೆ ನಡೆಸಬೇಕು ಎಂದು ರಾಜ್ಯಪಾಲರಿಗೆ ದೂರು ನೀಡಿದ್ದಾನೆ. ಇಂತಹ ಪೆದ್ದರು ಇದ್ದಾರೆ ನೋಡಿ, ಇದಕ್ಕೆ ಏನು ಹೇಳಬೇಕು ಹೇಳಿ? ಎಂದು ಪ್ರಶ್ನಿಸಿದರು.

ಆ ವ್ಯಕ್ತಿ ನೀಡಿದ ದೂರನ್ನು ಆಧರಿಸಿ ರಾಜ್ಯಪಾಲರು 'ಈ ವಿಚಾರವಾಗಿ ಏಕೆ ತನಿಖೆ ಮಾಡಬಾರದು' ಎಂದು ಪ್ರಶ್ನಿಸಿ ನನಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ನೀಡಿದ್ದಾರೆ. ಈ ವಿಚಾರವನ್ನು ತಮಾಷೆಗಾಗಿ ನಿಮಗೆ ಹೇಳುತ್ತಿದ್ದೇನೆ. ನಾನು ಕನ್ನಡಕ್ಕೆ ಒತ್ತು ನೀಡುತ್ತಾ ಬರುತ್ತಿದ್ದೇನೆ. ಆದರೆ, ಸಹಿ ಮಾಡುವಾಗ ಕನ್ನಡ ಹಾಗೂ ಇಂಗ್ಲಿಷ್ ಎರಡನ್ನೂ ಬಳಕೆ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು.

ಸಮವಸ್ತ್ರ, ನೋಟ್ ಬುಕ್ ವಿತರಣೆ



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ನೇತೃತ್ವದಲ್ಲಿ ದಸರಾ ಗಜಪಡೆಯ ಮಾವುತರು ಮತ್ತು ಕಾವಾಡಿಯ ಮಕ್ಕಳಿಗೆ ಸಮವಸ್ತ್ರ ಹಾಗೂ ನೋಟ್ ಬುಕ್ ವಿತರಿಸಲಾಯಿತು. ಈ ವೇಳೆ ಹುಯಿಲಾಳು ಮಂಜುನಾಥ್ ಪ್ರಸಾದ್, ಈರಪ್ಪನಕೊಪ್ಪಲು ಕುಮಾರ್, ಶಿವಕುಮಾರ್, ಶಿಕ್ಷಕರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಜಾತಿನಿಂದನೆ, ಮಹಿಳಾ ದೌರ್ಜನ್ಯ

ಶಾಸಕ ಮುನಿರತ್ನ ಅನರ್ಹತೆಗೆ ಆಗ್ರಹಿಸಿ ಮೈಸೂರು ವಿವಿ ಸಂಶೋಧಕರ ಪ್ರತಿಭಟನೆ



ಮೈಸೂರು ವಿವಿ ಸಂಶೋಧಕರ ಸಂಘದ ವತಿಯಿಂದ ಮುನಿರತ್ನ ವಿರುದ್ಧ ಪ್ರತಿಭಟಿಸಲಾಯಿತು.

ಮೈಸೂರು, ಸೆ.20(ಎಸ್‌ಬಿಡಿ)– ಜಾತಿನಿಂದನೆ, ಮಹಿಳಾ ದೌರ್ಜನ್ಯ ಆರೋಪಿ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಒತ್ತಾಯಿಸಿ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿ, ಮುನಿರತ್ನ ಫೋಟೋ ಹಿಡಿದು ದಿಕ್ಕಾರ ಹಾಕಲಾಯಿತು. ಮುನಿರತ್ನ ಶಾಸಕ ಸ್ಥಾನದಿಂದ ಅನರ್ಹಗೊಳಿಸುವುದರ ಜೊತೆಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಅಧಿಕಾರದ ಅಮಲಿನಲ್ಲಿ ಮನಬಂದಂತೆ ವರ್ತಿಸುವವರಿಗೆ ಎಚ್ಚರಿಕೆ ನೀಡಬೇಕು ಎಂದು ಒತ್ತಾಯಿಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷ ಶಿವಶಂಕರ್ ಮಾತನಾಡಿ, ದಲಿತರ ಮೇಲೆ ಇನ್ನೂ ದಬ್ಬಾಳಿಕೆ, ದೌರ್ಜನ್ಯ ಮುಂದುವರೆದಿರುವುದು ನಾಚಿಕೆಗೇಡಿನ ಸಂಗತಿ. ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ಮುನಿರತ್ನ ನಡೆದುಕೊಂಡಿರುವ ರೀತಿ ಕ್ಷಮಾರ್ಹವಲ್ಲ. ದಲಿತರ ಮತ ಪಡೆದು ಶಾಸಕರಾಗಿ ಅವರ ಬಗ್ಗೆಯೇ ಕೀಳಾಗಿ ಮಾತನಾಡುವ ಪ್ರವೃತ್ತಿ ಬೆಳೆಸಿಕೊಂಡಿರುವ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಾಧ್ಯಕ್ಷ ಕಲ್ಲಳ್ಳಿ ಕುಮಾರ್, ಗುತ್ತಿಗೆದಾರನೊಂದಿಗೆ ಅಸಹ್ಯವಾಗಿ ಮಾತನಾಡಿರುವ ಮುನಿರತ್ನ, ಹೆಣ್ಣು ಮಕ್ಕಳನ್ನು ಸ್ವಹಿತಾಸಕ್ತಿಗೆ ದುರ್ಬಳಕೆ ಮಾಡಿಕೊಂಡಿರುವುದು ಬಯಲಾಗುತ್ತಿದೆ. ತನ್ನದೇ ಆದ ಗೂಂಡಾ ಪಡೆ ಕಟ್ಟಿಕೊಂಡು ಹಲವು ರೀತಿಯ ಅನ್ಯಾಯ, ಅಕ್ರಮಗಳಲ್ಲಿ ಭಾಗಿಯಾಗಿರುವುದಾಗಿ ಹೇಳಲಾಗುತ್ತಿದೆ. ಅವರನ್ನು ಗೌರವಯುತ ಶಾಸಕ ಸ್ಥಾನದಿಂದ ವಜಾಗೊಳಿಸಿ, ಗಡಿಪಾರು ಮಾಡಬೇಕು ಎಂದರು.

ಉಪಾಧ್ಯಕ್ಷ ಮಲ್ಲೇಶ್ ಲಿಂಗರಾಜು, ಯುವ ಸಾಹಿತಿ ವರಹಳ್ಳಿ ಆನಂದ, ಜಗದೀಶ, ವಿಶ್ವ ಪ್ರಸಾದ್, ನವೀನ ಸೇರಿದಂತೆ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬ್ಯಾಂಕಿಂಗ್ ನೇಮಕಾತಿ ಭ್ರಷ್ಟಾಚಾರ ಮುಕ್ತ; ಪಾರದರ್ಶಕ

ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಕಲ್ಯಾಣ್ ಕುಮಾರ್ ವಿವರಣೆ



ಎಸ್‌ಎಸ್‌ಸಿ ಮತ್ತು ಬ್ಯಾಂಕಿಂಗ್ ಪರೀಕ್ಷೆಗಳ ಉಚಿತ ತರಬೇತಿ ಶಿಬಿರವನ್ನು ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಕಲ್ಯಾಣ್ ಕುಮಾರ್ ಉದ್ಘಾಟಿಸಿದರು. ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ ಎಸ್. ರಾಧಾಕೃಷ್ಣ, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ಜೈನಹಳ್ಳಿ ಸತ್ಯನಾರಾಯಣ ಗೌಡ, ಕಾರ್ಯದರ್ಶಿ ಹೆಚ್.ಬಾಲಕೃಷ್ಣ ಮತ್ತಿತರರಿದ್ದರು.

ಮೈಸೂರು, ಸೆ.20(ಎಂಕೆ)– ಬ್ಯಾಂಕಿಂಗ್ ಕ್ಷೇತ್ರ ಭ್ರಷ್ಟಾಚಾರ ಮುಕ್ತ ಮತ್ತು ಪಾರದರ್ಶಕ ಆಯ್ಕೆಗೆ ದೇಶದಲ್ಲೇ ಹೆಸರಾಗಿದ್ದು, ಕೇವಲ ಆರು ತಿಂಗಳೊಳಗೆ ಅರ್ಜಿಯಿಂದ ಆಯ್ಕೆ ಪ್ರಕ್ರಿಯೆಯೇ ಮುಗಿಯುತ್ತದೆ ಎಂದು ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಹಾಗೂ ಎಸ್‌ಬಿಐ ಬ್ಯಾಂಕ್ ಅಧಿಕಾರಿಗಳ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಕಲ್ಯಾಣ್ ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಲಕ್ಷ್ಮಿಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಯ ಸಹಯೋಗದಲ್ಲಿ ನಡೆಯುತ್ತಿರುವ ಎಸ್‌ಎಸ್‌ಸಿ ಮತ್ತು ಬ್ಯಾಂಕಿಂಗ್ ಪರೀಕ್ಷೆಗಳ ಉಚಿತ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಉದ್ಯೋಗಿಗಳ ಆಯ್ಕೆ ಪ್ರಕ್ರಿಯೆ ಹಲವು ವಿವಾದಗಳಿಗೆ ಒಳಗಾಗಿ ನಾಲ್ಕೈದು ವರ್ಷಗಳು ಹಿಡಿಯುತ್ತವೆ. ಆದರೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೇವಲ ಆರು ತಿಂಗಳ ಅವಧಿಯಲ್ಲಿ ಆಯ್ಕೆ ಪ್ರಕಿಯೆ ಮುಕ್ತಾಯ ಗೊಳ್ಳುತ್ತದೆ. ಬ್ಯಾಂಕಿಂಗ್ ಹುದ್ದೆಗಳು ಉತ್ತಮ ಸಂಬಳ ಮತ್ತು ಇತರೆ ಆಕರ್ಷಕ ಭತ್ಯೆಗಳನ್ನು ಹೊಂದಿರುವುದರಿಂದ ಗೌರವಯುತ ಜೀವನ ನಡೆಸಬಹುದು ಎಂದು ತಿಳಿಸಿದರು.

ಸಾಮಾನ್ಯವಾಗಿ ಇಂದು ಬಹುತೇಕ ಬ್ಯಾಂಕ್‌ಗಳಲ್ಲಿ ಉತ್ತರ ಭಾರತದವರೇ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ನೋಡುತ್ತಿದ್ದೇವೆ. ನಮ್ಮ ಕನ್ನಡಿಗರಲ್ಲಿ ಈ ಕುರಿತು ತಿಳುವಳಿಕೆ ಕಡಿಮೆ. ಅಲ್ಲದೆ ಬ್ಯಾಂಕ್ ಪರೀಕ್ಷೆಗಳು ಕಷ್ಟ ಎನ್ನುವ ತಪ್ಪು ಮನೋಭಾವ ಇರುವುದೇ ಇದಕ್ಕೆ ಕಾರಣ. ಇತ್ತೀಚೆಗೆ ಕರ್ನಾಟಕ ಸರ್ಕಾರ ಬ್ಯಾಂಕಿಂಗ್ ಪರೀಕ್ಷೆಗಳನ್ನು ಕನ್ನಡದಲ್ಲೂ ಬರೆಯಲು ಕೇಂದ್ರಕ್ಕೆ ಒತ್ತಡ ಹಾಕುತ್ತಿರುವುದು ಸ್ವಾಗತಾರ್ಹ. ವಿದ್ಯಾರ್ಥಿ ಜೀವನದಲ್ಲಿ ಹದಿನೈದು ವರ್ಷ ಓದಿದವರು ಕೇವಲ ಆರು ತಿಂಗಳು ಛಲಬಿಡದೆ, ಕಷ್ಟಪಟ್ಟು, ನಿರಂತರ ಅಧ್ಯಯನ ಮಾಡಿದರೆ ನಿಮ್ಮ ಜೀವನ ಕಟ್ಟಿಕೊಳ್ಳುವುದಲ್ಲದೆ ನಿಮ್ಮ ಮನೆಮಂದಿ ಮತ್ತು ನೆಂಟರ ಬದುಕನ್ನು ಕಟ್ಟಿಕೊಳ್ಳಲು ನೆರವಾಗಬಹುದು ಎಂದರು.

ಪೋಷಕರು ಮಕ್ಕಳಿಗೆ ಕಷ್ಟಗಳನ್ನು ತೋರಿಸಿ ಹಾಗೂ ಹೇಳಿ ಬೆಳೆಸಿದರೆ ಮಾತ್ರ ಅವರ ಅಭಿವೃದ್ಧಿ ಸಾಧ್ಯ. ಆದರೆ ಇಂದಿನ ಪೋಷಕರು ಇದನ್ನು ಮಾಡುತ್ತಿಲ್ಲ. ಹೀಗಾಗಿ ಯುವ ಸಮುದಾಯ ದಾರಿ ತಪ್ಪುತ್ತಿದೆ ಎಂದರಲ್ಲದೆ ಹುದ್ದೆಗಳು ಕಡಿಮೆ ಇದೆ ಅರ್ಜಿಗಳು ಹೆಚ್ಚಿವೆ ಎಂದು ಗಾಬರಿ ಪಡಬೇಡಿ. ಕೇವಲ ಒಂದು ಹುದ್ದೆಯಿದ್ದರೂ ಪ್ರಯತ್ನಪಡಬೇಕೆಂಬ ಛಲ ನಿಮ್ಮದಾಗಿರಲಿ. ಕೂಡು, ಕಳೆ, ಗುಣಿಸು ಮತ್ತು ಭಾಗಿಸು ಇಷ್ಟೇ ಬ್ಯಾಂಕಿಂಗ್ ಪರೀಕ್ಷೆಗಳ ವಸ್ತುವಿಷಯ ಎಂದು ತಿಳಿಸಿಕೊಟ್ಟರು.

ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ ಎಸ್. ರಾಧಾಕೃಷ್ಣ, ಹಿರಿಯ ಸಹಕಾರಿ ವೈ.ಎನ್. ಶಂಕರೇಗೌಡ, ಜೈನಹಳ್ಳಿ ಸತ್ಯನಾರಾಯಣ ಗೌಡ, ಕಾರ್ಯದರ್ಶಿ ಹೆಚ್.ಬಾಲಕೃಷ್ಣ, ಪ್ರೊ.ಕೃ.ಪ. ಗಣೇಶ, ಕೆ.ವೈ.ನಾಗೇಂದ್ರ, ಸಂಪನ್ಮೂಲ ವ್ಯಕ್ತಿಗಳಾದ ಡಾ. ಹೊನ್ನಯ್ಯ, ರೋಹನ್ ರವಿಕುಮಾರ್, ಸಿ.ಕೆ.ಕಿರಣ್ ಕೌಶಿಕ್ ಮತ್ತಿತರರಿದ್ದರು.

ಕಿಕ್ಕೇರಿ ಗ್ರಾಪಂ ಅಧ್ಯಕ್ಷರಾಗಿ ಕೆ.ಜಿ. ಪುಟ್ಟರಾಜು



ಕಿಕ್ಕೇರಿ ಗ್ರಾಪಂ ಕಚೇರಿಯಲ್ಲಿ ಶುಕ್ರವಾರ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಕೆ.ಜಿ. ಪುಟ್ಟರಾಜು ಅವಿರೋಧವಾಗಿ ಆಯ್ಕೆಯಾದರು. ಜ್ಯೋತಿ ದಯಾನಂದ್, ಎಸ್.ಕೆ. ಬಾಲಕೃಷ್ಣ, ಕೆ.ಆರ್. ಕೃಷ್ಣ, ಕೆ.ಬಿ. ಚಂದ್ರಶೇಖರ್, ತಾಯಮ್ಮ, ಸರಸ್ವತಿ, ಜ್ಯೋತಿ, ರೇಣುಕಮ್ಮ, ಭಾರತಿ, ಗ್ರಾಮದ ಮುಖಂಡರು ಇದ್ದರು.

ಕಿಕ್ಕೇರಿ, ಸೆ.20– ಪ್ರತಿಷ್ಠಿತ ಗ್ರಾಮ ಪಂಚಾಯಿತಿಯಾದ ಕಿಕ್ಕೇರಿ ಗ್ರಾಪಂ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಸದಸ್ಯ ಕೆ.ಜಿ. ಪುಟ್ಟರಾಜು ಅವಿರೋಧ ವಾಗಿ ಆಯ್ಕೆಯಾದರು.

ಎರಡನೇ ಸುತ್ತಿನ ಗ್ರಾಪಂ ಅಧ್ಯಕ್ಷರ ಅಧಿಕಾರ ಚುಕ್ಕಾಣಿಗಾಗಿ ಬಿಜೆಪಿ ಹಾಗೂ ಜೆಡಿಎಸ್ ಬೆಂಬಲಿತ ಸದಸ್ಯರು ಒಡಂಬಡಿಕೆ ಮಾಡಿಕೊಂಡಿದ್ದರು. ಒಡಂಬಡಿಕೆ ಸೂತ್ರದಂತೆ ಈ ಹಿಂದೆ ಇದ್ದ ಎಸ್.ಕೆ. ಬಾಲಕೃಷ್ಣ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕೆ.ಆರ್. ಪುಟ್ಟರಾಜು ಬಿಟ್ಟು ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 16 ಸದಸ್ಯರು ಇರುವ ಗ್ರಾಪಂನಲ್ಲಿ 6 ಸದಸ್ಯರು ಗೈರಾಗಿದ್ದರು. ಚುನಾವಣಾಧಿಕಾರಿ ಅರುಣ್‌ಕುಮಾರ್, ಸಹ ಚುನಾವಣಾಧಿಕಾರಿಯಾಗಿ ಅನಿಲ್ ಬಾಬು, ಪಿಡಿಓ ಚಲುವರಾಜು ಕಾರ್ಯ ನಿರ್ವಹಿಸಿದರು. ಜಿಪಂ. ಮಾಜಿ ಉಪಾಧ್ಯಕ್ಷ ಕೆ.ಎಸ್. ಪ್ರಭಾಕರ್, ಗ್ರಾಪಂ. ಉಪಾಧ್ಯಕ್ಷೆ ಜ್ಯೋತಿ ದಯಾನಂದ್, ಸದಸ್ಯರಾದ ಎಸ್.ಕೆ. ಬಾಲಕೃಷ್ಣ, ಕೆ.ಆರ್. ರಾಜೇಶ್, ಕೆ.ಬಿ. ಚಂದ್ರಶೇಖರ್, ಕೆಆರ್. ಕೃಷ್ಣ ರೇಣುಕಾ ಅನಂತ, ಭಾರತಿ ಪ್ರಕಾಶ್, ಸರಸ್ವತಿ ಗೋವಿಂದರಾಜು, ಗ್ರಾಮ ಮುಖಂಡರು ಇದ್ದರು.

ರಾಜ್ಯ ಸರ್ಕಾರ ಹಿಂದೂಗಳಿಗೆ ರಕ್ಷಣೆ ನೀಡುತ್ತಿಲ್ಲ

ವಿಪಕ್ಷ ನಾಯಕ ಆರ್. ಅಶೋಕ್ ಗಂಭೀರ ಆರೋಪ



ಬಿಜೆಪಿ ಕಚೇರಿಯಲ್ಲಿ ಮಾತನಾಡುತ್ತಿರುವ ವಿಪಕ್ಷ ನಾಯಕ ಆರ್. ಅಶೋಕ್.

ಮಂಡ್ಯ, ಸೆ.20– ರಾಜ್ಯದ ಕಾಂಗ್ರೆಸ್ ಸರ್ಕಾರ ಹಿಂದೂಗಳ ರಕ್ಷಣೆಗೆ ನಿಲ್ಲದೆ, ಕೋಮುವಾದ ಶಕ್ತಿಗಳನ್ನು ಸಲಹುತ್ತಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ಶುಕ್ರವಾರ ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇರಳ ಸೇರಿದಂತೆ ಹೊರ ದೇಶಗಳಿಂದ ಇಲ್ಲಿಗೆ ಬಂದು ಗಲಭೆ ಮಾಡುತ್ತಿ ದ್ದಾರೆ. ಮಂಡ್ಯ ಜಿಲ್ಲೆಯನ್ನು ಅವರ ತೆಕ್ಕೆಗೆ ತೆಗೆದುಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಸಿಕ್ಕಿರುವ ಭಯೋತ್ಪಾದಕರು ಇನ್ನು 30 ವರ್ಷದಲ್ಲಿ ಭಾರತವನ್ನು ಪಾಕಿಸ್ತಾನ ಮಾಡುತ್ತೇವೆ ಎಂದು ಕರಪತ್ರಗಳನ್ನು ಹಂಚಿದ್ದಾರೆ. ಇಂತಹ ಘಟನೆಗಳು ನಡೆದಾಗ ನಾವು ಸಹ ಹೋರಾಟ ಮಾಡಬೇಕೆಂದು ಅವರು ಕರೆ ನೀಡಿದರು. ಶೇ.95ರಷ್ಟು ಹಿಂದೂ ಗಳಿರುವ ಅಪರೂಪದ ಜಿಲ್ಲೆ ಮಂಡ್ಯ ಇಲ್ಲೂ ಕೋಮು ದಳ್ಳುರಿ ಹಚ್ಚಲು ಕಾಂಗ್ರೆಸ್‌ನವರು ಪ್ರಯತ್ನಿಸುತ್ತಿದ್ದಾರೆ. ನಾಗಮಂಗಲದಲ್ಲಿ ಕಳೆದ ಬಾರಿಯೂ ಗಣೇಶ ಮೂರ್ತಿ ವಿಸರ್ಜನೆ ವೇಳೆ ಗಲಾಟೆಯಾಗಿತ್ತು. ಹೀಗಿದ್ದರೂ ಮುನ್ನೆಚ್ಚರಿಕೆ ತೆಗೆದುಕೊಳ್ಳದಿರುವುದು ಏಕೆ ಎಂದು ಅಶೋಕ್ ಪ್ರಶ್ನಿಸಿದರು.

ನಾಗಮಂಗಲದ ಗಲಭೆ ನಡೆಯಲು ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆ ಕಾರಣ. ಹೀಗಾಗಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಎಂಬಂತೆ ಕೆಳಗಿನ ಅಧಿಕಾರಿಗಳಾದ ಡಿವೈಎಸ್ಪಿ ಮತ್ತು ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡಿದ್ದಾರೆ ಎಂದರು. ವಿಸರ್ಜನೆ ವೇಳೆ ಸರಿಯಾಗಿ ಬಂದೋಬಸ್ತ್ ಮಾಡಿದ್ದರೆ ಗಲಾಟೆ ಆಗುತ್ತಿರಲಿಲ್ಲ. ಗಲಾಟೆ ಮಾಡಿಸಿದವರು ಕಾಂಗ್ರೆಸ್‌ನವರು. ಬೆಂಕಿ ಇಟ್ಟಿದ್ದು ನೀವೇ ತಾನೇ, ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಹಲವು ಗಲಾಟೆಗಳು ನಡೆಯುತ್ತಿವೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಬಂದ ಮೇಲೆ ಮುಸ್ಲಿಮರು ಎದ್ದು ಕುಳಿತಿದ್ದಾರೆ ಮುಸ್ಲಿಂ ಪರವಾಗಿ ಕಾಂಗ್ರೆಸ್ ನಾಯಕರು ನಿಲ್ಲುತ್ತಿದ್ದಾರೆ ಎಂದು ಹೇಳಿದರು.

ಶಾಸಕ ಮುನಿರತ್ನ ಅವರಿಗೆ ನೋಟಿಸ್ ಕೊಟ್ಟಿದ್ದೇವೆ. ಎಫ್‌ಎಸ್‌ಎಲ್ ವರದಿ ಬಂದ ಮೇಲೆ ಕ್ರಮ ವಹಿಸುತ್ತೇವೆ. ಕಾಂಗ್ರೆಸ್‌ನವರು ಸಂಚು ರೂಪಿಸಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕುಟುಂಬ ಮುಗಿಸಲು ಹೊರಟಿದ್ದರು. ಆಗ ಏಕೆ ಕಾಂಗ್ರೆಸ್‌ನ ಒಕ್ಕಲಿಗರು ಹೋರಾಟ ಮಾಡಲಿಲ್ಲ ಎಂದು ಪ್ರಶ್ನಿಸಿದರು. ಈ ವೇಳೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ಮುಖಂಡ ರಾದ ಇಂಡುವಾಳು ಸಚ್ಚಿದಾನಂದ, ಅಶೋಕ್ ಕುಮಾರ್ ಇದ್ದರು.

ನಾಗಮಂಗಲ ಗಲಭೆಯಲ್ಲಿ ಜೈಲು ಸೇರಿದ ಯುವಕರ ಕುಟುಂಬಕ್ಕೆ ಕದಬಹಳ್ಳಿ ರೈತರ ನೆರವು



ಜೈಲು ಪಾಲಾದವರ ಮನೆಗೆ ಸುತ್ತಮುತ್ತಲ ಗ್ರಾಮದ ರೈತರು ಭೇಟಿ, ಸಾಂತ್ವನ ಹೇಳಿದರು.

ನಾಗಮಂಗಲ, ಸೆ.20– ಎರಡು ಕೋಮುಗಳ ನಡುವೆ ನಡೆದ ಗಲಾಟೆಯಲ್ಲಿ ಬದರಿಕೊಪ್ಪಲು ಗ್ರಾಮದ ಗಜಪಡೆ ಸೇವಾ ಸಮಿತಿಯ ಸುಮಾರು 20 ಮಂದಿ ಯುವಕರು ಜೈಲು ಪಾಲಾಗಿದ್ದು, ಕುಟುಂಬ ಅತಂತ್ರ ಸ್ಥಿತಿಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಕದಬಹಳ್ಳಿಯ ರೈತರು ನೆರವು ನೀಡಲು ಮುಂದಾಗಿದ್ದಾರೆ.

ಕದಬಹಳ್ಳಿ ವ್ಯಾಪ್ತಿಯ ಸುಮಾರು ಹತ್ತಾರು ಹಳ್ಳಿಗಳ ರೈತಾಪಿ ವರ್ಗದವರು ಸಾರ್ವಜನಿಕರಿಂದ ಧನ ಸಂಗ್ರಹ ಮಾಡಿ ಇಂದು ಬದರಿಕೊಪ್ಪಲು ಗ್ರಾಮಕ್ಕೆ ತೆರಳಿ ಜೈಲು ಪಾಲಾದ ಯುವಕರ ಕುಟುಂಬದ ಸದಸ್ಯರಿಗೆ ಧೈರ್ಯ ಹೇಳಿ, ನಿಮ್ಮ ಬೆಂಬಲಕ್ಕೆ ನಾವು ಇದ್ದೇವೆ ಎಂದು ಧನಸಹಾಯ ಮಾಡಿದರು. ಸುಮಾರು 20 ಕುಟುಂಬಗಳಿಗೆ ತಲಾ ಎರಡು ಸಾವಿರದಂತೆ ಧನಸಹಾಯ ಮಾಡಿದ ರೈತರು ನಿಮ್ಮ ಬೆಂಬಲಕ್ಕೆ ನಾವಿದ್ದೇವೆ ಎಂದು ಕುಟುಂಬಸ್ಥರಿಗೆ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ರೈತ ಮುಖಂಡರಾದ ಧನಂಜಯ, ನಾಗರಾಜು, ಮಂಜು ಕದಬಹಳ್ಳಿ, ಪರಮೇಶ್ವರ ಚಾರ್, ಸೋಮಣ್ಣ, ಗ್ರಾಮದ ನಾಗರಾಜು, ಧನಂಜಯ, ಅಶೋಕ್ ಹಾಗೂ ಗ್ರಾಮದ ಮುಖಂಡರು ಭಾಗವಹಿಸಿದ್ದರು.

ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ 650 ಕ್ರೀಡಾಪಟುಗಳು



ಪಾಂಡವಪುರ ತಾಲೂಕಿನ ಪಿಎಸ್‌ಎಸ್‌ಕೆ ಪ್ರೌಢಶಾಲೆಯಲ್ಲಿ ನಡೆದ ಜಿಲ್ಲಾಮಟ್ಟದ ಕಬ್ಬಡಿ ಪಂದ್ಯಾವಳಿಗೆ ಗೆಲುವಿಗಾಗಿ ಸೆಣಸಾಟ ನಡೆಸುತ್ತಿರುವ ವಿದ್ಯಾರ್ಥಿಗಳು.

ಪಾಂಡವಪುರ, ಸೆ.20– ತಾಲೂಕಿನ ಪಿಎಸ್‌ಎಸ್‌ಕೆ ಪ್ರೌಢಶಾಲೆಯಲ್ಲಿ ಜಿಲ್ಲಾ ಮಟ್ಟದ 14 ಮತ್ತು 17 ವರ್ಷ ವಯೋಮಿತಿಯ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಬಾಲಕ ಮತ್ತು ಬಾಲಕಿಯರ ಕಬ್ಬಡಿ ಪಂದ್ಯಾವಳಿ ಶುಕ್ರವಾರ ನಡೆಯಿತು. 650ಕ್ಕೂ ಹೆಚ್ಚು ಕ್ರೀಡಾ ಪಟುಗಳು ಭಾಗವಹಿಸಿದ್ದರು.

ಜಿಪಂ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ, ಪಿಎಸ್‌ಎಸ್‌ಕೆ ಪ್ರೌಢಶಾಲೆಯ ಸಂಯುಕ್ತಾಶ್ರಮದಲ್ಲಿ ನಡೆದ ಜಿಲ್ಲಾ ಮಟ್ಟದ ಬಾಲಕ ಮತ್ತು ಬಾಲಕಿಯರ ಕಬ್ಬಡಿ ಪಂದ್ಯಾವಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ರವಿಕುಮಾರ್ ಚಾಲನೆ ನೀಡಿದರು.

ಪಂದ್ಯಾವಳಿಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಬಾಲಕಿಯರ–8, ಬಾಲಕರ–8, ಹಾಗೂ ಪ್ರೌಢಶಾಲಾ ವಿಭಾಗದಿಂದ ಬಾಲಕಿಯರ–8, ಬಾಲಕ–8 ತಂಡಗ ಳಿಂದ 650ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲಾ ತಂಡದ ಕ್ರೀಡಾಪಟುಗಳು ಗೆಲುವಿಗಾಗಿ ಸೆಣಸಾಟ ನಡೆಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ರವಿಕುಮಾರ್ ಮಾತನಾಡಿ, ಕ್ರೀಡಾಕೂಟಗಳಲ್ಲಿ ಭಾಗವಹಿಸಿರುವ ಎಲ್ಲಾ ಕ್ರೀಡಾಪಟುಗಳು ಉತ್ತಮವಾಗಿ ಆಟವಾಡುವ ಮೂಲಕ ಕ್ರೀಡಾಸ್ಪೂರ್ತಿ ಮೆರೆಯಬೇಕು. ಭಾಗವಹಿಸಿರುವ ಪ್ರತಿಯೊಂದು ತಂಡವು ಸಹ ಗೆಲ್ಲಬೇಕು ಎಂಬ ವಿಶ್ವಾಸದಲ್ಲಿ ಆಟವಾಡುತ್ತಾರೆ. ಆದರೆ, ಕ್ರೀಡೆಯಲ್ಲಿ ಗೆಲುವು ಸೋಲು ಸಾಮಾನ್ಯ. ಕ್ರೀಡಾಪಟುಗಳು ಸೋಲು–ಗೆಲುವು ಎರಡನ್ನು ಸಮಾನವಾಗಿ ಸ್ವೀಕಾರಮಾಡಬೇಕು ಎಂದರು.

ಧ್ವಜಾರೋಹಣವನ್ನು ಪಿಎಸ್‌ಎಸ್‌ಕೆ ಎಂಡಿ ರೇಖಾ ನೇರವೇರಿಸಿದರು. ಕ್ರೀಡಾ ಜ್ಯೋತಿಯನ್ನು ನಿರಾಣಿ ಶುಗರ್ಸ್ ನ ಸಿಜೆಎಂ ಸಂಜಿತ್ ಕುಮಾರ್ ಸ್ವೀಕರಿಸಿದರು. ಇದೇ ವೇಳೆ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ದೈಹಿಕ ಶಿಕ್ಷಕ ಚಿಕ್ಕಬ್ಯಾಡರಹಳ್ಳಿ ಶಾಲೆಯ ರಾಜಶೇಖರ್, ಕುಂತಿಬೆಟ್ಟ ಶಾಲೆಯ ಪಾರ್ಥೇಗೌಡ ಹಾಗೂ ವಿಜಯ ಕಾಲೇಜಿನ ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು. ಇದೇ ವೇಳೆ ರಾಷ್ಟ್ರಮಟ್ಟದ ಕ್ರೀಡಾಪಟುಗಳಾದ ಐಶ್ವರ್ಯ, ಚಿನ್ಮಯ್, ಲಕ್ಷ್ಮಿ, ಹೊನ್ನ, ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಕೆನ್ನಾಳು ಗ್ರಾಪಂ ಅಧ್ಯಕ್ಷ ಪ್ರಕಾಶ್, ದೈಹಿಕ ಶಿಕ್ಷಣ ಪರಿವೀಕ್ಷಕ ಮಾದೇಶ್, ಪಿಎಸ್‌ಎಸ್‌ಕೆ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ನಂದೀಶ್, ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಬಿ.ಶೈಲಜಾ, ರಾಜೇಶ್, ದೈಹಿಕ ಶಿಕ್ಷಕನಾಗೇಂದ್ರ ವಿಎಸ್‌ಎಸ್‌ಎನ್‌ಬಿ ಮಾಜಿ ಅಧ್ಯಕ್ಷ ದೇವಾನಂದ್, ಮುಖಂಡರಾದ ಮಂಜುನಾಥ್, ರಾಮು, ಪ್ರೌಢಶಾಲೆಯ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಕೇಶವ ಮೂರ್ತಿ, ಪ್ರಾ.ಶಾ. ಸ.ಶಿ.ಸಂಘದ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ವಿಜಯ ಕುಮಾರ್, ದೈ.ಶಿ. ಸಂಘದ ಅಧ್ಯಕ್ಷ ಶಿವಕುಮಾರ್, ಮರಿಸ್ವಾಮಿಗೌಡ, ಎಂ.ಜಯರಾಮು, ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ರಮೇಶ್, ಎಚ್.ಆರ್.ಕೃಷ್ಣೇಗೌಡ ಸೇರಿದಂತೆ ಹಲವು ಭಾಗವಹಿಸಿದ್ದರು.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದವರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ಶಾಸಕ ಮಧು ಜಿ ಮಾದೇಗೌಡ



ಮಿಮ್ಸ್ ಆಸ್ಪತ್ರೆಗೆ ಶಾಸಕ ಮಧು ಜಿ.ಮಾದೇಗೌಡ ಭೇಟಿ ಯೋಗ ಕ್ಷೇಮ ವಿಚಾರಿಸಿದರು.

ಭಾರತೀನಗರ, ಸೆ.20– ಇಲ್ಲಿಗೆ ಸಮೀಪದ ಮಣಿಗೆರೆ ಗ್ರಾಮದಲ್ಲಿ ಕಾರು–ಗೂಡ್ಸ್ ಟೆಂಪೋ ನಡುವೆ ಸಂಭವಿಸಿದ ಡಿಕ್ಕಿಯಲ್ಲಿ ಗಾಯಗೊಂಡವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ವಿಧಾನ ಪರಿಷತ್ ಸದಸ್ಯ ಶಾಸಕ ಮಧು ಜಿ.ಮಾದೇಗೌಡ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಮಿಮ್ಸ್‌ನಲ್ಲಿ ದಾಖಲಾಗಿರುವ ಗಾಯಾಳುಗಳ ಯೋಗ ಕ್ಷೇಮ ವಿಚಾರಿಸಿದ ಅವರು, ಧೈರ್ಯದಿಂದ ಇರುವಂತೆ ಸಂತ್ರಸ್ತರು ಮತ್ತು ಅವರ ಕುಟುಂಬದ ಸದಸ್ಯರಿಗೆ ಆತ್ಮವಿಶ್ವಾಸ ತುಂಬಿದರು.

ಅಲ್ಲದೆ, ಗಾಯಾಳುಗಳಿಗೆ ನೀಡುತ್ತಿರುವ ಚಿಕಿತ್ಸೆ ಕುರಿತು ವೈದ್ಯರಿಂದ ಮಾಹಿತಿ ಪಡೆದರು. ನಂತರ ಮಾತನಾಡಿದ ಅವರು, ನುರಿತ ವೈದ್ಯರ ಮೇಲ್ವಿಚಾರಣೆಯಲ್ಲಿ ಎಲ್ಲರಿಗೂ ಆದ್ಯತೆಯ ಮೇಲೆ ಸೂಕ್ತ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ಎಲ್ಲಾ ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದರು. ಗಾಯಾಳುಗಳು ಮತ್ತು ಅವರ ಕುಟುಂಬದ ಸದಸ್ಯರು ಧೃತಿಗೆಡಬಾರದು. ಸರ್ಕಾರ ತಮ್ಮೊಂದಿಗೆ ಇರಲಿದೆ ಎಂದು ಹೇಳಿದರು. ಇದೇ ವೇಳೆ ಮದ್ದೂರು ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯರಾದ ಭರತೇಶ್, ಬಿ.ಗಿರೀಶ್, ಮುಖಂಡರಾದ ಅಪ್ಪಾಜಿ ಮುಡೀನಹಳ್ಳಿ, ಅಣ್ಣೂರು ಸಿದ್ದಪ್ಪ ಇತರರು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಸೆ.20– ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್ –2 ಕೆರಗೋಡು ಎನ್ ಜೆ ವೈ ಫೀಡರ್‌ನಲ್ಲಿ ತುರ್ತು ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಸೆ.21 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಕೆರಗೋಡು, ಕಲ್ಮಂಟಿದೊಡ್ಡಿ, ಕೆಬ್ಬಹಳ್ಳಿ ಗರೀಬಿ ಸೈಟ್, ಅಂಕನದೊಡ್ಡಿ, ಮರಲಿಂಗನ ದೊಡ್ಡಿ, ಹೊಸೂರು, ಮುದ್ದನದೊಡ್ಡಿ, ದ್ಯಾಪಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮಂಡ್ಯ ಸೆಸ್ಕ್ ಕಾ ಮತ್ತು ಪಾ ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.24, ಮದ್ದೂರು ಪಿಕಾರ್ಡ್ ಬ್ಯಾಂಕಿನ ವಾರ್ಷಿಕ ಮಹಾಸಭೆ

ಮಂಡ್ಯ, ಸೆ.20– ಮದ್ದೂರು ಪಿಕಾರ್ಡ್ ಬ್ಯಾಂಕಿನ 2023–24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆ.24 ರಂದು ಮಂಗಳವಾರ ಬೆಳಗ್ಗೆ 11 ಗಂಟೆಗೆ ಶಿವ ಕನ್ವೆನ್ಷನ್ ಹಾಲ್‌ನಲ್ಲಿ ಮದ್ದೂರು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾದ ಕೆ.ಬಿ ಸಿದ್ದೇಗೌಡರ ಅಧ್ಯಕತೆಯಲ್ಲಿ ಆಯೋಜಿಸಲಾಗಿದೆ. ಬ್ಯಾಂಕಿನ ಸದಸ್ಯರು ಸಭೆಗೆ ಹಾಜರಾಗುವಂತೆ ಮದ್ದೂರು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತದ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ

ಭಾಷೆಯ ಬಗ್ಗೆ ರಾಜೀ ಪ್ರಶ್ನೆಯೇ ಉದ್ಭವಿಸು ವುದಿಲ್ಲ. ಕನ್ನಡದ ವಾತಾವರಣವನ್ನು ವಿಸ್ತರಿಸಲು, ಭಾಷೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸರ್ಕಾರ ಬದ್ಧವಾಗಿದೆ ಎಂದರು. 1956ರಲ್ಲಿ ಏಕೀಕರಣ ವಾದರೂ ರಾಜ್ಯಕ್ಕೆ ಮೈಸೂರು ಸಂಸ್ಥಾನ ಎಂದು ಹೆಸರಿತ್ತು. 1973ರಲ್ಲಿ ಅಂದು ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರು 'ಕರ್ನಾಟಕ' ಎಂದು ನಾಮಕರಣ ಮಾಡಿದರು. ಹೀಗೆ ಕರ್ನಾಟಕ ಎಂದು ನಾಮಕರಣಗೊಂಡು 50 ವರ್ಷದ ಸುವರ್ಣ ಸಂಭ್ರಮವನ್ನು 2022–23ರಲ್ಲಿಯೇ ಬಿಜೆಪಿ ಸರ್ಕಾರ ಮಾಡಬೇಕಾಗಿತ್ತು. ಆದರೆ, ಅವರು ಆಚರಿಸಲಿಲ್ಲ. ಹೀಗಾಗಿ ನಮ್ಮ ಸರ್ಕಾರ ವರ್ಷವಿಡೀ ಸುವರ್ಣ ಸಂಭ್ರಮ ಕಾರ್ಯಕ್ರಮವನ್ನು ನಡೆಸಲು ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

ಕರ್ನಾಟಕ ಮತ್ತು ಕನ್ನಡ ಭಾಷೆ ರಾಜ್ಯ ಏಳು ಕೋಟಿ ಜನರ ಉಸಿರಾಗಬೇಕು. ಆದರೆ, ಕನ್ನಡಿಗರು ಉದಾರ ಮನೋಭಾವುಳ್ಳವರು. ಆ ಕಾರಣದಿಂದ ರಾಜ್ಯದಲ್ಲಿ ಯಾವ ಭಾಷೆ ಮಾತನಾಡಿದರೂ ಜೀವನ ಸಾಗಿಸಬಹುದು ಎಂಬಂತಾಗಿದೆ. ತಮಿಳುನಾಡಿನಲ್ಲಿ ತಮಿಳಿನಲ್ಲಿ, ಕೇರಳದಲ್ಲಿ ಮಲಯಾಳಂನಲ್ಲಿ, ಆಂಧ್ರದಲ್ಲಿ ತೆಲುಗಿನಲ್ಲಿ, ಮಹಾರಾಷ್ಟ್ರದಲ್ಲಿ ಮರಾಠಿಯಲ್ಲೇ ವ್ಯವಹರಿಸುತ್ತಾರೆ. ಆದರೆ ನಮ್ಮಲ್ಲಿ ಕನ್ನಡ ಬಿಟ್ಟು ಅವರವರ ಭಾಷೆಯಲ್ಲೇ ಹೆಚ್ಚು ವ್ಯವಹರಿಸಲು ಉತ್ಸುಕರಾಗಿ ಉದಾರಿ ಅನ್ನಿಸಿಕೊಂಡಿದ್ದೇವೆ. ಕನ್ನಡದ ವಾತಾವರಣವನ್ನು ಗಟ್ಟಿಗೊಳಿಸಲು ಎಲ್ಲರೂ ಪಣತೊಡಬೇಕು. ನಾವು ಯಾವ ಭಾಷೆಯನ್ನು ದ್ವೇಷಿಸಬಾರದು. ಸಾಧ್ಯವಿರುವಷ್ಟು ಭಾಷೆಗಳನ್ನೆಲ್ಲಾ ಕಲಿತರೆ ಒಳ್ಳೆಯದೆ. ಆದರೆ ಕರ್ನಾಟಕದಲ್ಲಿ ಕನ್ನಡದ ವಾತಾವರಣ ನಿರ್ಮಿಸಿ ಕನ್ನಡವನ್ನು ಪೂರ್ತಿಯಾಗಿ ಬಳಸಬೇಕು. ಇದು ಪ್ರತಿಯೊಬ್ಬ ಕನ್ನಡಿಗರ ಜವಾಬ್ದಾರಿ ಎಂದು ಅಭಿಪ್ರಾಯಪಟ್ಟರು.

ನಮ್ಮದು ಬಹುತ್ವದ ಬೀಡು: ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ಕನ್ನಡ ನಾಡು ಬಹುತ್ವದ ಬೀಡು. ಇಲ್ಲಿ ಮನುಷ್ಯ ಪ್ರೀತಿಯ ಬಹುತ್ವ ಆಚರಿಸಲ್ಪಡುತ್ತದೆ. ಆದರೆ ವಿದ್ಯಾವಂತರೇ ಬಹುತ್ವ, ಜಾತ್ಯತೀತತೆ ಕೈಬಿಟ್ಟು ತಾರತಮ್ಯ, ಕಂದಾಚಾರವನ್ನು ಆಚರಿಸುತ್ತಿರುವುದು ದುರಂತ ಎಂದು ವಿಷಾದಿಸಿದರು.

ದಿಕ್ಕಾಪಾಲಾಗಿ ಓಡಿದ ಜನ

ಆಹಾರ ನೀಡುವ ಸಂದರ್ಭದಲ್ಲಿ ಧನಂಜಯ ಹಾಗೂ ಕಂಜನ್ ಆನೆಗಳನ್ನು ಅಕ್ಕಪಕ್ಕದಲ್ಲಿ ನಿಲ್ಲಿಸಲಾಗಿತ್ತು. ಧನಂಜಯ ಇದ್ದಕ್ಕಿದ್ದಂತೆ ಕೆರಳಿ ಪಕ್ಕದಲ್ಲಿದ್ದ ಕಂಜನ್‌ಗೆ ತಿವಿದಿದ್ದಾನೆ. ಇದರಿಂದ ಎರಡು ಆನೆಗಳ ನಡುವೆ ಗಲಾಟೆಯಾಗಿದೆ. ಆದರೆ ಧನಂಜಯ ದಾಳಿಗೆ ಹೆದರಿದ ಕಂಜನ್ ಜಯಮಾರ್ತಾಂಡ ದ್ವಾರದ ಪಕ್ಕದ ಕೋಡಿ ಸೋಮೇಶ್ವರ ದೇಗುಲ ದ್ವಾರದ ಗೇಟ್ ಭೇದಿಸಿ ಹೊರ ಬರಲೆತ್ನಿಸಿದಾಗ ಧನಂಜಯ ಬೆನ್ನಟ್ಟಿದ್ದಾನೆ. ಮತ್ತೊಮ್ಮೆ ದಂತದಿಂದ ಚುಚ್ಚಿದಾಗ ಭಯದಿಂದ ಕಂಜನ್ ರಸ್ತೆಗಿಳಿದು ಓಡಿದೆ. ಅರಮನೆ ಆವರಣದಲ್ಲಿ ಮಾರಾಮಾರಿ ಸಮಯದಲ್ಲೇ ಕಂಜನ್ ಆನೆಯ ಮಾವುತ ಕೆಳಗೆ ಜಾರಿದ್ದರಿಂದ ಅದು ಕಂಗೆಟ್ಟು ಓಡಲಾರಂಭಿಸಿದೆ. ಕಂಜನ್ ಬೆನ್ನಟ್ಟಿದ ಧನಂಜಯನನ್ನು ಮಾವುತ ನಿಯಂತ್ರಿಸಲು ಹರಸಾಹಸಪಟ್ಟಿದ್ದಾನೆ. ಆದರೆ ಅದು ರೋಷದಿಂದ ಕಂಜನ್ ಮೇಲೆ ದಾಳಿಗೆ ಮುಂದಾಗಿದೆ. ಆದರೂ ಮಾವುತ ವಿಚಲಿತನಾಗದೆ ಧನಂಜಯನ ಸ್ವಲ್ಪ ದೂರದಲ್ಲೇ ನಿಯಂತ್ರಿಸಿದ್ದಾನೆ. ಆ ವೇಳೆ ದೊಡ್ಡಕೆರೆ ಮೈದಾನದತ್ತ ಓಡಿ ಅಂತರ ಕಾಯ್ದುಕೊಂಡಿದ್ದ ಕಂಜನ್‌ನನ್ನು ಮಾವುತ ನಿಯಂತ್ರಿಸಿ, ಕೆಲ ಹೊತ್ತಿನಲ್ಲೇ ಅರಮನೆ ಆವರಣಕ್ಕೆ ಕರೆತಂದಿದ್ದಾರೆ.

ತಪ್ಪಿದ ಅನಾಹುತ: ಧನಂಜಯ ಹಾಗೂ ಕಂಜನ್ ರಸ್ತೆಯತ್ತ ಓಡಿಬಂದ ವೇಳೆ ಬೆಂಗಳೂರು–ನೀಲಗಿರಿ ಹೆದ್ದಾರಿಯಲ್ಲಿ ಸಾಕಷ್ಟು ವಾಹನ ಸಂಚಾರವಿತ್ತು. ಪ್ರವಾಸಿಗರು ಸೇರಿದಂತೆ ಪಾದಚಾರಿಗಳೂ ಅಲ್ಲಿದ್ದರು. ಆನೆಗಳು ಓಡಿಬರುವುದನ್ನು ಕಂಡು ಜನ ದಿಕ್ಕಾಪಾಲಾದರು. ಧನಂಜಯನ ದಾಳಿ ಭಯದಿಂದ ಕಂಜನ್ ರಸ್ತೆಗಿಳಿದರು, ಬದಿಯೇ ಸಾಗುತ್ತಿತ್ತು. ಆದರೆ ಯಾರ ಮೇಲೂ ದಾಳಿ ಮಾಡಲಿಲ್ಲ. ಇತ್ತ ಧನಂಜಯ ಆನೆ ರಸ್ತೆಗೆ ಹೋಗದಂತೆ ಅದರ ಮೇಲಿದ್ದ ಮಾವುತ ನಿಯಂತ್ರಿಸಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ. ಒಂದು ವೇಳೆ ಧನಂಜಯ ರಸ್ತೆಯಲ್ಲೂ ಕಂಜನ್‌ನನ್ನು ಅಟ್ಟಾಡಿಸಿಕೊಂಡು ಹೋಗಿದ್ದರೆ ಭಾರೀ ಅವಘಡವೇ ಸಂಭವಿಸುತ್ತಿತ್ತು. ಸಾವು–ನೋವಾಗುವ ಸಾಧ್ಯತೆಯೂ ಇತ್ತು. ಧನಂಜಯ ಆನೆಗೆ ಕೆಲ ದಿನಗಳಿಂದ ಮದದ ಲಕ್ಷಣ ಕಾಣಿಸಿದ್ದರಿಂದ ಪ್ರತ್ಯೇಕವಾಗಿ ಕಟ್ಟಿ ಹಾಕಲಾಗುತ್ತಿತ್ತು ಎನ್ನಲಾಗಿದೆ. ಇಂದು ಸಹಜವಾಗಿ ಕಂಡುಬಂದಿದ್ದರಿಂದ ಅದನ್ನು ಕಂಜನ್ ಪಕ್ಕದಲ್ಲಿ ನಿಲ್ಲಿಸಲಾಗಿತ್ತು. ಆದರೆ ಆಹಾರ ನೀಡುವಾಗ ಇದ್ದಕ್ಕಿದ್ದಂತೆ ಕಂಜನ್ ಆನೆಗೆ ತಿವಿದಿದ್ದಲ್ಲದೆ ಅದನ್ನು ಅಟ್ಟಾಡಿಸಿಕೊಂಡು ದೊಡ್ಡ ಅವಾಂತರ ಸೃಷ್ಟಿಸಿದೆ.

ಇದೊಂದು ಅವಿಸ್ಮರಣೀಯ ಸಂದರ್ಭ

ನಿರೀಕ್ಷೆ ಇರಲಿಲ್ಲ. ಅವಕಾಶ ಮಾಡಿಕೊಟ್ಟ ಸರ್ಕಾರಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದರು.

ನಾನು, ಮಹಾರಾಜ ಕಾಲೇಜಿನಲ್ಲಿ ಓದಿದವನು. ನನಗೆ ಈ ನಗರದಲ್ಲಿ ಜ್ಞಾನದ ಲೋಕ ತೆರೆಯಿತು. ಅಕ್ಷರ ಲೋಕಕ್ಕೆ ಬಾಗಿಲು ತೆರೆದು ಸರಸ್ವತಿ ದೇವಿ ನನ್ನನ್ನು ಬರ ಮಾಡಿಕೊಂಡ ನಗರ ಇದು. ಇಂತಹ ನಗರದಲ್ಲಿ ದಸರಾ ಉದ್ಘಾಟನೆಗೆ ಅತಿಥಿಯಾಗಿ ನನ್ನನ್ನು ಸರ್ಕಾರ ಆಯ್ಕೆ ಮಾಡಿರುವುದು ಸಂತಸ ತಂದಿದೆ. ನಾನೊಬ್ಬನೇ ದಸರಾ ಉದ್ಘಾಟನೆ ಮಾಡುತ್ತಿದ್ದೇನೆ ಅಂದುಕೊಳ್ಳುವುದಿಲ್ಲ. ನಾನು ಕನ್ನಡಿಗರ ಪರವಾಗಿ ಈ ಮಹಾ ಉತ್ಸವ ಉದ್ಘಾಟಿಸುತ್ತೇನೆ ಎಂದು ಹೇಳಿದರು.



ದಸರೆ ವೇಳೆಗೆ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ

ಹರಿದ್ವಾರದಲ್ಲಿ ಗಂಗಾ ಆರತಿ ವೀಕ್ಷಿಸಿದ ಕಾವೇರಿ ಆರತಿ ಸಮಿತಿ

ಇಂದು ವಾರಣಾಸಿಗೂ ಭೇಟಿ ನೀಡಲಿರುವ ಸಮಿತಿ

ಹರಿದ್ವಾರ, ಸೆ.20–ಕಾವೇರಿ ಗಂಗೆಯಷ್ಟೇ ಪವಿತ್ರ. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆ ಕೃಷ್ಣ ರಾಜಸಾಗರ (ಕೆಆರ್‌ಎಸ್)ದಲ್ಲಿ ಕಾವೇರಿ ಆರತಿಯನ್ನು ನಡೆಸಲು ಸರ್ಕಾರ ನಿರ್ಧರಿಸಿದ್ದು, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ರಚಿಸಲಾಗಿರುವ ಕಾವೇರಿ ಆರತಿ ಸಮಿತಿಯು ಪ್ರಸಿದ್ಧ ಯಾತ್ರಾಸ್ಥಳವಾದ ಹರಿದ್ವಾರಕ್ಕೆ ಭೇಟಿ ನೀಡಿ ಗಂಗಾ ಆರತಿಯನ್ನು ವೀಕ್ಷಿಸಿ ಮಾಹಿತಿ ಕಲೆ ಹಾಕಿತಲ್ಲದೆ, ದಸರೆ ವೇಳೆ ಕಾವೇರಿ ಆರತಿ ಆರಂಭಿಸಲು ಮುಂದಾಗಿದೆ.

ಕಾವೇರಿ ನದಿಯ ಯಾವ ಸ್ಥಳದಲ್ಲಿ ಕಾವೇರಿ ಆರತಿ ನಡೆಸಬೇಕು. ಇದಕ್ಕೆ ತಗಲುವ ವೆಚ್ಚವೆಷ್ಟು, ಗಂಗಾ ಆರತಿಯನ್ನು ಯಾವ ರೀತಿ ಮಾಡಲಾಗುತ್ತಿದೆ, ಎಂಬಿತ್ಯಾದಿಗಳ ವಿಷಯಗಳ ಬಗ್ಗೆ ಸಮಿತಿ ಅಧ್ಯಯನ ನಡೆಸಲಿದ್ದು, ವಾರದಲ್ಲಿ ಮೂರು ದಿನ ಕಾವೇರಿ ಆರತಿ ನಡೆಸಲು ತೀರ್ಮಾನಿಸಿದೆ.

ಸಮಿತಿಯಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಭಾಗದ ಶಾಸಕರುಗಳಿದ್ದು, 5 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ಆರತಿ ನಡೆಸಲು ಸಮಿತಿಯು ಚಿಂತನೆ ನಡೆಸಿದೆಯಲ್ಲದೆ, ಯಾವುದೇ ಸರ್ಕಾರ ಬಂದರೂ ಕಾವೇರಿ ಆರತಿ ನಿಲ್ಲಿಸದೆ ಮುಂದುವರೆಸುವಂತಾಗಲು ಇದನ್ನು ಸಚಿವ ಸಂಪುಟದಲ್ಲಿಟ್ಟು ಸರ್ಕಾರಿ ಆದೇಶವನ್ನು ಹೊರಡಿಸಲು ತೀರ್ಮಾನಿಸಲಾಗಿದೆ.

ಹರಿದ್ವಾರಕ್ಕೆ ತೆರಳಿರುವ ಸಚಿವ ಚಲುವರಾಯಸ್ವಾಮಿ ಅಧ್ಯಕ್ಷತೆಯ ಸಮಿತಿ ಯಲ್ಲಿ ಶಾಸಕರಾದ ನರೇಂದ್ರಸ್ವಾಮಿ, ಶಿವಲಿಂಗೇಗೌಡ, ರಮೇಶ್ ಬಂಡಿ ಸಿದ್ದೇಗೌಡ, ಉದಯ್ ಗೌಡ, ರವಿಕುಮಾರ್ ಗಣಿಗ, ಮಾಗಡಿ ಬಾಲಕೃಷ್ಣ , ಕೆ.ಹರೀಶಗೌಡ, ದರ್ಶನ್ ನಾರಾಯಣ್, ಚಿತ್ರನಟ ಸಾಧುಕೋಕಿಲ ಇದ್ದಾರೆ. ಕಾವೇರಿ ಆರತಿ ಬಗ್ಗೆ ಸಾಧು ಕೋಕಿಲಗೆ ಹಾಡು ಬರೆಯುವ ಜವಾಬ್ದಾರಿಯನ್ನು ನೀಡಲಾಗಿದೆ. ಪ್ರಸಿದ್ಧ ಯಾತ್ರಾಸ್ಥಳ ಹರಿದ್ವಾರದಲ್ಲಿ ಶುಕ್ರವಾರ ವಿಜೃಂಭಣೆಯಿಂದ ನಡೆದ ಗಂಗಾ ಆರತಿಯನ್ನು ಸಮಿತಿ ವೀಕ್ಷಿಸಿತು. ವೇದಘೋಷ, ಮಂತ್ರಗಳೊಂದಿಗೆ ಆರತಿ ಮೂಲಕ ಗಂಗಾನದಿಗೆ ನಮನ ಸಲ್ಲಿಸಲಾಯಿತು. ಸಾಂಪ್ರದಾಯಿಕ ಉಡುಗೆಯಲ್ಲಿದ್ದ ಸಚಿವ ಚಲುವರಾಯಸ್ವಾಮಿ ಹರಿದ್ವಾರ ಗಂಗಾ ಆರತಿಯನ್ನು ವೀಕ್ಷಿಸಿ ನಮನ ಸಲ್ಲಿಸಿದರು. ಗಂಗಾ ಆರತಿ ವೀಕ್ಷಣೆಗೆ ವೀಕ್ಷಕರು ಕಿಕ್ಕಿರಿದು ನೆರೆದಿದ್ದರು. ಹಿಂದೂಗಳ ಶ್ರೇಷ್ಠ ಸಂಪ್ರದಾಯಗಳಲ್ಲಿ ಗಂಗಾ ಆರತಿ ಒಂದಾಗಿದ್ದು, ಗಂಗಾ ಮಾತೆಗೆ ಸಮಿತಿಯಿಂದ ವಿಶೇಷ ಪೂಜೆ ಸಲ್ಲಿಸಲಾಯಿತು.

ನಾಳೆ (ಶನಿವಾರ) ವಾರಣಾಸಿಯಲ್ಲಿ ನಡೆಯುವ ಗಂಗಾ ಆರತಿಯಲ್ಲಿ ಪಾಲ್ಗೊಳ್ಳಲಿರುವ ಕಾವೇರಿ ಆರತಿ ಅಧ್ಯಯನ ಸಮಿತಿ. ಅದೇ ಮಾದರಿಯಲ್ಲಿ ಕನ್ನಡ ನಾಡಿನ ಜೀವನದಿಗೆ ನಮನ ಸಲ್ಲಿಸುವ ಬಗ್ಗೆ ಅಧ್ಯಯನ ನಡೆಸಿ, ವರದಿ ಸಲ್ಲಿಸಲಿದೆ. ದಸರಾ ವೇಳೆಗೆ ಕಾವೇರಿ ಆರತಿ ಪ್ರಾರಂಭಿಸಲು ಚಿಂತನೆ ನಡೆಸಲಾಗಿದೆ.

ಹರಿದ್ವಾರದಲ್ಲಿ ಕಾವೇರಿ ಆರತಿ ಅಧ್ಯಯನ ಸಮಿತಿ ಅಧ್ಯಕ್ಷ ಚಲುವರಾಯಸ್ವಾಮಿ ಮಾತನಾಡಿ, ಕೆಆರ್‌ಎಸ್‌ಗೆ ಬಾಗಿನ ಅರ್ಪಿಸಲು ಆಗಮಿಸಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್, ಗಂಗಾ ಆರತಿ ಮಾದರಿಯಲ್ಲಿ ಕಾವೇರಿ ಆರತಿ ಮಾಡುವುದಾಗಿ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಕಾವೇರಿ ಆರತಿ ಅಧ್ಯಯನ ಸಮಿತಿ ರಚನೆ ಮಾಡಲಾಗಿದೆ. ಹಳೆ ಮೈಸೂರು ಭಾಗದ ಎಲ್ಲಾ ಶಾಸಕರು ಇಲ್ಲಿಗೆ ಬಂದಿದ್ದೇವೆ. ಈ ಬಗ್ಗೆ ಕೂಲಂಕುಷವಾಗಿ ಅಧ್ಯಯನ ನಡೆಸಿ ವರದಿ ನೀಡುವುದರೊಂದಿಗೆ ದಸರೆ ವೇಳೆಗೆ ಕಾವೇರಿ ಆರತಿಗೆ ಚಿಂತನೆ ನಡೆದಿದೆ.


ರೋಟರಿ ಡಯಾಲಿಸಿಸ್ ಸೆಂಟರ್ ಸಹಕಾರದೊಂದಿಗೆ ರಾಜ್, ರಾಜೇಂದ್ರ, ರಾಜೇಶ್ ನೈಟ್

ನಾಳೆ ಡಾ. ಎಂ.ಎಸ್.ನಟಶೇಖರ್, ರೋ. ವಿ.ಎನ್. ಪ್ರಸಾದ್ ಅವರಿಂದ ಸಂಗೀತ ಸಂಜೆ

ರಾಜ್‌ಕಪೂರ್, ರಾಜೇಂದ್ರ ಕುಮಾರ್ ಮತ್ತು ರಾಜೇಶ್ ಖನ್ನಾ ಅವರ ಜನಪ್ರಿಯ ಹಾಡುಗಳ ರಸದೌತಣ



ರಾಜ್‌ಕಪೂರ್, ರಾಜೇಂದ್ರಕುಮಾರ್, ರಾಜೇಶ್ ಖನ್ನಾ



ಡಾ. ನಟಶೇಖರ್ | ಅಪೂರ್ವ | ವಿ.ಎನ್. ಪ್ರಸಾದ್ | ಮಮತ



ಜಯಂತಿ ವಿ.ಭಟ್ | ಹಂಸಿನಿ | ಸೈಯದ್ ಶಬ್ಬೀರ್ | ಸೈಯದ್ ಅಫ್ತಾಬ್ ಅಹಮದ್

ಮೈಸೂರು, ಸೆ.20– ಹಿಂದಿ ಚಲನ ಚಿತ್ರ ದಿಗ್ಗಜರಾದ ರಾಜ್ ಕಪೂರ್, ರಾಜೇಂದ್ರ ಕುಮಾರ್ ಮತ್ತು ರಾಜೇಶ್ ಖನ್ನಾ ಅವರ ಚಿತ್ರಗಳ ಹಾಡುಗಳು ಇಂದಿಗೂ ಕಿವಿಗಳಿಗೆ ಹಿತವನ್ನು ನೀಡುತ್ತವೆ. ಸಂಗೀತ ದಿಗ್ಗಜರಾದ ಶಂಕರ್ ಜೈಕಿಶನ್, ಕಲ್ಯಾಣ್‌ಜಿ–ಆನಂದ್‌ಜಿ, ಲಕ್ಷ್ಮೀಕಾಂತ್ ಪ್ಯಾರೆಲಾಲ್, ಸಲೀಲ್ ಚೌಧರಿ, ಸಚಿನ್ ದೇವ್ ಬರ್ಮನ್, ರಾಹುಲ್ ದೇವ್ ಬರ್ಮನ್, ಮಹಮ್ಮದ್ ರಫಿ, ಮುಖೇಶ್, ಕಿಶೋರ್ ಕುಮಾರ್, ಲತಾ ಮಂಗೇಶ್ಕರ್, ಆಶಾ ಭೋಸ್ಲೆ ಮುಂತಾದ ಖ್ಯಾತ ಗಾಯಕರು ಹಾಡಿರುವ ಹಾಡುಗಳು ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ಅಂತಹ ಹಾಡುಗಳ ಮೂಲಕ ಸಂಗೀತ ಪ್ರಿಯರಿಗೆ ರಸದೌತಣ ನೀಡಲು ಮೈಸೂರಿನ ಖ್ಯಾತ ಗಾಯಕರಾದ ಡಾ. ಎಂ.ಎಸ್.ನಟಶೇಖರ್ ಮತ್ತು ರೋ. ವಿ.ಎನ್. ಪ್ರಸಾದ್ ಅವರು 'ರಾಜ್, ರಾಜೇಂದ್ರ, ರಾಜೇಶ್ ನೈಟ್' ಶೀರ್ಷಿಕೆಯಡಿ ಸಂಗೀತ ಸಂಜೆಯನ್ನು ಸೆ.22 ರಂದು ಸಂಜೆ 6 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೈದಾನದಲ್ಲಿ ಆಯೋಜಿಸಿದ್ದು, ರಾಜ್‌ಕಪೂರ್, ರಾಜೇಂದ್ರ ಕುಮಾರ್ ಮತ್ತು ರಾಜೇಶ್ ಖನ್ನಾ ಅವರ ಜನಪ್ರಿಯ ಹಾಡುಗಳನ್ನು ಪ್ರಸ್ತುತ ಪಡಿಸಲಾಗುವುದು. ಕಾರ್ಯಕ್ರಮದ ನಿರೂಪಣೆಯನ್ನು ಸೈಯದ್ ಅಫ್ತಾಬ್ ಅಹಮದ್ ನಿರ್ವಹಿಸಲಿದ್ದಾರೆ. ಲೈವ್ ಆರ್ಕೆಸ್ಟ್ರಾ, ಹೆಚ್.ಬಿ. ಜಯರಾಮ್ ಮತ್ತು ತಂಡದ್ದಾಗಿದೆ.

ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿದ್ದು, ರೋಟರಿ ಐವರಿ ಸಿಟಿ ಮೈಸೂರು ಮತ್ತು ರೋಟರಿ ಚಾಮರಾಜನಗರ–ಡಯಾಲಿಸಿಸ್ ಸೆಂಟರ್ ಸಹಕಾರದೊಂದಿಗೆ ಚಾಮರಾಜನಗರ ಜಿಲ್ಲೆಯ ಬಡವರು ಮತ್ತು ನಿರ್ಗತಿಕರ ಅನುಕೂಲಕ್ಕಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯ ಕ್ರಮಕ್ಕೆ ಆಗಮಿಸುವ ಸಂಗೀತ ಪ್ರಿಯರು ಡಯಾಲಿಸಿಸ್ ಸೆಂಟರ್‌ಗೆ ಮಾನವೀಯತೆಯ ಸೇವೆಯು ದೇವರ ಸೇವೆ ಯಾಗಿದೆ ಎಂಬ ಪ್ರಶಾಂತ ಭಾವನೆಯೊಂದಿಗೆ ಉದಾರವಾಗಿ ಧನ ಸಹಾಯ ಮಾಡಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

ನೆಫ್ಟ್ ವಿವರ: 'ರೋಟರಿ ಐವರಿ ಸಿಟಿ ಚಾರಿಟಬಲ್ ಟ್ರಸ್ಟ್', ಅಕೌಂಟ್ ನಂ. 64205658586, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕುವೆಂಪುನಗರ ಶಾಖೆ; ಐಎಫ್‌ಎಸ್‌ಸಿ–ಎಸ್‌ಬಿಐಎನ್0040441ಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ರೋ.ವಿ.ಎನ್. ಪ್ರಸಾದ್, ಮೊ. 94490 58209 ಸಂಪರ್ಕಿಸಬಹುದು.

ಡಾ. ಎಂ.ಎಸ್. ನಟಶೇಖರ್: ಇವರು ಪ್ರಖ್ಯಾತ ಇಎನ್‌ಟಿ ಶಸ್ತ್ರಚಿಕಿತ್ಸಕರು ಮತ್ತು ಡಾಕ್ಟರ್ಸ್ ಮ್ಯೂಸಿಕಲ್ ನೈಟ್ 'ಗೀತ್ ಗಾಥಾ ಚಲ್'ನ ಪ್ರವರ್ತಕರಾಗಿ ದ್ದಾರೆ. ಮುಖೇಶ್, ಪಿ.ಬಿ. ಶ್ರೀನಿವಾಸ್ ಮತ್ತು ರಾಜ್ ಕಪೂರ್ ಅವರ ಸ್ಮರಣಾರ್ಥ ಸ್ವಂತ ಬ್ಯಾನರ್ ಅಡಿಯಲ್ಲಿ ಹಲವಾರು ಸಂಗೀತ ಸಂಜೆಗಳನ್ನು ಪ್ರಸ್ತುತಪಡಿಸಿದ್ದಾರೆ.

ಅಪೂರ್ವ ನಟಶೇಖರ್: ಇವರು ಡಾ. ಎಂ.ಎಸ್. ನಟಶೇಖರ್ ಅವರ ಪುತ್ರಿ ಇಂಜಿನಿಯರಿಂಗ್ ಪದವೀಧರೆಯಾಗಿದ್ದು, ಹಲವಾರು ವರ್ಷ 'ಗೀತ್ ಗಾತಾ ಚಲ್' ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಿದ್ದಾರೆ. ಇವರು ವಿದುಷಿ ಆರ್. ವಸಂತಲಕ್ಷ್ಮಿ ಅವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ.

ರೋ.ವಿ.ಎನ್. ಪ್ರಸಾದ್: 72 ವರ್ಷ ವಯೋಮಾನದ ನಿವೃತ್ತ ಹೈವೇ ಡಿಸೈನರ್ ಮತ್ತು ಪಿಎಂಸಿ. 1990 ದಶಕದಿಂದಲೂ ಸಂಗೀತ ಪ್ರಿಯರಾದ ಪ್ರಸಾದ್ ಅವರು, ಯುವ ಪ್ರತಿಭೆಗಳನ್ನು ಉತ್ತೇಜಿಸಲು ಮತ್ತು ಅವರ ಪ್ರಗತಿಗೆ ದಾರಿ ಮಾಡಿಕೊಡಲು ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ. ರೋಟರಿಯ 'ಸಮುದಾಯ ಸೇವಾ ಯೋಜನೆಗಳ' ಅಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಮತಾ ಭಾನುಪ್ರಕಾಶ್ : ರೋ.ವಿ.ಎನ್. ಪ್ರಸಾದ್ ಪುತ್ರಿಯಾದ ಇವರು, 1990 ರಿಂದ ಪ್ರಸಾದ್ ಅವರ ವೇದಿಕೆ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಅಲ್ಲದೆ ಪ್ರದರ್ಶನಗಳ ಮೂಲಕ ಜನಪ್ರಿಯತೆ ಗಳಿಸಿದ್ದಾರೆ.

ಜಯಂತಿ ವಿ. ಭಟ್: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿಯಾಗಿದ್ದ ಅವರು ಸಂಗೀತದ ಮೇಲಿನ ಪ್ರೀತಿಯಿಂದ ಸ್ವಯಂ ನಿವೃತ್ತಿ ಪಡೆದರು. ಸ್ವತಃ ಸಂಗೀತ ಸಂಯೋಜಕಿ, ಗೀತರಚನೆಕಾರ ಮತ್ತು ಗಾಯಕಿ, ತೀಕ್ಷ್ಣವಾದ ಮತ್ತು ಆಹ್ಲಾದಕರ ಧ್ವನಿಯೊಂದಿಗೆ, ಅವರು ಹಲವಾರು ಆಲ್ಬಂಗಳನ್ನು ನಿರ್ಮಿಸಿದ್ದಾರೆ.

ಹಂಸಿನಿ ಎಸ್. ಕುಮಾರ್: ಇವರು ಭಾರತೀಯ ರೈಲ್ವೆಯಲ್ಲಿ ಅಧಿಕಾರಿಯಾಗಿದ್ದಾರೆ. ಇವರ ಗಾಯನದಿಂದಾಗಿ ರೈಲ್ವೆ ಇಲಾಖೆಗೆ ಆಯ್ಕೆಯಾಗಿದ್ದಾರೆ. 'ಝೀ ಟಿವಿ' ಮತ್ತು ಇತರ ಸ್ಪರ್ಧೆಗಳಲ್ಲಿ ಜನಪ್ರಿಯ ಕಲಾವಿದೆ. ಇವರು ಹೆಚ್ಚಿನ ಜನಪ್ರಿಯತೆಯನ್ನು ಹೊಂದಿದ್ದು, ಮೈಸೂರು ಮತ್ತು ದೇಶದಾದ್ಯಂತ ನಿರಂತರವಾಗಿ ಪ್ರದರ್ಶನ ನೀಡುತ್ತಿದ್ದಾರೆ.

ಸೈಯದ್ ಶಬ್ಬೀರ್: ವಾಣಿಜ್ಯೋದ್ಯಮಿಯಾದ ಇವರು ತಮ್ಮ ಅತ್ಯುತ್ತಮ ಕಂಠದಿಂದಾಗಿ ನಗರದಾದ್ಯಂತ 'ಜೂನಿಯರ್ ಮೊಹಮ್ಮದ್ ರಫಿ' ಎಂದು ಜನಪ್ರಿಯತೆ ಗಳಿಸಿದ್ದಾರೆ. ಅವರು ಮುಂಬೈನಲ್ಲಿ ದಿವಂಗತ ಮೊಹಮ್ಮದ್ ರಫಿ ಅವರ ಮಗಳ ಆಹ್ವಾನದ ಮೇರೆಗೆ ಪ್ರದರ್ಶನ ನೀಡಿದ್ದಾರೆ.

ಮೈಸೂರು ಮಿತ್ರ ಶನಿವಾರ 21 ಸೆಪ್ಟೆಂಬರ್ 2024

ಶಾಲೆಗಳಿಗೆ ದಸರಾ ರಜೆ ಘೋಷಣೆ

ಬೆಂಗಳೂರು, ಸೆ.20– ನಾಡ ಹಬ್ಬ ದಸರಾಗೆ ಮೈಸೂರಿನಲ್ಲಿ ಅದ್ಧೂರಿ ಸಿದ್ಧತೆಗಳು ನಡೆದಿವೆ. ಇನ್ನೊಂದೆಡೆ ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ಶಾಲಾ ಮಕ್ಕಳಿಗೆ ಅ. 3 ರಿಂದ 20 ತನಕ ದಸರಾ ರಜೆ ಘೋಷಿಸಿದ್ದು, ಇಡೀ ರಾಜ್ಯದ ಶಾಲೆಗಳಿಗೆ ಒಂದೇ ಮಾರ್ಗದರ್ಶಿ ರೂಪಿಸಿದೆ. ಈ ಹಿಂದೆ ಕರಾವಳಿ ಭಾಗದಲ್ಲಿ ದಸರಾ ರಜೆಯಲ್ಲಿ ಕೊಂಚ ಮಾರ್ಪಾಡು ಆಗುತ್ತಿತ್ತು. ಆದರೆ, ಈ ಬಾರಿ ಯಾವುದೇ ಮಾರ್ಪಾಡು ಆಗಿಲ್ಲ. ಇಡೀ ಕರ್ನಾಟಕದ ಎಲ್ಲಾ ಶಾಲೆಗಳಿಗೆ ಒಂದೇ ಮಾರ್ಗದರ್ಶಿ ರೂಪಿಸಲಾಗಿದೆ.

ಅ. 3 ರಿಂದ 20ರ ತನಕ ಅಂದರೆ 17 ದಿನಗಳ ಕಾಲ ದಸರಾ ರಜೆ ಸಿಗಲಿದೆ. ಅ. 21ರಿಂದ 2ನೇ ಅವಧಿಯು ಪ್ರಾರಂಭವಾಗಲಿದ್ದು, 2025ರ ಏಪ್ರಿಲ್ 10 ತನಕ ನಡೆಯಲಿದೆ. 2024–2025ರ ಶೈಕ್ಷಣಿಕ ವರ್ಷದ ಶಾಲಾ ಅವಧಿಯ ಮಾರ್ಗದರ್ಶಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಶಾಲೆಗಳು ಆರಂಭಕ್ಕೂ ಮುನ್ನ ಪ್ರಕಟಣೆ ಹೊರಡಿಸಿತ್ತು ಅದರ ನಿಯಮಾನುಸಾರ ರಜೆಗಳು ಘೋಷಣೆಯಾಗಿವೆ. ಈಗ ದಸರಾ ರಜೆ ಹಿನ್ನೆಲೆಯಲ್ಲಿ ಅ. ತಿಂಗಳಲ್ಲಿ ಕೇವಲ 11 ದಿನಗಳು ತರಗತಿಗಳು ನಡೆಯಲಿವೆ.

ಮತ್ತೊಂದೆಡೆ, ದೀಪಾವಳಿ ಅಕ್ಟೋಬರ್ 31 ರಂದು ಬರುವುದರಿಂದ, ಆ ದಿನ ರಾಜ್ಯದ ಎಲ್ಲಾ ಶಾಲಾ–ಕಾಲೇಜುಗಳಿಗೆ ರಜೆ ಇರಲಿದೆ. ಒಟ್ಟಿನಲ್ಲಿ ಅಕ್ಟೋಬರ್ ತಿಂಗಳಲ್ಲಿ 13 ದಿನ ರಜೆ ಇರುವ ಸಾಧ್ಯತೆ ಇದೆ. ಡಿಸೆಂಬರ್ 22 ರಿಂದ 29 ರವರೆಗೆ ಕ್ರಿಸ್ಮಸ್ ರಜೆ ನೀಡಲಾಗುತ್ತದೆ.

ಕರ್ನಾಟಕದಲ್ಲಿ 2024ರ ಶೈಕ್ಷಣಿಕ ವರ್ಷವು ಮೇ 29ರಿಂದ ಪ್ರಾರಂಭವಾಯಿತು. ಮೊದಲ ಅವಧಿಯು ಅ. 2ರ ತನಕ ಇರಲಿದೆ. ಸೆ. 23ರಿಂದ ಮಧ್ಯಂತರ ಪರೀಕ್ಷೆಗಳು ಶುರುವಾಗಿ ಸೆ. 30ರ ತನಕ ನಡೆಯಲಿದೆ. ಆ ಬಳಿಕ ಶಾಲಾ ಮಕ್ಕಳಿಗೆ ದಸರಾ ರಜೆ ಪ್ರಕ್ರಿಯೆ ಆರಂಭವಾಗಲಿದೆ. ಅ. 2ರಂದು ಎಲ್ಲಾ ಶಾಲೆಗಳಲ್ಲೂ ಗಾಂಧಿ ಜಯಂತಿ ಆಚರಿಸಿದ ಮರು ದಿನದಿಂದ ಶಾಲಾ ಮಕ್ಕಳು ರಜೆಯ ಮಜಾ ಮಾಡಲಿದ್ದಾರೆ.

ರಾಜ್ಯದ ಮಹಿಳಾ ಉದ್ಯೋಗಿಗಳಿಗೆ ವಾರ್ಷಿಕವಾಗಿ

ಆರು ದಿನಗಳ ವೇತನ ಸಹಿತ ಮುಟ್ಟಿನ ರಜೆ!



ಬೆಂಗಳೂರು, ಸೆ.20– ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ವಾರ್ಷಿಕವಾಗಿ ಆರು ದಿನಗಳ ವೇತನ ಸಹಿತ ಮುಟ್ಟಿನ ರಜೆಯನ್ನು ಪರಿಚಯಿಸಲು ಕರ್ನಾಟಕ ಸರ್ಕಾರ ಸಿದ್ಧವಾಗಿದೆ. ಇದನ್ನು ಪರಿಶೀಲಿಸಲು ರಚಿಸಲಾದ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದ ನಂತರ ಅನುಷ್ಠಾನಗೊಳಿಸುವ ಸಂಬಂಧ ಕ್ರಮ ಕೈಗೊಳ್ಳುತ್ತಿದೆ.

ಡಾ ಸಪ್ನಾ ಮುಖರ್ಜಿ ನೇತೃತ್ವದ ತಂಡವನ್ನು ರಚಿಸಲಾಗಿದೆ, ಅದು ಸರ್ಕಾರಕ್ಕೆ ವರದಿ ಸಲ್ಲಿಸಲಿದೆ. ಈ ಸಂಬಂಧ ಎಲ್ಲ ಇಲಾಖೆಗಳೊಂದಿಗೆ ಚರ್ಚೆ ನಡೆಸುತ್ತೇವೆ. ಅನುಮೋದನೆಗಾಗಿ ಶಾಸಕಾಂಗದ ಮುಂದೆ ಇಡಲಾಗುವುದು ಎಂದು ಕಾರ್ಮಿಕ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್ ತಿಳಿಸಿದ್ದಾರೆ. ಆರಂಭಿಕ ಹಂತವಾಗಿ ಖಾಸಗಿ ವಲಯಕ್ಕೆ ಮುಟ್ಟಿನ ರಜೆ ನೀತಿ ಪರಿಚಯಿಸಲು ಕರ್ನಾಟಕ ಸರ್ಕಾರ ಚಿಂತನೆ ನಡೆಸಿದೆ. ಪೂರ್ಣ ಪ್ರಮಾಣದಲ್ಲಿ ನೀತಿ ರೂಪಿಸಿದ ನಂತರ ಸರ್ಕಾರಿ ಇಲಾಖೆಗಳಲ್ಲಿ ಕಡ್ಡಾಯಗೊಳಿಸಲು ಚಿಂತನೆ ನಡೆಸಲಾಗಿದೆ ಎಂದು ಮೊಹ್ಸಿನ್ ಹೇಳಿದ್ದಾರೆ. ಮುಟ್ಟಿನ ರಜೆ ವಿಚಾರವಾಗಿ ಒಂದು ನೀತಿಯನ್ನು ಹೊಂದುವ ಅಗತ್ಯತೆಯ ಬಗ್ಗೆ ಸುಪ್ರೀಂ ಕೋರ್ಟ್ ಆದೇಶದಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯಕ್ಕೆ ಅನುಗುಣವಾಗಿ ಈ ಕ್ರಮಕ್ಕೆ ಮುಂದಾಗಿದ್ದೇವೆ ಎಂದು ಅವರು ಹೇಳಿದ್ದಾರೆ.

ಅರಮನೆ ಮುಂದೆ ಪಾರಿವಾಳಗಳಿಗೆ ಧಾನ್ಯ ಹಾಕುವ ವಿಚಾರ

ನಾಳೆ ಸಂಸದ ಯದುವೀರ್ ನೇತೃತ್ವದಲ್ಲಿ ಸಭೆ



ಮೈಸೂರು, ಸೆ.20(ಎಸ್‌ಬಿಡಿ)– ಮೈಸೂರು ಅರಮನೆ ಉತ್ತರ ದ್ವಾರದ ಆವರಣದಲ್ಲಿ ಪಾರಿವಾಳಗಳಿಗೆ ಧಾನ್ಯ ಹಾಕುವುದನ್ನು ನಿಷೇಧಿಸುವ ಸಂಬಂಧ ಸೆ.22ರಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಸಾರ್ವಜನಿಕ ಸಭೆ ಕರೆಯಲಾಗಿದೆ.

ಮೈಸೂರು ಅರಮನೆ ಆವರಣದಲ್ಲಿ ಪಾರಿವಾಳಗಳಿಗೆ ಧಾನ್ಯಗಳನ್ನು ಹಾಕುವುದರಿಂದ ಮೈಸೂರು ಅರಮನೆಗೆ ಹಾನಿಯಾಗುವುದರ ಜೊತೆಗೆ ಪಾರಿವಾಳಗಳ ಪಿಕ್ಕೆಯಿಂದ ಗಂಭೀರ ಆರೋಗ್ಯ ಸಮಸ್ಯೆಗಳು ಎದುರಾಗುವುದರಿಂದ, ಅಲ್ಲಿ ಪಾರಿವಾಳಗಳಿಗೆ ಧಾನ್ಯಗಳನ್ನು ಹಾಕುವುದನ್ನು ನಿಷೇಧಿಸಲು ಕೋರಿ ಹಲವು ಸಂಘ ಸಂಸ್ಥೆಗಳಿಂದ ಮನವಿ ಸಲ್ಲಿಸಲಾಗಿದೆ. ಆದ್ದರಿಂದ ಈ ಬಗ್ಗೆ ಸೆ.22ರಂದು ಬೆಳಗ್ಗೆ 8ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಂಸದ ಯದುವೀರ್ ನೇತೃತ್ವದಲ್ಲಿ ಸಭೆ ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂಸದರ ಆಪ್ತ ಸಹಾಯಕರು ಪತ್ರಿಕಾ ಪ್ರಕಟಣೆ ಮೂಲಕ ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರು, ನಗರ ಪಾಲಿಕೆ ಆಯುಕ್ತರು ಹಾಗೂ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಿದ್ದಾರೆ.

ವಿಶ್ವ ಥ್ರೋಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಡಿ ಪಾಲ್ ಕಾಲೇಜು ವಿದ್ಯಾರ್ಥಿಗಳಿಗೆ ಪದಕ



ಧನುಷಾ



ಅಭಿಷೇಕ್ ಗೌಡ

ಮೈಸೂರು, ಸೆ.20(ಎಸ್‌ಬಿಡಿ)– ಮಲೇಷಿಯಾದಲ್ಲಿ ನಡೆದ ವಿಶ್ವ ಥ್ರೋಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಡಿ ಪಾಲ್ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಪದಕ ಪಡೆದಿದ್ದಾರೆ.

ವಿಶ್ವ ಥ್ರೋಬಾಲ್ ಕ್ಲಬ್ ಚಾಂಪಿಯನ್‌ಶಿಪ್‌ನಲ್ಲಿ ಎಲೈಟ್ ತಂಡದ ಮೂಲಕ ಭಾರತವನ್ನು ಪ್ರತಿನಿಧಿಸಿದ್ದ ಡಿ ಪಾಲ್ ಕಾಲೇಜಿನ ಬಿ.ಕಾಂ ವಿದ್ಯಾರ್ಥಿಗಳಾದ ಧನುಷಾ ಚಿನ್ನದ ಪದಕ ಹಾಗೂ ಅಭಿಷೇಕ್ ಗೌಡ ಬೆಳ್ಳಿ ಪದಕ ಗಳಿಸಿದ್ದಾರೆ. ಈ ಕ್ರೀಡಾ ಸಾಧಕರನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದೆ

ಖ್ಯಾತ ಚಿತ್ರಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವ ಸಮಾರೋಪ

ಸಿಎಂ ಸಿದ್ದರಾಮಯ್ಯರಿಂದ ಹೆಸರಾಂತ ಕಲಾವಿದರಿಗೆ ಪ್ರಶಸ್ತಿ ಪ್ರದಾನ



ಮೈಸೂರಿನ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಸಭಾಂಗಣದಲ್ಲಿ ಶುಕ್ರವಾರ ನಡೆದ ಪಿ.ಆರ್.ತಿಪ್ಪೇಸ್ವಾಮಿ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಲಾವಿದರಿಗೆ ಪಿಟಿಆರ್ ಕಲಾ ಪ್ರಶಸ್ತಿ ಪ್ರದಾನ ಮಾಡಿದರು. ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಸೆ.20(ಎಸ್‌ಬಿಡಿ)– ಪಿ.ಆರ್.ತಿಪ್ಪೇಸ್ವಾಮಿ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪಾಲ್ಗೊಂಡು, ಕಲಾವಿದರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಮೈಸೂರು ವಿಜಯನಗರ ಎರಡನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಸಭಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಯ ಹಿರಿಯ ಮತ್ತು ಕಿರಿಯ ಕಲಾವಿದರು ಮತ್ತು ಕಲಾಪೋಷಕರು ಸೇರಿದಂತೆ ಸುಮಾರು 20 ಮಂದಿಗೆ 'ಗೌರವ ಪಿಆರ್‌ಟಿ ಕಲಾ ಪ್ರಶಸ್ತಿ' ಪ್ರದಾನ ಮಾಡಿ, ಅಭಿನಂದಿಸಿದರು.

ಚಿರಂಜೀವಿ ಸಿಂಗ್, ಕೆ.ವಿ.ಸುಬ್ರಹ್ಮಣ್ಯಂ, ಎಂ.ಆರ್.ಬಾಳಿಕಾಯಿ, ಡಾ.ಜಿ.ಎಸ್.ಖಂಡೇರಾವ್, ಡಾ.ವಿ.ಟಿ.ಕಾಳೆ, ಶ್ರೀಮತಿ ಎಂ.ಜೆ.ಕಮಲಾಕ್ಷಿ, ಆರ್.ಜಿ.ಸಿಂಗ್, ಡಾ.ಡಿ.ಎ.ಉಪಾಧ್ಯ ರಾಘವೇಂದ್ರ ಮೂರ್ತಿ, ಅಶೋಕ್ ಮೂಡಿಗೆರೆ, ಶ್ರೀಮತಿ ಮಧು ಶಿಲ್ಪ ಆಚಾರ್ಯ, ದಿಲೀಪ್ ಕುಮಾರ್ ಕಾಳೆ, ಡಾ.ಪಿ.ಪರಶುರಾಮ್, ಸಿ.ಕಣ್ಮೇಶ್, ಸೈಯದ್ ಆಸಿಫ್ ಅಲಿ, ಎಸ್.ಹೆಚ್.ನಾಗರಾಜು, ಡಾ.ಮೋಹನ್ ಪಾಂಚಾಳ್, ಜೆ.ನರಸಿಂಹರಾಜು, ಡಿ.ಅಭಿಲಾಷ್ ಹಾಗೂ ಎಂ.ಎಸ್.ಲಿಂಗರಾಜು ಪ್ರಶಸ್ತಿ ಸ್ವೀಕರಿಸಿದರು.

ಮುಖ್ಯಮಂತ್ರಿಗಳು ಕಾರ್ಯಕ್ರಮದಿಂದ ತೆರಳಿದ ನಂತರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ, ವಿವಿಧ ವಿಭಾಗಗಳಲ್ಲಿ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನಿತರ ಗಣ್ಯರು, ಚಿತ್ರಕಲಾ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕೊಪ್ಪಳ ವಿವಿ ಕುಲಪತಿಗಳಾದ ಬಿ.ಕೆ.ರವಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಪಿಆರ್‌ಟಿ ಟ್ರಸ್ಟ್ ಅಧ್ಯಕ್ಷ ಡಾ.ರಾಜಶೇಖರ ಕದಂಬ, ಸಂಚಾಲಕ ರುದ್ರಣ್ಣ ಹರ್ತಿಕೋಟೆ, ಕಾರ್ಯದರ್ಶಿ ಕೆ.ಸಿ.ಮಹದೇವ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.


ಸಂಭ್ರಮಕ್ಕೆ ತಣ್ಣೀರೆರೆಚಿದ ಮಳೆ: ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಹೊರ ಆವರಣದಲ್ಲಿ ಸುಂದರ ವೇದಿಕೆ ನಿರ್ಮಿಸಲಾಗಿತ್ತು. ಮುಖ್ಯಮಂತ್ರಿಗಳ ಆಗಮನ ತಡವಾಗಿದ್ದರಿಂದ ನಿಗದಿತ ಸಮಯಕ್ಕೆ ಕಾರ್ಯಕ್ರಮ ಆರಂಭವಾಗಲಿಲ್ಲ. ಅವರು ಕಾರ್ಯಕ್ರಮ ಸ್ಥಳಕ್ಕೆ ಆಗಮಿಸುವ 15 ನಿಮಿಷ ಮುನ್ನ ಜೋರು ಮಳೆಯಾಗಿ ವೇದಿಕೆ ಹಾಗೂ ಆಸನಗಳೆಲ್ಲಾ ತೋಯ್ದು ಹೋದವು. ಪರಿಣಾಮ ಅನಿವಾರ್ಯವಾಗಿ ಸಂಸ್ಥೆಯ ತಳಮಹಡಿಯಲ್ಲಿರುವ ಕಿರು ಸಭಾಂಗಣಕ್ಕೆ ತರಾತುರಿಯಲ್ಲಿ ಕಾರ್ಯಕ್ರಮವನ್ನು ಸ್ಥಳಾಂತರಿಸಲಾಯಿತು. ಮಳೆ ನಡುವೆಯೇ 2 ಗಂಟೆ ತಡವಾಗಿ ಸಂಜೆ 6 ಗಂಟೆಗೆ ಆಗಮಿಸಿದ ಸಿಎಂ, ಚಿತ್ರಕಲಾ ಪ್ರದರ್ಶನ ವೀಕ್ಷಿಸಿದ ಬಳಿಕ ಸಭಾಂಗಣಕ್ಕೆ ಬಂದರು. ಅಲ್ಲಿ ಸಭಿಕರಿಗೆ ನಿಲ್ಲುವುದಕ್ಕೂ ಸ್ಥಳಾವಕಾಶವಿರಲಿಲ್ಲ. ಹಾಗಾಗಿ ತಿಪ್ಪೇಸ್ವಾಮಿ ಅವರ ಫೋಟೋಗೆ ಪುಷ್ಪ ನಮನ ಸಲ್ಲಿಸಿದ ಸಿಎಂ, ಕಲಾವಿದರಿಗೆ ಪ್ರಶಸ್ತಿ ಪ್ರದಾನ ಮಾಡಿ, ತಾವೂ ಅಭಿನಂದನೆ ಸ್ವೀಕರಿಸಿದ ಬಳಿಕ ಕೆಲಹೊತ್ತಿನಲ್ಲೇ ಕಾರ್ಯಕ್ರಮದಿಂದ ತೆರಳಿದರು. ತಕ್ಷಣಕ್ಕೆ ಮೈಕ್ ವ್ಯವಸ್ಥೆಯನ್ನೂ ಮಾಡಲಾಗದ ಕಾರಣ ಸಿಎಂ ಅವರ ಭಾಷಣಕ್ಕೂ ಅವಕಾಶವಾಗಲಿಲ್ಲ.

ಮೂರು ದಿನದ ಕಾರ್ಯಕ್ರಮಕ್ಕೆ ತೆರೆ: ಅಪ್ರತಿಮ ಚಿತ್ರಕಲಾವಿದ, ಜಾನಪದ ತಜ್ಞ, ಸಾಹಿತಿ, ಮೈಸೂರು ವಿಶ್ವವಿದ್ಯಾನಿಲಯದ ಜನಪದ ವಸ್ತು ಸಂಗ್ರಹಾಲಯ, ಧರ್ಮಸ್ಥಳ ಹಾಗೂ ಸುತ್ತೂರು ಮಠದ ವಸ್ತು ಸಂಗ್ರಹಾಲಯವನ್ನು ವೈಜ್ಞಾನಿಕವಾಗಿ ರೂಪಿಸಿದ ದಿವಂಗತ ಪಿ.ಆರ್.ತಿಪ್ಪೇಸ್ವಾಮಿ ಅವರ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭವನ್ನು ಮೂರು ದಿನಗಳ ಕಾಲ ಆಚರಿಸಲಾಯಿತು. ಚಿತ್ರಕಲಾ ಶಿಬಿರ, ಚಿತ್ರಕಲಾ ಸ್ಪರ್ಧೆ, ಪ್ರಾತ್ಯಕ್ಷಿಕೆ, ಚಿತ್ರಕಲಾ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಯಿತು. ಕಲಾವಿದರಿಗೆ ಪಿಟಿಆರ್ ಕಲಾ ಪ್ರಶಸ್ತಿ ಪ್ರದಾನ ಹಾಗೂ ಚಿತ್ರಕಲೆ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆಯೊಂದಿಗೆ ಸಮಾರಂಭಕ್ಕೆ ತೆರೆಬಿದ್ದಿತು.

ಪಿಆರ್‌ಟಿ ಪ್ರತಿಷ್ಠಾನದಿಂದ ಸಿಎಂಗೆ ಮನವಿ

ಚಿತ್ರಕಲಾವಿದ, ಜಾನಪದ ಜಂಗಮ, ಲೇಖಕ ಪಿ.ಆರ್.ತಿಪ್ಪೇಸ್ವಾಮಿ ಅವರು ಈ ನಾಡು ಕಂಡ ಅಪರೂಪದ ವ್ಯಕ್ತಿ. ಹತ್ತು ಹಲವು ಕ್ಷೇತ್ರಗಳಲ್ಲಿ ಅವರ ಕೊಡುಗೆ ಅಪಾರ. ಅವರ ಹೆಸರನ್ನು ಮುಂದಿನ ಪೀಳಿಗೆಗೆ ಉಳಿಸುವ ಸಲುವಾಗಿ, ತಾವು ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಿದ ತಿಪ್ಪೇಸ್ವಾಮಿ ಅಧ್ಯಯನ ಪೀಠವನ್ನು ಪುನಶ್ಚೇತನಗೊಳಿಸಲು ಕುಲಪತಿಗೆ ಸೂಚನೆ ನೀಡಬೇಕು. ಪಿ.ಆರ್.ತಿಪ್ಪೇಸ್ವಾಮಿ ಅವರ ಶ್ರಮದ ಫಲವಾಗಿರುವ ವಿವಿ ಜಾನಪದ ವಸ್ತು ಸಂಗ್ರಹಾಲಯಕ್ಕೆ ಅವರ ಹೆಸರು ನಾಮಕರಣ ಮಾಡಲು ಕ್ರಮ ಕೈಗೊಳ್ಳಬೇಕು. ಬೆಂಗಳೂರಿನ ಚಿತ್ರಕಲಾ ಪರಿಷತ್ ಸಮೀಪದ ರಸ್ತೆ ಅಥವಾ ವೃತ್ತಕ್ಕೆ ಪಿ.ಆರ್.ತಿಪ್ಪೇಸ್ವಾಮಿ ಅವರ ಹೆಸರಿಡಲು ಬಿಬಿಎಂಪಿಗೆ ಸೂಚಿಸಬೇಕು. ಅವರ ಕಲಾಕೃತಿಗಳನ್ನು ಡಿಜಿಟಲೀಕರಣಗೊಳಿಸಲು ಸರ್ಕಾರದಿಂದ ಹೆಚ್ಚಿನ ಆರ್ಥಿಕ ಸಹಾಯ ನೀಡಬೇಕು. ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಮೈಸೂರಿನಲ್ಲಿ ನಿವೇಶನವೊಂದನ್ನು ಮಂಜೂರು ಮಾಡಬೇಕು. ಕಲಾವಿದರ ಮಾಸಾಶನದ ಜೊತೆಗೆ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಬೇಕು ಎಂದು ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಲಾಯಿತು. ಈ ಸಂಬಂಧ ಕ್ರಮ ವಹಿಸುವುದಾಗಿ ಸಿಎಂ ಭರವಸೆ ನೀಡಿದರು.

ವಿದ್ವತ್ಪೂರ್ಣ ಅಪರೂಪದ ವಿದ್ವಾಂಸ ಹಂಪನಾ



ಸಾಹಿತಿ ಹಂ.ಪ.ನಾಗರಾಜಯ್ಯ ಅವರು ಕನ್ನಡ ಸಾರಸ್ವತ ಲೋಕದಲ್ಲಿ 'ಹಂಪನಾ' ಎಂದೇ ಚಿರಪರಿಚಿತರಾಗಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಹಂಪಸಂದ್ರ ಗ್ರಾಮದಲ್ಲಿ ಶಾನುಭೋಗ ಪದ್ಮನಾಭಯ್ಯ ಮತ್ತು ತಾಯಿ ಪದ್ಮಾವತಮ್ಮ ದಂಪತಿ ಪುತ್ರರಾಗಿ 1936ರ ಅ.7ರಂದು ಜನಿಸಿದರು. ತಂದೆ ಪದ್ಮನಾಭಯ್ಯ ಅವರು ಮನೆಯಲ್ಲೇ ನಡೆಸುತ್ತಿದ್ದ ವಿದ್ವತ್ಪೂರ್ಣ ಪ್ರವಚನಗಳು ಹಂಪನಾ ಅವರ ಮೇಲೆ ಪ್ರಭಾವ ಬೀರಿದ್ದವು.

ವಿದ್ಯಾಭ್ಯಾಸ: ಹಂ.ಪ.ನಾಗರಾಜಯ್ಯನವರು ಮಂಡ್ಯ, ಗೌರಿಬಿದನೂರು, ಮಧುಗಿರಿ, ತುಮಕೂರುಗಳಲ್ಲಿ ಕಾಲೇಜುವರೆಗಿನ ವಿದ್ಯಾಭ್ಯಾಸ ಮುಗಿಸಿದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದು ಎಂ.ಎ. ವ್ಯಾಸಂಗದ ವೇಳೆ ರಾಷ್ಟ್ರಕವಿ ಕುವೆಂಪು, ತೀ.ನಂ.ಶ್ರೀಕಂಠಯ್ಯ, ಡಿ.ಎಲ್.ನರಸಿಂಹಾಚಾರ್, ಎಸ್.ವಿ.ಪರಮೇಶ್ವರ ಭಟ್ಟ, ಕೆ.ವೆಂಕಟರಾಮಪ್ಪ, ದೇ.ಜವರೇಗೌಡ ಸೇರಿದಂತೆ ಸಾಹಿತ್ಯ ದಿಗ್ಗಜರ ಸ್ಫೂರ್ತಿಗೆ ಒಳಗಾದರು. ಮೈಸೂರು ವಿಶ್ವವಿದ್ಯಾಲಯದಿಂದ ಎಂಎ ಪದವಿಯನ್ನೂ, ವಡ್ಡಾರಾಧನೆ ಸಮಗ್ರ ಅಧ್ಯಯನಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ವೃತ್ತಿ: 1959ರಿಂದ 1970ರವರೆಗೆ ಮೈಸೂರಿನ ಮಹಾರಾಣಿ ಕಾಲೇಜು, ಶಿವಮೊಗ್ಗದ ಸಹ್ಯಾದ್ರಿ ಕಾಲೇಜು, ಮಂಡ್ಯ, ದಾವಣಗೆರೆ, ಬೆಂಗಳೂರಿನ ಸರ್ಕಾರಿ ಕಾಲೇಜುಗಳಲ್ಲಿ ಪದವಿ ತರಗತಿಗಳಲ್ಲಿ ಕನ್ನಡ ವಿಷಯವನ್ನು ಬೋಧಿಸಿದರು. ನಂತರ ಇವರು 1970ರಿಂದ 1996ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ವೃತ್ತಿ ಕೈಗೊಂಡು ಸ್ನಾತಕೋತ್ತರರಿಗೆ ಬೋಧಿಸಿದರು. ಬೆಂಗಳೂರು ವಿವಿಯಲ್ಲಿರುವಾಗಲೇ ಕಲಾವಿಭಾಗದ ಮುಖ್ಯಸ್ಥರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿಯೂ ದುಡಿದರು. ವಿವಿಧ ಅವಧಿಗಳಲ್ಲಿ ಜೈನ ಸಂಶೋಧನಾ ಕೇಂದ್ರ, ಜೈನ ಅಧ್ಯಯನ ಸಂಸ್ಥೆ, ಕರ್ನಾಟಕ ಸರ್ಕಾರದ ಕನ್ನಡ–ಸಂಸ್ಕೃತಿ ನಿರ್ದೇಶನಾಲಯಗಳ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು.

ಪ್ರವೃತ್ತಿ: ಕನ್ನಡ ಸಾಹಿತ್ಯ ಪರಿಷತ್ತಿಗೆ 1978ರಿಂದ 1986ರ ದೀರ್ಘ ಅವಧಿವರೆಗೆ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಕನ್ನಡದ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಲೇಖಕರ ಸುಮಾರು ಮುನ್ನೂರು ಮೌಲಿಕ ಪುಸ್ತಕಗಳನ್ನು ಪ್ರಕಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಪರಿಷತ್ತಿನ ಚಿನ್ನದ ಹಬ್ಬದ ನೆನಪಿಗಾಗಿ ಭವ್ಯ ಕಟ್ಟಡವನ್ನು ಕಟ್ಟಿಸಿದರು.

ಯುನೆಸ್ಕೋದವರು 1979ನೇ ವರ್ಷವನ್ನು ಅಂತರರಾಷ್ಟ್ರೀಯ ಮಕ್ಕಳ ವರ್ಷವೆಂದು ಘೋಷಿಸಿದಾಗ ಶಿಶು ಸಾಹಿತ್ಯದ ಇನ್ನೂರು ಪುಸ್ತಕಗಳನ್ನು ಪ್ರಕಟಿಸಿದರು. ಇದೇ ಅವಧಿಯಲ್ಲಿ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಭವನ ತಲೆಯೆತ್ತಿತು.

ಹಂಪನಾ ಅವರು ತಮ್ಮ ಅಧ್ಯಾಪನ ವೃತ್ತಿಯ ಜೊತೆಗೇ ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಮುಂಬಯಿ ವಿಶ್ವವಿದ್ಯಾಲಯ, ಮದರಾಸು ವಿಶ್ವವಿದ್ಯಾಲಯ ಹಾಗೂ ಮಧುರೈ ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ.

ದೇಶ–ವಿದೇಶಗಳಲ್ಲಿ ನಡೆದ ಹತ್ತಾರು ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದಾರೆ. ಟೊರೆಂಟೊ, ಬುಡಾಪೆಸ್ಟ್, ಮಾಂಟ್ರಿಯಲ್, ಲಂಡನ್, ನವದೆಹಲಿ ಹಾಗೂ ಕೊಲ್ಕತ್ತಾಗಳಲ್ಲಿ ನಡೆದ ಅಂತರರಾಷ್ಟ್ರೀಯ ಸಮಾವೇಶಗಳಲ್ಲಿ ಪಾಲ್ಗೊಂಡಿದ್ದಾರೆ.

ಹಂಪನಾ ಅವರು ದೇಶ ವಿದೇಶಗಳ ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕನ್ನಡ ಸಾಹಿತ್ಯ ಮತ್ತು ಜೈನ ಪರಂಪರೆಯ ಬಗ್ಗೆ ತಮ್ಮ ಅಪ್ರತಿಮ ವಿದ್ವತ್ತನ್ನು ಹಂಚಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು

ಹಂಪನಾ ಅವರಿಗೆ ಕನ್ನಡ ವಿಶ್ವವಿದ್ಯಾಲಯವು 2006ರಲ್ಲಿ ನಾಡೋಜ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೆ ಅವರಿಗೆ ಹಲವಾರು ಪ್ರಶಸ್ತಿಗಳು ಸಂದಿವೆ.

1993–94ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1995ರ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಶಿಶುಸಾಹಿತ್ಯಕ್ಕಾಗಿ ನೀಡಲಾಗುವ ರಾಷ್ಟ್ರೀಯ ಪುರಸ್ಕಾರ 1990ರಲ್ಲಿ, 1996ರಲ್ಲಿ ಚಾಮುಂಡರಾಯ ಪ್ರಶಸ್ತಿ, 1997ರಲ್ಲಿ ಕಾವ್ಯಾನಂದ ಪ್ರಶಸ್ತಿ, 1998ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2001ರಲ್ಲಿ ಶಾಸನ ಸಾಹಿತ್ಯ ಪ್ರಶಸ್ತಿ, ಅತ್ತಿಮಬ್ಬೆ ಪ್ರತಿಷ್ಠಾನದ ಚಿ.ನ.ಮಂಗಳಾ ಪ್ರಶಸ್ತಿ, ಆಚಾರ್ಯ ಕುಂದಕುಂದ ಜ್ಞಾನಪೀಠ ಪ್ರಶಸ್ತಿ, ಶಿವಮೊಗ್ಗ ನಾಗರಿಕ ಸಮುದಾಯವು ನೀಡಿದ ಸಾಹಿತ್ಯಸಿಂಧು ಮತ್ತು ಜ್ಞಾನಭಾಸ್ಕರ ಪ್ರಶಸ್ತಿಗಳು. ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ, ಶಾಸ್ತ್ರೀಯ ಕನ್ನಡಕ್ಕೆ ನೀಡಿದ ಸೇವೆಯನ್ನು ಪರಿಗಣಿಸಿ ರಾಷ್ಟ್ರಪತಿ ಮನ್ನಣೆ.

ಕುಟುಂಬ: ಹಂಪನಾ ಪತ್ನಿ ಕಮಲಾ ಹಂಪನಾ ಕೂಡ ಸಾಹಿತಿಗಳು, ಉತ್ತಮ ವಾಗ್ಮಿಗಳು ಹಾಗೂ ನಾಡೋಜ ಪ್ರಶಸ್ತಿಗೆ ಭಾಜನರಾದವರು. ಈ ದಂಪತಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇದ್ದಾರೆ. ಹಂಪನಾ ಅವರು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕನ್ನಡ ಸಾಹಿತ್ಯ ಲೋಕದಲ್ಲಿ ಅವಿರತವಾಗಿ ದುಡಿದಿದ್ದಾರೆ. ಕನ್ನಡದ ಮಹಾನ್ ಶಿಕ್ಷಕ ಪರಂಪರೆಯನ್ನು ಪೋಷಿಸಿ ಅದನ್ನು ಮುಂದಿನ ಪೀಳಿಗೆಗೆ ದಾಟಿಸಿದ ಹಿರಿಮೆ ಇವರದು. ಯಾವುದೇ ಲಾಬಿಗಳನ್ನು, ಒಣ ಸಿದ್ಧಾಂತಗಳನ್ನು ಎಂದೂ ತಮ್ಮ ವಿದ್ಯಾರ್ಥಿಗಳ ಮೇಲೆ ಹೇರಿದವರಲ್ಲ.

ನಾಗೇಂದ್ರಪ್ಪ ದಾಗಿನಕಟ್ಟೆ ಹಾಗೂ ಬಾಳೇಶ ಲಕ್ಸೆಟ್ಟಿ ಅವರು ಪ್ರತ್ಯೇಕವಾಗಿ ಹಂಪನಾ ಜೀವನ ಚರಿತ್ರೆಯನ್ನು ದಾಖಲಿಸಿದ್ದಾರೆ. ಹಂಪನಾ ಕೃತಿಗಳ ಅಧ್ಯಯನವನ್ನು ಸಂಶೋಧನಾ ವಿಷಯವನ್ನಾಗಿ ತೆಗೆದುಕೊಂಡು ಕಲಬುರ್ಗಿ ವಿವಿಯಲ್ಲಿ ಡಾ.ಚೆನ್ನಣ್ಣ ವಾಲೀಕಾರ ಅವರ ಮಾರ್ಗದರ್ಶನದಲ್ಲಿ ಡಾ. ನಾಗಪ್ಪ ಚಲವಾದಿಯವರು ಡಾಕ್ಟರೇಟ್ ಪಡೆದಿದ್ದಾರೆ.

ಹಂಪನಾ ಶ್ರಮಣ ಪರಂಪರೆಯನ್ನು ಕನ್ನಡಿಗರ ಮುಂದೆ ತೆರೆದಿಟ್ಟರು. ಅದಕ್ಕಾಗಿ ಅವರು ಪಾಳಿ ಭಾಷೆ, ಪ್ರಾಕೃತ ಭಾಷೆಗಳ ಮೂಲಕ ನಮ್ಮ ದೇಶದ ಪ್ರಾಚೀನ ಲೋಕದರ್ಶನವನ್ನು ಮಾಡಿಸಿದ್ದಾರೆ. ಕನ್ನಡ ನಾಡಿನಲ್ಲೇ ಅತ್ಯಂತ ಒಳ ಹುನ್ನಾರದ ಭಾಗವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಅಳಿಸಿಹಾಕಿದ್ದ ಒಂದು ಧಾರ್ಮಿಕ ಪರಂಪರೆಯ ಕುರಿತಾದ ಮಾಹಿತಿಯನ್ನು ಸದ್ದಿಲ್ಲದೆ ತುಂಬಿ ಕೊಡುತ್ತಾ ಬಂದಿದ್ದಾರೆ. ಅಹಿಂಸೆಯೂ ಪಾಪ ಎಂಬ ಪರಂಪರೆಯ ಹಂಪನಾ ಎಂದೂ ಯಾರನ್ನೂ ಕಟುವಾಗಿ ಮಾತನಾಡಿ ನೋಯಿಸಿದವರಲ್ಲ. ನಾಡೋಜ ಹಂಪನಾ, ಸೃಜನಶೀಲತೆ, ವಿದ್ವತ್ತು, ಸಂಶೋಧನೆ ಮತ್ತು ಭಾಷಾವಿಜ್ಞಾನದ ಅಪಾರ ತಿಳಿವಳಿಕೆಯೊಂದಿಗೆ ಆಡಳಿತಾತ್ಮಕ ಪರಿಣತಿಯೂ ಉಳ್ಳ ಅಪರೂಪದ ವಿದ್ವಾಂಸರಾಗಿದ್ದಾರೆ.

ಕೃತಿಗಳು: ಹಂಪನಾ ಅವರು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಇವರ ಲೇಖನಿಯಿಂದ 115 ಪುಸ್ತಕಗಳು ಪ್ರಕಟವಾಗಿವೆ.

ಭಾಷಾ ವಿಜ್ಞಾನ(6), ಸಂಶೋಧನೆ(13), ಮಹಾಕಾವ್ಯ(ಚಾರುವಸಂತ). ಇಂಗ್ಲಿಷ್ ಸೇರಿದಂತೆ ಹಲವಾರು ಭಾರತೀಯ ಭಾಷೆಗಳಿಗೆ ತರ್ಜುಮೆಯಾಗಿದೆ. ಗ್ರಂಥ ಸಂಪಾದನೆ(15), ಜಾನಪದ(5), ಅನುವಾದ(4), ಜೀವನಚರಿತ್ರೆ(8), ಮಕ್ಕಳ ಸಾಹಿತ್ಯ(6), ವಿಮರ್ಶೆ(2), ಕಾದಂಬರಿ(ನಾಗಶ್ರೀ, ಸವ್ಯಸಾಚಿ ಪಂಪ), ಪ್ರಬಂಧ ಸಂಕಲನ(2), ಪ್ರಚಾರೋಪನ್ಯಾಸ ಮಾಲೆ(4), ಸಂಪಾದಿತ (11). ಇವಿಷ್ಟು ಕನ್ನಡ ಪುಸ್ತಕಗಳಲ್ಲದೆ ಇವರು ಇಂಗ್ಲಿಷಿನಲ್ಲಿಯೂ ಇಪ್ಪತ್ತು ಮೌಲಿಕ ಪುಸ್ತಕಗಳನ್ನು ಹೊರತಂದಿದ್ದಾರೆ.

ಇವರ ಇತ್ತೀಚಿನ ಪುಸ್ತಕ Spectrum of Classical Literature in Karnataka. ಇದು ಕನ್ನಡ ಸಾಹಿತ್ಯ ಮತ್ತು ಕಾವ್ಯಗಳ ಸಿಂಹಾವಲೋಕನವಾಗಿದೆ.

ಸಂಭಾವನಾ ಗ್ರಂಥಗಳು: ಪಚ್ಚೆತೆನೆ (1983ರಲ್ಲಿ ಸಂ: ಟಿ.ಕೆ. ಮಹಮೂದ್ ಮತ್ತು ಶಾ ಮಂ ಕೃಷ್ಣರಾಯ), ಸಂಕೃತಿ (1988ರಲ್ಲಿ ಸಂ: ಡಾ. ಎಚ್.ಜೆ. ಲಕ್ಕಪ್ಪಗೌಡ ಮತ್ತು ಪ್ರೊ. ಸುಕನ್ಯಾ ಮಾರುತಿ), ಸಂಕರ್ಷಣ (1988ರಲ್ಲಿ ಸಂ: ಜೆ. ಜ್ಞಾನಾನಂದ ಮತ್ತು ಡಾ. ಸಂಜೀವ ಕೆ. ಶೆಟ್ಟಿ), ಬರಹ ಬಾಗಿನ (1996 ಸಂ: ಎಚ್.ವಿ. ನಾಗೇಶ್), ಹಂಗ್ರಂಥಾವಳಿ (1997 ಸಂ: ಸ್ಮಿತಾರೆಡ್ಡಿ ಮತ್ತು ತಮಿಳ್ ಸೆಲ್ವಿ), ಹಂಪನಾ ವಾಙ್ಮಯ (2007 ಸಂ: ಡಾ. ಎಂ. ಭೈರೇಗೌಡ ಮತ್ತು ಬಿ.ಆರ್. ಸತ್ಯನಾರಾಯಣ).

ದೇಶ - ವಿದೇಶ

ಧ್ರುವಿ ಪಟೇಲ್‌ಗೆ 'ಮಿಸ್ ಇಂಡಿಯಾ ವರ್ಲ್ಡ್ ವೈಡ್ 2024' ಕಿರೀಟ



ವಾಷಿಂಗ್ಟನ್: ಭಾರತ ಮೂಲದ ಧ್ರುವಿ ಪಟೇಲ್ ಅವರು ಈ ವರ್ಷದ ಮಿಸ್ ಇಂಡಿಯಾ ವರ್ಲ್ಡ್ ವೈಡ್ 2024 ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ನ್ಯೂಜೆರ್ಸಿಯ ಎಡಿಸನ್‌ನಲ್ಲಿ ನಡೆದ ಸಮಾರಂಭದಲ್ಲಿ ಧ್ರುವಿ ಪಟೇಲ್ ಹೆಸರು ಘೋಷಣೆ ಮಾಡಲಾಯಿತು.

ಧ್ರುವಿ ಪಟೇಲ್ ಗುಜರಾತ್ ಮೂಲದವರಾಗಿದ್ದು ಅಮೆರಿಕದಲ್ಲಿ ಕಂಪ್ಯೂಟರ್ ಇಂಫಾರ್ಮೇಷನ್ ಸಿಸ್ಟಮ್ ಪದವಿ ಓದುತ್ತಿದ್ದಾರೆ. ಸುರಿನಾಮ್‌ನ ಲೀಸಾ ಅಬ್ದುಲ್‌ಹಕ್ ಮೊದಲ ರನ್ನರ್ ಅಪ್ ಆಗಿದ್ದರೆ, ನೆದರ್ಲೆಂಡ್ಸ್‌ನ ಮಾಳವಿಕಾ ಶರ್ಮಾ ಎರಡನೇ ರನ್ನರ್ ಅಪ್ ಆಗಿ ಆಯ್ಕೆಯಾಗಿದ್ದಾರೆ. ಅದರಂತೆ ಯುವ ವಿಭಾಗದಲ್ಲಿ ಗ್ವಾಡೆಲೋಪ್‌ನ ಸಿಯೆರಾ ಸುರೆಟ್ ಮಿಸ್ ಟೀನ್ ಇಂಡಿಯಾ ವರ್ಲ್ಡ್‌ವೈಡ್ ಆಗಿ ಆಯ್ಕೆಯಾದರೆ. ನೆದರ್ಲೆಂಡ್ಸ್‌ನ ಶ್ರೇಯಾ ಸಿಂಗ್ ಮತ್ತು ಸುರಿನಾಮ್‌ನ ಶ್ರದ್ಧಾ ಟೆಡ್ಜೊ ಮೊದಲ ಮತ್ತು ಎರಡನೇ ರನ್ನರ್ ಅಪ್ ಆಗಿ ಆಯ್ಕೆಯಾಗಿದ್ದಾರೆ. ಹೊರದೇಶದಲ್ಲಿರುವ ಭಾರತೀಯ ಪ್ರತಿಭೆಗಳನ್ನು ಗುರುತಿಸುವ ನಿಟ್ಟಿನಲ್ಲಿ ನ್ಯೂಯೋರ್ಕ್‌ನಲ್ಲಿ ನೆಲೆಸಿರುವ ಇಂಡಿಯನ್ ಫೆಸ್ಟಿವಲ್ ಕಮಿಟಿ ಮಿಸ್ ಇಂಡಿಯಾ ವರ್ಲ್ಡ್ ವೈಡ್ ಸ್ಪರ್ಧೆಯನ್ನು ಕಳೆದ 31 ವರ್ಷಗಳಿಂದ ನಡೆಸುತ್ತಾ ಬಂದಿದೆ.

ಸುಪ್ರೀಂಕೋರ್ಟ್ ಯೂಟ್ಯೂಬ್ ಚಾನೆಲ್ ಹ್ಯಾಕ್



ನವದೆಹಲಿ: ದೇಶದ ಸುಪ್ರೀಂಕೋರ್ಟ್‌ನ ಅಧಿಕೃತ ಯೂಟ್ಯೂಬ್ ಚಾನೆಲ್ ಅನ್ನೇ ಕಿಡಿಗೇಡಿಗಳು ಶುಕ್ರವಾರ ಹ್ಯಾಕ್ ಮಾಡಿ, ಕ್ರಿಪ್ಟೋಕರೆನ್ಸಿ ಸೇರಿದಂತೆ ಇತರ ಪ್ರಮೋಶನ್ ವಿಡಿಯೋಗಳನ್ನು ಪೋಸ್ಟ್ ಮಾಡಲಾಗಿದೆ. ಈ ಮಾಹಿತಿ ತಿಳಿಯುತ್ತಿದ್ದಂತೆ ತಾಂತ್ರಿಕ ತಂಡ ಸುಪ್ರೀಂ ಕೋರ್ಟ್ ಯೂಟ್ಯೂಬ್ ಚಾನೆಲ್ ತಾತ್ಕಾಲಿಕ ಸ್ಥಗಿತಗೊಳಿಸಿ ಸರಿಪಡಿಸುವ ಕಾರ್ಯ ಆರಂಭಿಸಿದೆ.

ಖದೀಮರು ಸುಪ್ರೀಂಕೋರ್ಟ್ ಯೂಟ್ಯೂಬ್ ಚಾನೆಲ್ ಹ್ಯಾಕ್ ಮಾಡಿದ ಬಳಿಕ ಅಮೆರಿಕದ ಮೂಲದ ರಿಪ್ಪಲ್ ಲ್ಯಾಬ್ಸ್ ಜಾಹೀರಾತು ವಿಡಿಯೋಗಳನ್ನು ಪೋಸ್ಟ್ ಮಾಡಿದ್ದಾರೆ. ಈ ಪೈಕಿ ಕ್ರಿಪ್ಟೋಕರೆನ್ಸಿ, ಎಕ್ಸ್‌ಆರ್‌ಪಿ ಸೇರಿದಂತೆ ಇತರ ಕೆಲ ವಿಡಿಯೋಗಳನ್ನು ಪೋಸ್ಟ್ ಮಾಡಿದ್ದಾರೆ.

ತಾಂತ್ರಿಕ ತಂಡ ಸುಪ್ರೀಂಕೋರ್ಟ್ ಚಾನೆಲ್ ತಾತ್ಕಾಲಿಕ ಸ್ಥಗಿತಗೊಳಿಸಿದೆ. ಈ ಕುರಿತು ಬ್ಯಾಕ್ ಎಂಡ್ ಟೀಮ್ ಕಾರ್ಯ ಪ್ರವೃತ್ತರಾಗಿದ್ದು, ಶೀಘ್ರದಲ್ಲೇ ತಾಂತ್ರಿಕ ಸಮಸ್ಯೆ ಬಗೆಹರಿಸಿ ಎಂದಿನಂತೆ ಯೂಟ್ಯೂಬ್ ಚಾನೆಲ್ ಕಾರ್ಯಪ್ರವೃತ್ತಗೊಳ್ಳಲಿದೆ. ಸದ್ಯ ಸುಪ್ರೀಂಕೋರ್ಟ್ ಯೂಟ್ಯೂಬ್ ಚಾನೆಲ್ ಲಭ್ಯವಿಲ್ಲ. ಇಲ್ಲಿರುವ ಯಾವುದೇ ವಿಡಿಯೋಗಳು ವೀಕ್ಷಣೆ ಸದ್ಯಕ್ಕೆ ಸಾಧ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೆಕ್ಸ್ ದಂಧೆ ಆರೋಪ: ಅಮೆರಿಕದ ಖ್ಯಾತ ಹಿಪ್–ಹಾಪ್ ಸ್ಟಾರ್ ಬಂಧನ

ಮ್ಯಾನ್ಹ್ಯಾಟನ್: ಅಮೆರಿಕದ ಖ್ಯಾತ ಹಿಪ್–ಹಾಪ್ ಸ್ಟಾರ್ ದಿಡ್ಡಿಯನ್ನು ಲೈಂಗಿಕ ದಂಧೆ ಮತ್ತು ಮಹಿಳೆಯರ ಕಳ್ಳಸಾಗಣೆ ಆರೋಪಕ್ಕೆ ಸಂಬಂಧಿಸಿ ಬಂಧಿಸಲಾಗಿದ್ದು, ಕೋರ್ಟ್ ಅವರಿಗೆ ಜಾಮೀನು ನಿರಾಕರಿಸಿದೆ.

54ರ ಹರೆಯದ ಕೊಂಬ್ಸ್ ಅಲಿಯಾಸ್ ದಿಡ್ಡಿ ಅವರು ಹಿಪ್–ಹಾಪ್ ಜಗತ್ತಿನ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟಿದ್ದು, ಕಳೆದ ಕೆಲವು ವರ್ಷದಲ್ಲಿ ಕೇಳಿಬಂದ ಆರೋಪಗಳ ಪ್ರವಾಹ ಉದ್ಯಮದಿಂದ ದೂರ ಸರಿಯುವಂತೆ ಮಾಡಿತ್ತು. ಫೆಡರಲ್ ಅಧಿಕಾರಿಗಳು ಅವರನ್ನು ಮ್ಯಾನ್‌ಹ್ಯಾಟನ್‌ನಲ್ಲಿ ಬಂಧಿಸಿದ್ದಾರೆ. ಲೈಂಗಿಕ ಕಳ್ಳಸಾಗಣೆ ತನಿಖೆ ಆರಂಭಿಸಿದ ಸುಮಾರು ಆರು ತಿಂಗಳ ನಂತರ ಲಾಸ್ ಏಂಜಲೀಸ್ ಮತ್ತು ಮಿಯಾಮಿಯಲ್ಲಿರುವ ಅವರ ಐಷಾರಾಮಿ ಮನೆಗಳ ಮೇಲೆ ದಾಳಿ ನಡೆಸಲಾಗಿದೆ.

ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಹಲವರು ಮೊಕದ್ದಮೆ ಹೂಡಿದ್ದು, ಆರೋಪಗಳನ್ನು ಕೊಂಬ್ಸ್ ನಿರಾಕರಿಸಿದ್ದಾರೆ. ವಕೀಲ ಮಾರ್ಕ್ ಅಗ್ನಿಫಿಲೊ ನ್ಯಾಯಾಲಯದ ಹೊರಗೆ ಕೊಂಬ್ಸ್ ತಪ್ಪಿತಸ್ಥರಲ್ಲ ಎಂದು ಹೇಳಿದ್ದು, ಅವರನ್ನು ಬಂಧನದಿಂದ ಬಿಡುಗಡೆ ಮಾಡಲು ಹೋರಾಡುವುದಾಗಿ ಹೇಳಿದ್ದಾರೆ.


ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರ ವಿರುದ್ಧ ಸುಪ್ರೀಂಕೋರ್ಟ್ ಗರಂ



ಬೆಂಗಳೂರು: ನಗರದಲ್ಲಿ ಮುಸ್ಲಿಮರು ಹೆಚ್ಚಿರುವ ಪ್ರದೇಶಕ್ಕೆ ಪಾಕಿಸ್ತಾನ ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಸುಪ್ರೀಂಕೋರ್ಟ್ ಕೆಂಡಾಮಂಡಲಗೊಂಡಿದ್ದು, ಈ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಂದ ವರದಿ ಕೇಳಿದೆ.

ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್.ಗವಾಯಿ, ಸೂರ್ಯಕಾಂತ್ ಹಾಗೂ ಹೃಷಿಕೇಶ್ ರಾಯ್ ನೇತೃತ್ವದ ಪೀಠ, ಈ ಸಂಬಂಧ ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಂದ ವರದಿ ಕೇಳಿದೆ. ಇತ್ತೀಚೆಗೆ ಕರ್ನಾಟಕ ಹೈಕೋರ್ಟ್‌ನ ವಿಚಾರಣೆಯ ವೇಳೆ ನ್ಯಾಯಮೂರ್ತಿ ವೇದವ್ಯಾಸಾಚಾರ್ ಶ್ರೀಶಾನಂದ ಅವರು, 'ಮೈಸೂರು ರಸ್ತೆಯ ಮೇಲ್ಸೇತುವೆಗೆ ಹೋಗಿ, ಪ್ರತಿ ಆಟೋರಿಕ್ಷಾದಲ್ಲಿ 10 ಜನರು ಇರುತ್ತಾರೆ. ಇದು ಅನ್ವಯಿಸುವುದಿಲ್ಲ ಏಕೆಂದರೆ ಗೋರಿ ಪಾಳ್ಯದಿಂದ ಮಾರುಕಟ್ಟೆಯವರೆಗಿನ ಮೈಸೂರು ರಸ್ತೆಯ ಮೇಲ್ಸೇತುವೆ ಪಾಕಿಸ್ತಾನದಲ್ಲಿದೆ, ಭಾರತದಲ್ಲಿಲ್ಲ. ಇದು ವಾಸ್ತವ. ನೀವು ಎಷ್ಟೇ ಕಟ್ಟುನಿಟ್ಟಿನ ಪೊಲೀಸ್ ಅಧಿಕಾರಿಯನ್ನು ಇರಿಸಿದರೂ ಅಷ್ಟೇ' ಎಂದು ಹೇಳಿದ್ದರು.

ಅಮೆರಿಕಾದಲ್ಲಿ ಸಿಖ್ ವಿರೋಧಿ ಹೇಳಿಕೆ: ರಾಹುಲ್‌ಗಾಂಧಿ ವಿರುದ್ಧ ಮೂರು ಎಫ್‌ಐಆರ್



ನವದೆಹಲಿ: ಅಮೆರಿಕದಲ್ಲಿ ಸಂದರ್ಶನದ ವೇಳೆ ಸಿಖ್ ವಿರೋಧಿ ಹೇಳಿಕೆ ಸಂಬಂಧ ವಿಪಕ್ಷ ನಾಯಕ ರಾಹುಲ್‌ಗಾಂಧಿ ವಿರುದ್ಧ ಛತ್ತೀಸಗಢದಲ್ಲಿ ಮೂರು ಎಫ್‌ಐಆರ್‌ಗಳು ದಾಖಲಾಗಿವೆ. ಪಶ್ಚಿಮ ದೆಹಲಿಯ ಪಂಜಾಬಿ ಬಾಗ್ ಮತ್ತು ತಿಲಕ್‌ನಗರ ಪೊಲೀಸ್ ಠಾಣೆಗಳು ಹಾಗೂ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿದೆ.

ಬಿಜೆಪಿ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ಮೋಹನ್ ಲಾಲ್ ಗಿಹಾರ, ಬಿಜೆಪಿ ಸಿಖ್ ಸೆಲ್ ಸದಸ್ಯ ಚರಂಜಿತ್ ಸಿಂಗ್ ಲವ್ಲಿ ಮತ್ತು ಪಕ್ಷದ ಎಸ್ಟಿ ವಿಭಾಗದ ಸದಸ್ಯ ಸಿಎಲ್ ಮೀನಾ ಕಾಂಗ್ರೆಸ್ ನಾಯಕನ ವಿರುದ್ಧ ದೂರು ದಾಖಲಿಸಿದ್ದಾರೆ.

ಬಿಜೆಪಿಯ ಸಿಖ್ ಸೆಲ್ ನಾಯಕ ಚರಂಜಿತ್ ಸಿಂಗ್ ಲವ್ಲಿ ಅವರ ದೂರಿನಲ್ಲಿ, ರಾಹುಲ್ ಗಾಂಧಿ ಸಿಖ್ಖರ ಬಗ್ಗೆ ವಿದೇಶಗಳಲ್ಲಿ ತಪ್ಪಾಗಿ ಬಿಂಬಿಸಿದ್ದಾರೆ ಎಂದು ಹೇಳಲಾಗಿದೆ. ಹೀಗಾಗಿ ರಾಹುಲ್‌ಗಾಂಧಿ ವಿರುದ್ಧ ಕ್ರಮ ಕೈಗೊಳ್ಳಬೇಕು. ರಾಹುಲ್ ಗಾಂಧಿ ಅವರು ಸಾಂವಿಧಾನಿಕ ಸ್ಥಾನಮಾನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಮೈಸೂರು ಮಿತ್ರ ಶನಿವಾರ 21 ಸೆಪ್ಟೆಂಬರ್ 2024

ಪಪಂ ನಾಮನಿರ್ದೇಶಿತ ಸದಸ್ಯರ ಮತದಾನ ಹಕ್ಕು ರದ್ದುಪಡಿಸುವಂತೆ ಆಗ್ರಹಿಸಿ

ತಹಸೀಲ್ದಾರ್ ಕಚೇರಿ ಎದುರು ಬಿಜೆಪಿ ಪ್ರತಿಭಟನೆ



ಕುಶಾಲನಗರ ತಹಸೀಲ್ದಾರ್ ಕಚೇರಿ ಎದುರು ಬಿಜೆಪಿ ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ವಿಪಕ್ಷ ನಾಯಕ ಆರ್.ಅಶೋಕ್, ಪ್ರತಿಭಟನಾಕಾರರಿಂದ ಮಾಹಿತಿ ಪಡೆದರು.

> ಕುಶಾಲನಗರ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಿ, ಮುಳ್ಳುಸೋಗೆ ಗ್ರಾಪಂ ಅನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ. ಮುಳ್ಳುಸೋಗೆ ಗ್ರಾಪಂ ಪ್ರತಿನಿಧಿಗಳಾಗಿ ಜಗದೀಶ್ ಮತ್ತು ಪದ್ಮಾವತಿ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಪಪಂ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನ ಚುನಾವಣೆಯಲ್ಲಿ ಮತದಾನ ಹಕ್ಕು ನೀಡಲಾಗಿದೆ. ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಹಾಗೂ ನ್ಯಾಯಾಲಯ ಆದೇಶದನ್ವಯ ಚುನಾವಣೆ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಆದರೆ, ಬಿಜೆಪಿ ಸದಸ್ಯರು ಹಾಗೂ ಆ ಪಕ್ಷದ ಕಾರ್ಯಕರ್ತರು ನನ್ನ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ನಾನು ಯಾವುದೇ ಪಕ್ಷದ ಕೈಗೊಂಬೆಯಾಗಿ ಕೆಲಸ ಮಾಡುತ್ತಿಲ್ಲ.
> –ಕಿರಣ್ ಗೌರಯ್ಯ, ತಹಸೀಲ್ದಾರ್

ಕುಶಾಲನಗರ, ಸೆ.20–ಇಲ್ಲಿನ ಪಟ್ಟಣ ಪಂಚಾಯಿತಿ 2ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸೆ.25ರಂದು ಚುನಾವಣೆ ಘೋಷಣೆಯಾಗಿದ್ದು, ಕಾನೂನು ಬಾಹಿರವಾಗಿ ನಾಮನಿರ್ದೇಶಿತ ಇಬ್ಬರು ಸದಸ್ಯರಿಗೆ ನೀಡಿರುವ ಮತದಾನ ಹಕ್ಕು ರದ್ದುಪಡಿಸಿ ನ್ಯಾಯ ಸಮ್ಮತ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ತಹಸೀಲ್ದಾರ್ ಕಚೇರಿ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು.

ಬಿಜೆಪಿ ನಗರಾಧ್ಯಕ್ಷ ಎಂ.ಎಂ.ಚರಣ್ ಹಾಗೂ ಕಾರ್ಯದರ್ಶಿ ಎಚ್.ಎಂ.ಮಧುಸೂದನ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಪಪಂ ಸದಸ್ಯರು, ತಹಸೀಲ್ದಾರ್ ಕಚೇರಿ ಎದುರು ಕೆಲಕಾಲ ಧರಣಿ ನಡೆಸಿದರು.

ಬಿಜೆಪಿ ಮುಖಂಡ ಕೆ.ಜಿ.ಮನು ಮಾತನಾಡಿ, ಕುಶಾಲನಗರ ಪಪಂಗೆ ಒಟ್ಟು 7 ಸದಸ್ಯರನ್ನು ನಾಮ ನಿರ್ದೇಶನ ಮಾಡಿರುವುದು ಕಾನೂನು ಬಾಹಿರ ಹಾಗೂ ಇವರಲ್ಲಿ ಉದ್ದೇಶ ಪೂರ್ವಕವಾಗಿ ಇಬ್ಬರು ಸದಸ್ಯರಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನ ಚುನಾವಣೆಯಲ್ಲಿ ಮತದಾನ ಮಾಡಲು ಅವಕಾಶ ನೀಡಲಾಗಿದೆ. ಕರ್ನಾಟಕ ಪೌರಾಡಳಿತ ಕಾಯ್ದೆ ಪ್ರಕಾರ ನಾಮನಿರ್ದೇಶಿತ ಸದಸ್ಯರಿಗೆ ಮತದಾನಕ್ಕೆ ಹಕ್ಕು ಇಲ್ಲ. ಆದರೆ, ಚುನಾವಣಾಧಿಕಾರಿ ಆದ ತಹಸೀಲ್ದಾರ್ ಕಾಂಗ್ರೆಸ್ ಮುಖಂಡರ ಒತ್ತಡಕ್ಕೆ ಮಣಿದು ಕಾನೂನು ಉಲ್ಲಂಘಿಸಿ ಚುನಾವಣೆ ನಡೆಸಲು ಮುಂದಾಗಿದ್ದಾರೆ ಎಂದು ದೂರಿದರು.

ಬಿಜೆಪಿ ನಗರಾಧ್ಯಕ್ಷ ಚರಣ್ ಮಾತನಾಡಿ, ಕುಶಾಲನಗರ ಪಪಂಗೆ ಮುಳ್ಳುಸೋಗೆ ಗ್ರಾಪಂ ಸೇರ್ಪಡೆಗೊಂಡು ಪುರಸಭೆಯಾಗಿ ಮೇಲ್ದರ್ಜೆಗೆ ಸೇರಿಸಿ ವರ್ಷಗಳೇ ಕಳೆದಿವೆ. ಆದರೆ, ಅಕ್ರಮ ಹಾಗೂ ಕಾನೂನು ಬಾಹಿರವಾಗಿ ಚುನಾವಣೆ ನಡೆಸಲು ಕಾಂಗ್ರೆಸ್ ಮುಖಂಡರು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಪಪಂ ಸದಸ್ಯರಾದ ಡಿ.ಕೆ. ತಿಮ್ಮಪ್ಪ, ಅಮೃತ್ ರಾಜ್, ಜೈವರ್ಧನ್, ಜಗದೀಶ್ ಬಿಜೆಪಿ ಮುಖಂಡರಾದ ಉಮಾಶಂಕರ್, ಎಂ.ಡಿ.ಕೃಷ್ಣಪ್ಪ, ಮಂಜುನಾಥ್, ಎಂ.ವಿ.ರಾಜೇಶ್, ಎಚ್.ಟಿ.ವಸಂತ, ವೈಶಾಕ್, ಪ್ರವೀಣ್, ಆಶೀಷ್, ಪ್ರಶಾಂತ್, ಸಚಿನ್ ಮತ್ತಿತರರು ಪಾಲ್ಗೊಂಡಿದ್ದರು. ಇದೇ ವೇಳೆ ವೃತ್ತ ನಿರೀಕ್ಷಕ ಪ್ರಕಾಶ್ ನೇತೃತ್ವದಲ್ಲಿ ಪೊಲೀಸ್ ಭದ್ರತೆ ಏರ್ಪಡಿಸಲಾಗಿತ್ತು.

ಯಾರದ್ದೋ ಮಾತಿಗೆ ಜೀವನ ಹಾಳು ಮಾಡಿಕೊಳ್ಳಬೇಡಿ

ತಹಸೀಲ್ದಾರ್‌ಗೆ ವಿಪಕ್ಷ ನಾಯಕ ಆರ್.ಅಶೋಕ್ ಎಚ್ಚರಿಕೆ

ಯಾರದ್ದೋ ಮಾತು ಕೇಳಿ ನಿಮ್ಮ ಜೀವನ ಹಾಳು ಮಾಡಿಕೊಳ್ಳಬೇಡಿ, ನಿವೃತ್ತಿಯಾದರೂ ನಿಮ್ಮನ್ನು ಬಿಡೋದಿಲ್ಲ, ಪೆನ್ಷನ್ ಕೂಡ ಬರೋದಿಲ್ಲ ಎಂದು ತಹಸೀಲ್ದಾರ್ ಕಿರಣ್ ಗೌರಯ್ಯ ಅವರನ್ನು ವಿಪಕ್ಷ ನಾಯಕ ಆರ್.ಅಶೋಕ್ ಗದರಿಸಿದರು. ಕುಶಾಲನಗರ ಪಪಂ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಚುನಾವಣೆ ಸಂಬಂಧ ಬಿಜೆಪಿ ಕಾರ್ಯಕರ್ತರು ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಪ್ರತಿಭಟನಾಕಾರರಿಂದ ಮಾಹಿತಿ ಪಡೆದು ನಂತರ ತಹಸೀಲ್ದಾರ್‌ರ ತರಾಟೆ ತೆಗೆದುಕೊಂಡರು.

ರಾಜ್ಯದೆಲ್ಲೆಡೆ ಪಟ್ಟಣ ಪಂಚಾಯಿತಿಗೆ ಒಂದೇ ಕಾಯ್ದೆ ಇರೋದು. ನಾಮನಿರ್ದೇಶಿತ ಸದಸ್ಯರಿಗೆ ಮತದಾನ ಹಕ್ಕು ಕಲ್ಪಿಸಿರುವುದು ರಾಜ್ಯದಲ್ಲಿ ಎಲ್ಲೂ ಇಲ್ಲ. ನಿಮಗೆ ವಿಶೇಷ ಕಾನೂನು ಎಲ್ಲಿಂದ ಬಂತು. ಐದು ಬಾರಿ ಮಂತ್ರಿಯಾಗಿರುವ ನನಗೆ ಇದು ಹೊಸ ವಿಚಾರ. ಕಾನೂನು ರೀತಿ ಕಾರ್ಯನಿರ್ವಹಿಸಿ, ಯಾರದ್ದೋ ಮಾತು ಕೇಳಿ ನಿಮ್ಮ ಜೀವನ ಹಾಳು ಮಾಡಿಕೊಳ್ಳಬೇಡಿ ಎಂದು ತಹಸೀಲ್ದಾರ್‌ಗೆ ಎಚ್ಚರಿಸಿದರು.

ನಗುವಿನಿಂದ ಮನುಷ್ಯನ ಶಕ್ತಿ ಹೆಚ್ಚು

ವಿರಾಜಪೇಟೆ, ಸೆ.20–ಮನುಷ್ಯ ಆರೋಗ್ಯ ಯುತವಾಗಿರಲು ಹೆಚ್ಚು ನಗುಬೇಕು. ಆಗ ಮಾತ್ರ ಶರೀರದಲ್ಲಿ ಶಕ್ತಿ ಹೆಚ್ಚುತ್ತದೆ ಎಂದು ಮೈಸೂರಿನ ಸಾಹಿತಿ ಮತ್ತು ಚುಕ್ಕಿ ಚಿತ್ರ ಕಲಾವಿದ ಮೋಹನ್ ವರ್ಣೇಕರ್ ಹೇಳಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಲಿಂಗರಾಜೇಂದ್ರ ಭವನದಲ್ಲಿ ನಡೆದ ಮಾಸಿಕ ತತ್ತ್ವ ಚಿಂತನಾ ಗೋಷ್ಠಿಯ ಹೊಂಬೆಳಕು ಕಾರ್ಯಕ್ರಮದಲ್ಲಿ 'ಆರೋಗ್ಯವಾಗಿರೋಣ' ಕುರಿತು ಉಪನ್ಯಾಸ ನೀಡಿ ಮಾತನಾಡಿದ ಅವರು, ಮನುಷ್ಯ ಮಾತ್ರ ನಗಲು ಸಾಧ್ಯ. ಜೀವನದ ನೆಮ್ಮದಿಗೆ ನಗುವೇ ಮುಖ್ಯ. ಎಷ್ಟೇ ಅಲಂಕಾರ ಮಾಡಿಕೊಂಡರೂ ಮುಖದಲ್ಲಿ ನಗುವಿಲ್ಲದಿದ್ದರೆ ಪ್ರಯೋಜನವಿಲ್ಲ. ಇತ್ತೀಚಿನ ದಿನಗಳಲ್ಲಿ ನಗುವುದು ನಾಗರಿಕತೆಯಾಗಿದೆ ಎಂದರು.

ನಗುವಿನಿಂದ ಶರೀರದ ಕಾಯಿಲೆಗಳು ಗುಣಮುಖವಾಗಲು ಸಾಧ್ಯ. ನಗುವಿನಲ್ಲಿ ಅನೇಕ ಬಗೆಯ ನಗುಗಳಿವೆ. ಆದರೆ, ಅಹಂಕಾರ ಮತ್ತು ದ್ವೇಷದ ನಗು ಬೇಡ. ಹೃದಯದಿಂದ ಬರುವ ನಗು ಒಳ್ಳೆಯದು. ನಾನು 40 ವರ್ಷಗಳಿಗೂ ಹೆಚ್ಚು ಕಾಲ ಚುಕ್ಕಿ ಮೂಲಕ ಚಿತ್ರಗಳನ್ನು ಬಿಡಿಸುತ್ತಿದ್ದೇನೆ ಎಂದರು.

ಇದೇ ವೇಳೆ ಮೋಹನ್ ವರ್ಣೇಕರ್, ಕರ್ನಾಟಕದ ಶ್ರೇಷ್ಠ ಸಾಹಿತಿಗಳು, ಹೆಸರಾಂತ ಕವಿಗಳು, ರಾಷ್ಟ್ರ ಪ್ರಶಸ್ತಿ ಪಡೆದ ಕವಿಗಳ ಚುಕ್ಕಿ ಚಿತ್ರಗಳನ್ನು ಪ್ರದರ್ಶಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿರಾಜಪೇಟೆ ಪಕ್ಷಿ ತಜ್ಞ ಎಸ್.ವಿ.ನರಸಿಂಹನ್, ಉತ್ತಮ ಕಲಾವಿದರಾದ ಮೋಹನ್ ವರ್ಣೇಕರ್ ಅವರು 16 ಪ್ರಶಸ್ತಿ ಹಾಗೂ 90 ಸನ್ಮಾನಗಳನ್ನು ಪಡೆದುಕೊಂಡಿದ್ದಾರೆ. ಇವರು ವಿರಾಜಪೇಟೆ ಸಂತಅನ್ನಮ್ಮ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರಿನ ವಿಧಾನ ಸೌಧದಲ್ಲಿ ಸೇವೆ ಸಲ್ಲಿಸಿ, ಈಗ ಮೈಸೂರಿನಲ್ಲಿ ವಾಸವಾಗಿದ್ದಾರೆ. ಇವರ ಕಲೆ ಜೀವಂತವಾಗಿರಲಿ ಎಂದು ಆಶಿಸಿದರು.

ಸಾನಿಧ್ಯ ವಹಿಸಿದ ಅರಮೇರಿ ಕಳಂ ಚೇರಿ ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ನಗುವುದಕ್ಕೆ ಯಾವುದೇ ವಯಸ್ಸಿನ ಮಿತಿ ಇಲ್ಲ. ಮನುಷ್ಯನ ದ್ವೇಷವನ್ನು ದೂರ ಮಾಡಲು ನಗು ಮುಖ್ಯ. ಆದರೆ, ಉತ್ತಮ ಬೆಳವಣಿಗೆ ನಗು ಆಗಿರಲಿ. ಇತ್ತೀಚೆಗೆ ನಗಿಸಲು ಹಾಸ್ಯರೂಪದ ಕಾರ್ಯಕ್ರಮಗಳು ಉದ್ಯೋಗವೇ ಆಗಿದೆ. ಜೀವನದಲ್ಲಿ ಕಲೆಗಳನ್ನು ರೂಢಿಸಿಕೊಳ್ಳುವುದು ಉತ್ತಮ ಎಂದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ದೀಪ್ತಿ, ದಿವ್ಯ ದರ್ಶಿನಿ, ಸುಶ್ಮಿತಾ ಮತ್ತಿತರರು ಇದ್ದರು.



ಅರಮೇರಿ ಕಳಂಚೇರಿ ಮಠದಲ್ಲಿ ನಡೆದ ಹೊಂಬೆಳಕು ಕಾರ್ಯಕ್ರಮವನ್ನು ಕಲಾವಿದ ಮೋಹನ್ ವರ್ಣೇಕರ್ ಉದ್ಘಾಟಿಸಿದರು.

ಗಲಭೆಗಳಿಗೆ ರಾಜ್ಯ ಸರ್ಕಾರದ ವೈಫಲ್ಯಗಳೇ ಕಾರಣ

ಮಡಿಕೇರಿಯಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಆರೋಪ

ಮಡಿಕೇರಿ, ಸೆ.20–ರಾಜ್ಯದಲ್ಲಿ ಗಣೇಶ ಮೂರ್ತಿ ವಿಸರ್ಜನೋತ್ಸವ ಸಂದರ್ಭ ನಡೆಯುತ್ತಿರುವ ಗಲಭೆಗಳಿಗೆ ಸರ್ಕಾರದ ವೈಫಲ್ಯಗಳೇ ಕಾರಣ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಬಿಜೆಪಿ ಸದಸ್ಯತ್ವ ಅಭಿಯಾನ ಕುರಿತು ನಡೆದ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಲಭೆಗಳು ರಾಜ್ಯ ಸರ್ಕಾರದ ವೈಫಲ್ಯದಿಂದ ಆಗುತ್ತಿವೆ. ಇದಕ್ಕೆಲ್ಲ ಬಿಜೆಪಿ ಕುಮ್ಮಕ್ಕು ಎನ್ನುತ್ತಿರುವವರಿಗೆ ನಾಚಿಕೆಯಾಗಬೇಕು. ನಾನು ಸೇರಿದಂತೆ ಬಿಜೆಪಿಯ ಹಲವು ನಾಯಕರ ವಿರುದ್ಧ ಪ್ರಕರಣ ದಾಖಲಿಸಿರುವುದು ಯಾಕೆ? ಎಂದು ಪ್ರಶ್ನಿಸಿದರು.



ಮಡಿಕೇರಿಯಲ್ಲಿ ನಡೆದ ಬಿಜೆಪಿ ಸದಸ್ಯತ್ವ ಅಭಿಯಾನ ಕುರಿತ ಸಭೆಯಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿದರು.

ಗಣೇಶ ಪ್ರತಿಷ್ಠಾಪನೆ–ವಿಸರ್ಜನೆ ಕಾರ್ಯಕ್ರಮವನ್ನು ಪೊಲೀಸರು ನಿರ್ಧರಿಸುತ್ತಿರುವುದು ಖಂಡನೀಯ. ವಿಘ್ನ ನಿವಾರಕ ಗಣೇಶನಿಗೆ ವಿಘ್ನವನ್ನು ಕಾಂಗ್ರೆಸ್ ನೀಡುತ್ತಿದೆ. ಓಲೈಕೆ ರಾಜಕಾರಣಕ್ಕೆ ಮುಂದಿನ ದಿನದಲ್ಲಿ ರಾಜ್ಯದ ಜನ ತಕ್ಕಪಾಠ ಕಲಿಸಲಿದ್ದಾರೆ. ಗಣಪತಿ ಉತ್ಸವಕ್ಕೆ ತಡೆಯೊಡ್ಡುವ ಕೆಲಸ ನಡೆಯಬಾರದು. ಸರ್ಕಾರದ ನಡೆ ಪ್ರಶ್ನಿಸಿದರೆ ಕೇಸ್ ಹಾಕುವ ಕೆಲಸ ನಡೆಯುತ್ತಿದೆ ಎಂದರು.

ಎಲ್ಲವನ್ನು ವಿಪಕ್ಷದ ಮೇಲೆ ಹಾಕುವ ಸಂಚು ನಡೆಯುತ್ತಿದೆ. ಉಚಿತ ಭಾಗ್ಯದಿಂದ ರಾಜ್ಯದ ಖಜಾನೆ ದಿವಾಳಿಯಾಗಿದ್ದು, ಕೆಎಸ್‌ಆರ್‌ಟಿಸಿ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಳ ನೀಡಲಾಗದ ಪರಿಸ್ಥಿತಿಗೆ ಬಂದಿರುವುದು ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದು ದೂರಿದರು.

1.30 ಕೋಟಿ ಸದಸ್ಯತ್ವ ಗುರಿ: ರಾಜ್ಯದಾದ್ಯಂತ ಬಿಜೆಪಿ 1.30 ಕೋಟಿ ಸದಸ್ಯತ್ವ ನೋಂದಣಿ ಗುರಿ ಹೊಂದಿದ್ದು, ಈ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಗೆ ಭೇಟಿ ನೀಡಿ ಮಾಹಿತಿ ಪಡೆಯಲಾಗುತ್ತಿದೆ.

ಬಿಜೆಪಿಗೆ ಸದಸ್ಯತ್ವವೇ ಜೀವಾಳವಾಗಿದೆ. ಬಿಜೆಪಿ ಅತೀ ಹೆಚ್ಚು ಸದಸ್ಯರನ್ನು ಹೊಂದಿರುವ ಪಕ್ಷವಾಗಿ ಬೆಳೆಯಬೇಕೆಂಬ ಉದ್ದೇಶದಿಂದ ಅಭಿಯಾನ ಕೈಗೊಳ್ಳಲಾಗಿದೆ. ಕಾಂಗ್ರೆಸ್ ಸದಸ್ಯರ ಮೇಲೆ ನಿಂತಿಲ್ಲ, ಬದಲಾಗಿ ಒಂದು ಕುಟುಂಬದ ಮೇಲೆ ಅವಲಂಬಿತವಾಗಿದೆ ಎಂದು ಅಶೋಕ್ ವ್ಯಂಗ್ಯವಾಡಿದರು.

ಈ ಸಂದರ್ಭ ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ಪಕ್ಷ ಪ್ರಮುಖರಾದ ನೆಲ್ಲೀರ ಚಲನ್, ಲೋಕೇಶ್, ಮಾಜಿ ಅಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ, ಜಿಲ್ಲಾ ವಕ್ತಾರ ಬಿ.ಕೆ. ಅರುಣ್ ಕುಮಾರ್, ಶಿಸ್ತು ಸಮಿತಿ ಅಧ್ಯಕ್ಷೆ ಪಟ್ಟಡ ರೀನಾ ಪ್ರಕಾಶ್, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಹಾಜರಿದ್ದರು.



ಮಡಿಕೇರಿಯಲ್ಲಿ ರಸ್ತೆಗಳ ಗುಂಡಿ ಮುಚ್ಚುವಂತೆ ಒತ್ತಾಯಿಸಿ ಆಮ್ ಆದ್ಮಿ ಪಾರ್ಟಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಸ್ತೆ ಗುಂಡಿ ಮುಚ್ಚುವಂತೆ ಆಗ್ರಹಿಸಿ ಎಎಪಿ ಪ್ರತಿಭಟನೆ

ಮಡಿಕೇರಿ, ಸೆ.20–ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದರೂ ನಗರಸಭೆ ಇನ್ನೂ ರಸ್ತೆಗಳ ಗುಂಡಿ ಮುಚ್ಚಲು ಮುಂದಾಗಿಲ್ಲ ಎಂದು ಆರೋಪಿಸಿ ಆಮ್ ಆದ್ಮಿ ಪಾರ್ಟಿ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರಸಭಾ ಕಚೇರಿ ಬಳಿಯ ಯುದ್ಧ ಸ್ಮಾರಕ ಮುಂಭಾಗದ ಗುಂಡಿ ಬಿದ್ದ ರಸ್ತೆಯಲ್ಲಿ ಬಾಳೆಗಿಡ ನೆಟ್ಟು ಪ್ರತಿಭಟನೆ ನಡೆಸಿದ ಎಎಪಿ ಮುಖಂಡರು ಮತ್ತು ಕಾರ್ಯಕರ್ತರು, ನಗರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಎಲ್ಲಾ ರಸ್ತೆಗಳು ಹದಗೆಟ್ಟಿದ್ದು, ವಾಹನ ಸಂಚಾರವೇ ದುಸ್ತರವಾಗಿದೆ. ಮಳೆ ಕಡಿಮೆಯಾದರೂ ನಗರಸಭೆ ಗುಂಡಿ ಮುಚ್ಚುವ ಕಾರ್ಯ ನಡೆಸುತ್ತಿಲ್ಲ. ಐತಿಹಾಸಿಕ ದಸರಾ ಹಬ್ಬಕ್ಕೆ ದಿನಗಣನೆ ಆರಂಭವಾಗಿದೆ. ಇಲ್ಲಿನ ದಶಮಂಟಪಗಳ ಶೋಭಾಯಾತ್ರೆಗಳನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಮಂದಿ ನಗರಕ್ಕೆ ಆಗಮಿಸುತ್ತಾರೆ. ದಶಮಂಟಪಗಳು ಸಾಗುವ ರಸ್ತೆಗಳನ್ನು ಕೂಡ ಸರಿಪಡಿಸಿಲ್ಲ. ತಕ್ಷಣ ನಗರಸಭೆ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಎಎಪಿ ಮುಖಂಡ ಎಂ.ಕೆ.ಅಪ್ಪಯ್ಯ ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಕ್ಷಯರೋಗ ಪತ್ತೆ ಪರೀಕ್ಷೆ ತೀವ್ರಗೊಳಿಸಿ

ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕ್ಷಯರೋಗದಿಂದ ಗುಣಮುಖರಾದವರನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ಆತ್ಮೀಯತೆಯಿಂದ ಮಾತನಾಡಿಸಿದರು.

> ಸಿಕಲ್‌ಸೆಲ್ ನಿಯಂತ್ರಣ ಸಂಬಂಧ ರಾಜ್ಯ ನಿರ್ದೇಶನದನ್ವಯ ಜಿಲ್ಲೆಯಲ್ಲಿ ಮೊದಲ ಹಂತದಲ್ಲಿ ಸೋಲಿಗ, ಬೆಟ್ಟಕುರುಬ, ಜೇನುಕುರುಬ ಹಾಗೂ ಯರವಾ ಸಮುದಾಯಗಳ ಆದಿವಾಸಿಗಳಿಗೆ ಸಿಕಲ್‌ಸೆಲ್ ಕಾಯಿಲೆ ಸಂಬಂಧ 14,470 ಜನರನ್ನು ಪರೀಕ್ಷೆಗೊಳಪಡಿಸಲಾಗಿದೆ. ಇದರಲ್ಲಿ 65 ಪಾಸಿಟಿವ್ ಪ್ರಕರಣಗಳು ಕಂಡುಬಂದಿವೆ. ಈ ಪೈಕಿ ಸಿಕಲ್‌ಸೆಲ್ ಖಚಿತವಾಗಿ 40 ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಎರಡನೇ ಹಂತದಲ್ಲಿ ನಾಯಕ, ಮೇದ, ಹಕ್ಕಿಪಿಕ್ಕಿ ಸೇರಿದಂತೆ ಪರಿಶಿಷ್ಟ ಸಮುದಾಯದ ಜನರನ್ನು ಪರೀಕ್ಷೆಗೊಳಿಸುವ ಕಾರ್ಯ ನಡೆಯಲಿದೆ.
> –ಶಿಲ್ಪನಾಗ್, ಜಿಲ್ಲಾಧಿಕಾರಿ

ಚಾಮರಾಜನಗರ, ಸೆ.20–ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕ್ಷಯರೋಗ ಪರೀಕ್ಷೆಗಳನ್ನು ತೀವ್ರಗೊಳಿಸಿ, ಪ್ರಕರಣಗಳನ್ನು ಗುರುತಿಸಿ ಅಗತ್ಯ ಚಿಕಿತ್ಸೆ ನೀಡಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಕ್ಷಯ, ರಕ್ತನಿಧಿ, ಎಚ್‌ಐವಿ, ಹೈಪಟೈಟಿಸ್, ಸಿಕಲ್‌ಸೆಲ್ ನಿಯಂತ್ರಣ ಸಂಬಂಧ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸೋಂಕು ಇರುವ ವ್ಯಕ್ತಿ ಸೀನು, ಕೆಮ್ಮಿದಾಗ ಕ್ಷಯ ಇತರರಿಗೆ ಹರಡುವ ಸಂಭವ ಹೆಚ್ಚಾಗಿರುತ್ತದೆ. ಕ್ಷಯರೋಗಿಗಳನ್ನು ಪತ್ತೆಹಚ್ಚಿ ಈಗಾಗಲೇ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಗ್ರಾಮೀಣ ಭಾಗದಲ್ಲಿ ಶೇ.85ರಷ್ಟು, ನಗರ ಪ್ರದೇಶಗಳಲ್ಲಿ ಶೇ.50ರಷ್ಟು ಕ್ಷಯ ರೋಗಿಗಳಿದ್ದಾರೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಅಭಿವೃದ್ಧಿ ಅಧಿಕಾರಿಗಳು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಹಕಾರದೊಂದಿಗೆ ಕ್ಷಯ ಪತ್ತೆಗೆ ಗುರಿ ನಿಗದಿಪಡಿಸಬೇಕು. ಜೊತೆಗೆ ಆಯಾ ತಾಲೂಕು ವೈದ್ಯಾಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ, ಕ್ಷಯ ಮುಕ್ತ ಗ್ರಾಮ ಪಂಚಾಯಿತಿಯನ್ನಾಗಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ನಿರ್ದೇಶನ ನೀಡಿದರು.

ಹನೂರು ಹಾಗೂ ಕೊಳ್ಳೇಗಾಲ ತಾಲೂಕಿನಲ್ಲಿ ಇತರೆ ತಾಲೂಕುಗಳಿಗಿಂತ ಹೆಚ್ಚಿನ ಕ್ಷಯ ರೋಗಿಗಳಿರುವುದು ಕಂಡುಬಂದಿದೆ. ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರ ಸೇರಿದಂತೆ ಎಲ್ಲಾ ಆಸ್ಪತ್ರೆಗಳಲ್ಲಿ ಕ್ಷಯ ಪರೀಕ್ಷೆಗಳನ್ನು ಹೆಚ್ಚಿಸಬೇಕು. ಇದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಪಂಚಾಯಿತಿ ಮಟ್ಟದಲ್ಲಿ ವ್ಯಾಪಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಶಾಲಾ ಮಟ್ಟದ ಪೋಷಕರ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಬೇಕು. ಎಲ್ಲಾ ಗ್ರಾಪಂಗೆ ಗ್ರಾಮ ಆರೋಗ್ಯ ಕಿಟ್ ನೀಡಲಾಗಿದ್ದು, ಇವುಗಳ ಸದ್ಬಳಕೆಯಾಗಬೇಕು. ಒಟ್ಟಿನಲ್ಲಿ ಕ್ಷಯ ಪತ್ತೆಗೆ ಸೂಕ್ಷ್ಮ ಕ್ರಿಯಾ ಯೋಜನೆ ರೂಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ಕ್ಷಯರೋಗದಿಂದ ಗುಣಮುಖರಾದವರನ್ನು ಜಿಲ್ಲಾಧಿಕಾರಿ ಆತ್ಮೀಯತೆಯಿಂದ ಮಾತನಾಡಿಸಿ, ಅವರೊಂದಿಗೆ ಸಂವಾದ ನಡೆಸಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ, ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ.ರವಿಕುಮಾರ್, ವೈದ್ಯಕೀಯ ವಿಜ್ಞಾನಗಳ ಬೋಧನಾ ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ಎಲ್ಲಾ ತಾಲೂಕು ಆರೋಗ್ಯಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ರಕ್ತದಾನ ಮೂಲಕ ಮೋದಿ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬ ಪ್ರಯುಕ್ತ ರಕ್ತದಾನ ಶಿಬಿರ ನಡೆಯಿತು.

ಚಾಮರಾಜನಗರ: ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬ ಪ್ರಯುಕ್ತ ನಗರದಲ್ಲಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ರಕ್ತದಾನ ಶಿಬಿರ ಆಯೋಜಿಸಿದ್ದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸೇವಾ ಕಾರ್ಯಕ್ರಮದಲ್ಲಿ 20ಕ್ಕೂ ಹೆಚ್ಚು ಕಾರ್ಯಕರ್ತರು ರಕ್ತದಾನ ಮಾಡಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಧಾನಿಯಾಗಿ ಉತ್ತಮ ಆಡಳಿತ ನೀಡುವ ಜೊತೆಗೆ ವಿಶ್ವ ಮಟ್ಟದಲ್ಲಿ ಭಾರತವನ್ನು ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಅವರ ದೂರ ದೃಷ್ಟಿತ್ವ ಭ್ರಷ್ಟಾಚಾರ ರಹಿತ ಆಡಳಿತ ದೇಶದ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ಕಾಡಾ ಮಾಜಿ ಅಧ್ಯಕ್ಷ ಜಿ.ನಿಜಗುಣ ರಾಜು ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಆಡಳಿತದಲ್ಲಿ ದೆಹಲಿಯಲ್ಲಿ ಘೋಷಣೆಯಾದ ಯೋಜನೆಯ ಅನುದಾನ ಒಂದು ಪೈಸೆ ಕಡಿಮೆ ಇಲ್ಲದಂತೆ ಫಲಾನುಭವಿಗಳ ಖಾತೆಗೆ ತಲುಪುತ್ತಿದೆ. ಹಗಲು ರಾತ್ರಿ ಎನ್ನದೇ ದೇಶದ ಅಭಿವೃದ್ಧಿಗೆ ತಮ್ಮನ್ನೇ ಸಮರ್ಪಣೆ ಮಾಡಿಕೊಂಡಿರುವ ಮೋದಿ ವಿಶ್ವ ನಾಯಕರು ಎಂದು ಬಣ್ಣಿಸಿದರು.

ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸೂರ್ಯಕುಮಾರ್ ಮಾತನಾಡಿದರು. ನಗರಸಭೆ ಅಧ್ಯಕ್ಷ ರಾಮಸಮುದ್ರ ಸುರೇಶ್, ಉಪಾಧ್ಯಕ್ಷೆ ಮಮತಾ ಬಾಲಸುಬ್ರಮಣ್ಯ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ನೂರೊಂದುಶೆಟ್ಟಿ, ಎಸ್.ಬಾಲಸುಬ್ರಹ್ಮಣ್ಯ, ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ್, ಅನಂದ್, ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ, ಜಯಶೀಲಾ ರಾಜಶೇಖರ್, ವನಾಜಾಕ್ಷಿ, ದಾಕ್ಷಾಯಿಣಿ, ಚಂದ್ರಶೇಖರ್, ರಂಗಸ್ವಾಮಿ, ಕೂಸಣ್ಣ, ನಗರಸಭೆ ಸದಸ್ಯರಾದ ಶಿವುನಾಯಕ್, ನಟರಾಜು, ಕುಲಗಾಣ ಶಾಂತಮೂರ್ತಿ, ಜಯಸುಂದರ್, ಶೈಲಾ, ಮಹೇಶ್ ಮೊದಲಾದವರು ಇದ್ದರು.

ರೋಗಿಗಳ ಆರೈಕೆಯಲ್ಲಿ ವೈದ್ಯರ ಪಾತ್ರ ಪ್ರಮುಖ

ತುರ್ತು ವೈದ್ಯಕೀಯ ಸಮ್ಮೇಳನದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಅಭಿಮತ



ಚಾಮರಾಜನಗರದಲ್ಲಿ ನಡೆದ ರಾಜ್ಯ ಮಟ್ಟದ ತುರ್ತು ವೈದ್ಯಕೀಯ ಸಮ್ಮೇಳನವನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ಉದ್ಘಾಟಿಸಿದರು.

ಚಾಮರಾಜನಗರ: ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಗೆ ತುರ್ತು ವೈದ್ಯಕೀಯ ಸೇವೆ ಜೀವ ರಕ್ಷಕವಾಗಿರುವುದರಿಂದ ರೋಗಿಗಳ ಆರೈಕೆಯಲ್ಲಿ ವೈದ್ಯರ ಪಾತ್ರ ಪ್ರಮುಖವಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅಭಿಪ್ರಾಯಪಟ್ಟರು.

ನಗರದ ಅಂಬೇಡ್ಕರ್ ಭವನದಲ್ಲಿ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಕೆಇಪಿಎ ಹಾಗೂ ಐಎಂಕೆ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ 4ನೇ ವಾರ್ಷಿಕ ತುರ್ತು ವೈದ್ಯಕೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಆಡಳಿತ ವಿಚಾರದಲ್ಲಿ ಕೆಲ ಸಂದರ್ಭಗಳಲ್ಲಿ ನಮ್ಮ ನಿರ್ಧಾರಗಳು ಏರುಪೇರಾದರು ಸರಿಪಡಿಸಬಹುದು. ಆದರೆ, ಜೀವ ಉಳಿಸುವ ವೈದ್ಯರ ನಿರ್ಧಾರ ತಪ್ಪಾದರೆ ಒಂದು ಜೀವವೇ ಹೋಗುವ ಸಂಭವವಿರುತ್ತದೆ. ಹಾಗಾಗಿ ವೈದ್ಯರು ಯಾವುದೇ ಸಮಯದಲ್ಲಿ ಗೊಂದಲಕ್ಕೆ ಒಳಗಾಗದೇ ಎಚ್ಚರದಿಂದ ಇರಬೇಕು. ಸರ್ಕಾರಿ ಆಸ್ಪತ್ರೆಗಳು ಖಾಸಗಿ ಆಸ್ಪತ್ರೆಗಳಿಗಿಂತ ಉತ್ತಮ ವೈದ್ಯಕೀಯ ಸೇವೆ ನೀಡಬೇಕಿದೆ ಎಂದರು.

ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಶುಶ್ರೂಷಕರ ಕೊರತೆಯಿಂದ ನಿತ್ಯ ಒತ್ತಡದಲ್ಲಿ ಕೆಲಸ ನಿರ್ವಹಿಸುವ ಜವಾಬ್ದಾರಿ ವೈದ್ಯರಿಗಿದೆ. ಯಾವುದೇ ಕ್ಷಣದಲ್ಲಿ ಎದುರಾಗುವ ಸವಾಲುಗಳನ್ನು ಮೆಟ್ಟಿನಿಂತು ವೈದ್ಯರು ಕರ್ತವ್ಯ ನಿರ್ವಹಿಸಬೇಕಾದ ಅನಿವಾರ್ಯತೆ ಇದೆ. ಜೀವ ಉಳಿಸುವ ಕಾಯಕದಲ್ಲಿ ವೈದ್ಯರ ಜವಾಬ್ದಾರಿ ಮಹತ್ವದಾಗಿದ್ದು, ಸಮಾಜಕ್ಕೆ ವೈದ್ಯರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರವಲ್ಲದೇ ಅರಣ್ಯ ಪ್ರದೇಶದಲ್ಲಿ ವಾಸಿಸುವ ಆದಿವಾಸಿಗಳಿಗೆ ಮೂಲಸೌಲಭ್ಯಕ್ಕೆ ಆದ್ಯತೆ ನೀಡಲಾಗಿದೆ. ಕಾಡಂಚಿನ ಭಾಗದ ರಾಮಾಪುರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲಾಗಿದ್ದು, ಡಯಾಲಿಸಿಸ್ ಕೇಂದ್ರವನ್ನು ಕೂಡ ತೆರೆಯಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉತ್ತಮ ವೈದ್ಯಕೀಯ ಸೇವೆ ಒದಗಿಸಲು ಎಲ್ಲಾ ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿನ ಮುಖ್ಯಸ್ಥೆ ಡಾ.ಅರುಣಾ ಸಿ.ರಮೇಶ್, ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಹಾಗೂ ನಿರ್ದೇಶಕ ಡಾ.ಮಂಜುನಾಥ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಗಿರೀಶ್ ವಿ.ಪಾಟೀಲ್, ಡಾ.ಕೆ.ವಿ.ಅಭಿಷೇಕ್, ಡಾ.ಬಾಲಸುಬ್ರಹ್ಮಣ್ಯ, ಡಾ.ಮಾರುತಿ, ಡಾ.ವಾಸೀಂ, ಡಾ.ಉದಯಕುಮಾರ್ ಇದ್ದರು.

ಸೆ.23ರಿಂದ ಪಾರ್ವತಾಂಬೆ ಜಾತ್ರೆ

ಬೇಗೂರು, ಸೆ.20–ಸಮೀಪದ ನಿಟ್ರೆ ಗ್ರಾಮದ ಅಲ್ಲಹಳ್ಳಿ ಮಾರಮ್ಮ ಪಾರ್ವತಾಂಬೆ ಜಾತ್ರಾ ಮಹೋತ್ಸವ ಸೆ.23 ರಿಂದ 25ರವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ವಾದ್ಯ ಮೇಳ, ನಂದಿ ಕಂಬ, ಛತ್ರಿ, ಚಾಮರ, ತಮಟೆ, ಡೋಳು ಕುಣಿತ, ನಗಾರಿ, ಬಿರುದು, ವಿದ್ಯುತ್ ದೀಪ ಮತ್ತು ಸೇವಂತಿಗೆ ಹೂವಿನ ಅಲಂಕೃತ ರಥೋತ್ಸವ ನಡೆಸಲಾಗುವುದು.

ಸೆ.23ರಂದು ಗ್ರಾಮದ ದೇಶಪುರ ಅರಣ್ಯ ಪ್ರದೇಶದ ಮೂಲ ದೇವತೆ ಶ್ರೀ ಪಾರ್ವತಾಂಬೆಗೆ ಪೂಜೆ ಸಲ್ಲಿಸಲಾಗುವುದು. ಸೆ.24ರಂದು ಮಧ್ಯಾಹ್ನ ಗ್ರಾಮದ ಅರಳಿ ಮರದ ಆವರಣದಲ್ಲಿ ತೇರನ್ನು ಎಳೆಯಲಾಗುವುದು.

ಸೆ.25ರಂದು ತೇರು ಸಾಗಿದ ದಾರಿಯಲ್ಲಿ ಮತ್ತೆ ತೇರನ್ನು ಎಳೆಯಲಾಗುವುದು. ಇದೇ ವೇಳೆ ಭಕ್ತರು ಜಾನುವಾರುಗಳನ್ನು ಸಿಂಗರಿಸಿ ಕಾಲ್ನಡಿಗೆಯಲ್ಲಿ ತೇರಿನ ಬಳಿ ತಂದು ಪೂಜೆ ಸಲ್ಲಿಸಿ, ಅಂಕ ದಾಟಿಸಿ ಪಂಜಿನ ಸೇವೆ ನೆರವೇರಿಸಲಿದ್ದಾರೆ.

ಹೊನ್ನಹಳ್ಳಿ ಪಿಎಸಿಎಸ್‌ಗೆ 9.29 ಲಕ್ಷ ಲಾಭಾಂಶ



ಹೊನ್ನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆಯನ್ನು ಅಧ್ಯಕ್ಷ ಪಿ.ವೃಷಭೇಂದ್ರ ಉದ್ಘಾಟಿಸಿದರು.

ಚಾಮರಾಜನಗರ, ಸೆ.20–ತಾಲೂಕಿನ ಹೊನ್ನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನಲ್ಲಿ 9.29 ಲಕ್ಷ ರೂ. ಲಾಭಗಳಿಸಿದೆ ಎಂದು ಸಂಘದ ಅಧ್ಯಕ್ಷ ಪಿ.ವೃಷಭೇಂದ್ರ ಹೇಳಿದರು.

ಸಂಘದ ಕಚೇರಿ ಆವರಣದಲ್ಲಿ ನಡೆದ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, 2.15 ಕೋಟಿ ರೂ. ಬೆಳೆ ಸಾಲ, 77.25 ಲಕ್ಷ ರೂ. ವ್ಯಾಪಾರ ಸಾಲ ನೀಡಲಾಗಿದೆ. ಸಾಲ ಪಡೆದ ರೈತರು ಸಕಾಲದಲ್ಲಿ ಮರು ಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಚಿನ್ನದ ಸಾಲ: ಸಂಘದ ಸುಸಜ್ಜಿತ ಕಟ್ಟಡ ನಿರ್ಮಾಣದ ಗುರಿಹೊಂದಲಾಗಿದ್ದು, ಈಗಾಗಲೇ 20 ಗುಂಟೆ ಜಾಗಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಕಡಿಮೆ ಬಡ್ಡಿಯಲ್ಲಿ ಚಿನ್ನದ ಸಾಲ ಸೌಲಭ್ಯ ಒದಗಿಸಲು ಚಿಂತಿಸಲಾಗಿದೆ. ರಸಗೊಬ್ಬರ ಮಾರಾಟ ಮಾಡಲಾಗುವುದು. ವಾಹನ ಸಾಲ ನೀಡಲಾಗಿದ್ದು, ಸಂಘದ ಪ್ರಾರಂಭವಾದಾಗಿನಿಂದಲೂ ಲಾಭದತ್ತ ಸಾಗುತ್ತಿದ್ದು, ಉತ್ತಮ ಸಂಘವಾಗಿ ಹೊರಹೊಮ್ಮುತ್ತಿದೆ ಎಂದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಪ್ರಭು, ನಿರ್ದೇಶಕರಾದ ಎಲ್.ಪ್ರಕಾಶ್, ಶೇಖರಪ್ಪ, ದೊಡ್ಡಪ್ಪ, ಚಿಕ್ಕಕೂಸಯ್ಯ, ಬಸವಣ್ಣ, ರತ್ನಮ್ಮ, ಗಾಯತ್ರಿ ಮಹದೇವಸ್ವಾಮಿ, ಮುಖ್ಯಕಾರ್ಯ ನಿರ್ವಹಣಾಧಿಕಾರಿ ಮಹೇಶ್, ಗ್ರಾಪಂ ಅಧ್ಯಕ್ಷ ರವಿಕುಮಾರ್, ಮಾಜಿ ಅಧ್ಯಕ್ಷ ಮಲ್ಲೇಶ್, ಸಂಘದ ಸದಸ್ಯರು ಭಾಗವಹಿಸಿದ್ದರು.

ಜಾನುವಾರು ಸಾಗಣೆ: ಇಬ್ಬರ ಬಂಧನ

ಚಾಮರಾಜನಗರ, ಸೆ.20– ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ತೆರಕಣಾಂಬಿ ಠಾಣೆ ಪೊಲೀಸರು, 2 ಲಕ್ಷ ರೂ. ಬೆಲೆಬಾಳುವ 6 ಜಾನುವಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಸಿದ್ದರಾಜು ಮತ್ತು ಗೋವಿಂದ ಬಂಧಿತ ಆರೋಪಿಗಳು. ಈ ಇಬ್ಬರು ಗುರುವಾರ ಗುಂಡ್ಲುಪೇಟೆ ತಾಲೂಕಿನ ಕಡತಾಳಕಟ್ಟೆಹುಂಡಿ ಗ್ರಾಮದ ಕಾಲುದಾರಿಯಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ಸಾಗುಸುತ್ತಿದ್ದರು. ಈ ವೇಳೆ ದಾಳಿ ನಡೆಸಿದ ತೆರಕಣಾಂಬಿ ಪೊಲೀಸ್ ಠಾಣೆ ಪಿಎಸ್‌ಐ ಮಹೇಶ್ ಹಾಗೂ ಇಬ್ಬಂದಿ ಇಬ್ಬರನ್ನು ಬಂಧಿಸಿ, ಜಾನುವಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–
2496522/23

ಸೈಟು ಮಾರಾಟಕ್ಕಿದೆ
30X40 ದಕ್ಷಿಣ ದಿಕ್ಕು
ಅನಂತ ಶ್ರೀ ನಗರ
ಸಿ ಎನ್ ಎಂ ಪಬ್ಲಿಕ್ ಸ್ಕೂಲ್ ಎದುರು, ಬೆಟ್ಟದ ಬೀಡು. ಎಚ್ ಡಿ ಕೋಟೆ ರಸ್ತೆ.
9980716155

Wanted
Female graduates for pre-school in bogadi. Contact
93806 39604
Guruprasad A
9945657636

ಲಾವಣ್ಯ ವಧು–ವರರ ಮಾಹಿತಿ ಕೇಂದ್ರ
BA, BSc, B.Com, MA, MSc, MBA, MCA, Doctor, Engineers MBBS, Engg.
2nd Marriage Also
91647-43059

ಕೆಲಸಕ್ಕೆ ಬೇಕಾಗಿದ್ದಾರೆ
ಕಾರ್ ವಾಷ್ ಮಾಡಲು,
14 ಸಾವಿರ ಸಂಬಳ,
ಮೈಸೂರು
9731648232

Part time and full time
work opportunity
for **DELIVERY BOYS**
Must have a two wheeler preference to electric vehicles
Contact: 9901364556

MUDA APPROVED SITE FOR SALE
Suvarna Layout, ready to construction, good location Martikyathanalli, 30x40, Site no. 333, South face
Contact: 8951144240

ಬೇಕಾಗಿದ್ದಾರೆ
ಬುಗತಹಳ್ಳಿ ಬನ್ನೂರು ರಸ್ತೆಯ ರೆಸಾರ್ಟ್‌ನಲ್ಲಿ ಕರ್ತವ್ಯ ನಿರ್ವಹಿಸಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ ಗಳು ಬೇಕಾಗಿದ್ದಾರೆ. 9 ಗಂಟೆ ಕೆಲಸ, ವಾರದ ರಜೆ.
ESI/PF ಎಲ್ಲಾ ಸೇರಿ ಸಂಬಳ 19.500/– ದೊಂದಿಗೆ ಊಟ ಹಾಗು ರೂಮ್ ವ್ಯವಸ್ಥೆ ಇರುತ್ತದೆ. ಮಾಹಿತಿಗಾಗಿ ಸಂಪರ್ಕಿಸಿ.
9900212487

JOB OPPORTUNITY
ಗೌರವದ ವೃತ್ತಿಯನ್ನು ಹೊಂದಲು ಇದಕ್ಕಿಂತ ಉತ್ತಮ ಅವಕಾಶ ದೊರಕದು.
1) Unlimited Income
2) Flexible Working Hours
3) Rewards & Recognition
ಉತ್ತಮವಾದ ಕಂಪನಿಯೊಂದಿಗೆ ನಿಮ್ಮನ್ನು ಗುರುತಿಸಿಕೊಳ್ಳಿ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
Mob: 9880881408

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವರುಣ/ ವಾಜಮಂಗಲ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ T. ನರಸೀಪುರ ರಸ್ತೆ / ಬನ್ನೂರು ರಸ್ತೆ, ನಂಜನಗೂಡು ರಸ್ತೆ. ಸಂಪರ್ಕಿಸಿ:
Mob: 9686071750

3 BHK HOUSE FOR SALE
North Facing
13 Squares 50 Mtrs from Ring Road, Near Police Layout
Lalithadripura
98800 65122
98459 84587

30x60 West Face SITE for SALE SHIVAMOGGA
@ Prime Location
Ranganatha Badavane, Gopala Shivamogga.
(Behind Vidhatri Bhavan)
9845017569, 9845114560

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

TNI TECHNOLOGIES
DR. RAJKUMAR ROAD, Teachers Layout
BANK COLONY ROAD, BOGADI
JOB IT and Non IT
- PUC — BE (IT and Non IT)
- BA/BBA — BCA, MCA
- BCOM, BSc — MCOM, MBA

*conditions apply
JOB IT and Non IT
8951208347

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

WANTED
SALES BOYS
to work in a Sports Store
Full Time: 10am to 7pm
Part Time: 5pm to 9.30pm
Mysore. Contact:
8105368325/7760109047

HOUSE FOR SALE
20x40, North West Corner
2 BHK & 3 BHK, 3 Floor
Kaveri Layout, near Roopa Nagar, Mysore. Contact:
9886245930 / 9620302755

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
7411565140, 7892046990

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ಹೆಲ್ಪರ್ ಹಾಗೂ ಸೇಲ್ಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ **15000/-**
Ph.7406 369 369

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
ನಂ. 203, ಬನ್ನಿಮಂಟಪ ಬಡಾವಣೆ, ಮೈಸೂರು–570015
8088887802

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: ITI, Dploma, 8th to 2nd PUC ವರೆಗೆ. ಊಟ ವಸತಿ ESI PF ಮತ್ತು ವಾಹನ ಸೌಲಭ್ಯ ಇರುತ್ತದೆ ಸಂಬಳ: 11500 ರಿಂದ 18000 ಇರುತ್ತದೆ
Ph- 8951869646 9902645646

ಸೈಟು ಮಾರಾಟಕ್ಕಿದೆ
30x23 ದಕ್ಷಿಣ ದಿಕ್ಕು,
DTCP Approved, Panchayti Khata
ಯಶ್ ಮೆಗಾ ಸಿಟಿ
NH 275, ಮೈಸೂರು– ಮಡಿಕೇರಿ ಹೈವೆ, ಹುಣಸೂರು ಮುಖ್ಯ ರಸ್ತೆ, Rs. 9 Lakhs (Negotiable)
9448958332

ಸೈಟ್ ಮಾರಾಟಕ್ಕಿದೆ
30x50 S/F, 23x55 W/F
ನಗರಸಭೆ ಖಾತೆ ಫಾರಂ ನಂಬರ್ (3)
9 & 11A ಖಾತೆ. RMPR ಬಡಾವಣೆ
ಚಾಮುಂಡೇಶ್ವರಿನಗರ,
ನಿಯರ್ ವಿನಾಯಕ ಲೇಔಟ್
Mob: 9620563026

ಸೈಟ್ ಮಾರಾಟಕ್ಕೆ ಇದೆ
30x50, East Face,
Yesh Developers ಪಕ್ಕ,
ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರಸ್ತೆ,
ಗುಂಗ್ರಾಲ್ ಛತ್ರ Main Road
ಬೆಲೆ: 2500 Sqft.,
Mob: 9448946352

SK Construction
ಹೊಸ ಮನೆ ಕಟ್ಟಬೇಕೆ, ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿಕೊಡಿತ್ತೇವೆ.
Mob: 9620528490

WANTED
ಟೆಕ್ನಿಷಿಯನ್ಸ್ & ಹೆಲ್ಪರ್ಸ್ ಹುಡುಗರು
ಹೊಸಬರಿಗೆ ಆದ್ಯತೆ
ವಯಸ್ಸು 18–25 ವರ್ಷ
ದ್ವಿಚಕ್ರ ವಾಹನ ಹೊಂದಿರಬೇಕು
ಸರಸ್ವತಿಪುರಂ, ಮೈಸೂರು
98808 28999

40x60 ಸೈಟ್ ಆದಿತ್ಯ ಸರ್ಕಲ್ ಹತ್ತಿರ, ದಟ್ಟಗಳ್ಳಿ 30x40 ಡ್ಯೂಪ್ಲೆಕ್ಸ್ ಹೊಸ ಮನೆ 4 Bed Floor ಆಲ್ ಟೀಕ್ ಇಂಟೀರಿಯರ್ ಕಿಚನ್ ವಾಸ್ತು ಪ್ರಕಾರವಾಗಿರುವ ಮನೆ ಶಾರದಾ ಪಬ್ಲಿಕ್ ಸ್ಕೂಲ್ ಹತ್ತಿರ 20x30 ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್ ಮನೆ ದಟ್ಟಗಳ್ಳಿ– 55 ಲಕ್ಷ
9945842875

ಮಾರುವವರು ಕೊಳ್ಳುವವರು
15X30, 18X40, 20X30 ಕುವೆಂಪುನಗರ
20X45 ಶಾರದಾದೇವಿನಗರ
30X40 ಶ್ರೀರಾಂಪುರ. 40X60 ಹಳೆ ಮನೆ ಹೊಸ ಮನೆ ಸೈಟ್ ಮಾರುವವರು ಕೊಳ್ಳುವವರು
ಸಂಪರ್ಕಿಸಿ: **8618495118**

HOUSE/SITE/SALE
50X80 Site Vijayanagar
4th Stage & 3rd Stage
40x60 Site Vijayanagar
3rd Stage North Face
40x60 Site @ KHB Hotaglli Near Hunsur Main Road,
30x40 House@R.R. Nagar N/F 3BHK
30x40 House @ 3rd Stage W/F 3BHK
20x30 House @ opp Park
@ Vijayanagar East Face
9844056971

28x40 ಕಾರ್ನರ್
DTCP 'A' ಖಾತೆ
(Rera Approved)
ಸೈಟು ಮಾರಾಟಕ್ಕಿದೆ
15 ಲಕ್ಷದ 60 ಸಾವಿರಗಳು
GSS ಲೇಔಟ್ TVS ಫ್ಯಾಕ್ಟರಿ ಹತ್ತಿರ ಮೈಸೂರು
9972557534

ಬೇಕಾಗಿದ್ದಾರೆ
ಗೋಲ್ಡ್ ಕಂಪನಿಯಲ್ಲಿ ಟೆಲಿಕಾಲಿಂಗ್ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ, ಆಕರ್ಷಿಕ ಸಂಬಳ ಜೊತೆಗೆ ಇನ್‌ಸೆಂಟೀವ್ ಇರುತ್ತದೆ.
9538161619

ಆನ್‌ಲೈನ್ ರಿಜಿಸ್ಟ್ರೇಷನ್ ಸರ್ವೀಸ್
ಮೈಸೂರು ಜಿಲ್ಲೆಯ ಯಾವುದೇ ಸ್ಥಳದ ಮನೆ, ಸೈಟು, ಜಮೀನು ಮತ್ತು ಮ್ಯಾರೇಜ್ ರಿಜಿಸ್ಟ್ರೇಷನ್ ಸರ್ವೀಸ್ ದೊರೆಯುತ್ತದೆ. ಈ ಮೇಲ್ಕಂಡ ಸೇವೆಗಳ ಡಾಕ್ಯುಮೆಂಟ್ ಟೈಪಿಂಗ್ ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರುವ 25 ವರ್ಷ ಒಳಗಿರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ರಾಮಸ್ವಾಮಿ ಸರ್ಕಲ್ ಹತ್ತಿರ, ಗೀತಾ ರಸ್ತೆ, ಮೈಸೂರು. ಸಂಪರ್ಕಿಸಿ:
7676538135

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
9886654463

MUDA SITE FOR SALE
ವಿಜಯನಗರ 4ನೇ ಹಂತ ಪಕ್ಕದ "ಯುರೇಖ ಎನ್‌ಕ್ಲೇವ್" ನಲ್ಲಿ
30'×40' North Facing
ಸೈಟ್.ಬೆಲೆ : 55 ಲಕ್ಷ
9886048471

MUDA APPROVED SITES FOR SALE
ಗದ್ದಿಗೆ ರಸ್ತೆಯಲ್ಲಿರುವ ಸಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವಂತಹ ಸುವರ್ಣನಗರ ಬಡಾವಣೆಯ ಪಕ್ಕದಲ್ಲಿರುವಂತಹ "ಸಾನ್ವಿ" ಬಡಾವಣೆಯಲ್ಲಿ 30x40, 30x43 ಅಳತೆಯ ಸೈಟುಗಳು ಮಾರಾಟಕ್ಕಿವೆ. ಬೆಲೆ: 23 ಲಕ್ಷ ನೆಗೋಷಿಯೇಬಲ್
ಸಂಪರ್ಕಿಸಿ: **9483862050**
7829779070 / 7892846068

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನೆ ದೇವಿ ಆರಾಧಕರು
ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಮಾರಾಟಕ್ಕಿದೆ
ತೀರ್ಥಹಳ್ಳಿಯ "ನಾಟಿ ಅಡಿಕೆ ಸಸಿ ತಳಿಗಳು" ಹೋಲ್ ಸೇಲ್ ದರದಲ್ಲಿ ಮಾರಾಟಕ್ಕಿವೆ.
ಆಸಕ್ತರು ಸಂಪರ್ಕಿಸಿ
94483 91010

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

20X30 & 30X40 ಹೊಸ ಮನೆ ಕಟ್ಟಿ ಕೊಡಲಾಗುವುದು ಕೇವಲ ರೂ.40 ಲಕ್ಷ ಮತ್ತು 30x40 - ರೂ.70 ಲಕ್ಷ ಮೂಡಾ ಅನುಮೋದಿತ ಸೈಟ್ ಸಹಿತ, ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಹತ್ತಿರ, ಹುಣಸೂರು ರಸ್ತೆ, ಬೆಳವಾಡಿ, ಮೈಸೂರು.
ಸಂಪರ್ಕಿಸಿ - ಇಂಜಿನಿಯರ್
9986675044



@ FACTORY DEPOT RATES
✆9731591267, 9901291267

MUDA SITE FOR SALE
@ KBL SILICON CITY
30×40/East Face/ 50 Lakhs
40×60/South Face/ 78 Lakhs
9886048471

MUDA SITE FOR SALE
ರಾಮಕೃಷ್ಣನಗರ ಸುಯೋಗ್ ಆಸ್ಪತ್ರೆಯ ರಸ್ತೆಯಲ್ಲಿ 30'×73' ಅಳತೆಯ EAST Facing ಸೈಟ್
ಬೆಲೆ - 11000/- Per Sqft
9886048471

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596



SUNZONE SOLAR SYSTEM
Vishwamanava Double Road, Kuvempunagar, Mysuru
9845175443

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
6364079244

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

ತಕ್ಷಣ ಬೇಕಾಗಿದ್ದಾರೆ
ಮೈಸೂರು KSRTC ಬಸ್ ಸ್ಟ್ಯಾಂಡ್ ಅಶೋಕ ರಸ್ತೆ ಸಮೀಪ ಸಣ್ಣ ಕುಟುಂಬಕ್ಕೆ ಅಡುಗೆ ಕೆಲಸ ಮನೆ ಕೆಲಸಕ್ಕೆ ಮಹಿಳೆ ತಕ್ಷಣ ಬೇಕಾಗಿದ್ದಾರೆ. ಉಳಿದುಕೊಳ್ಳುವವರಿಗೆ ಆದ್ಯತೆ. ವಯೋಮಿತಿ 40 ವರ್ಷ.
7349480337

ಸುವರ್ಣಾವಕಾಶ
ಕಾಲೇಜು ವಿದ್ಯಾರ್ಥಿಗಳು, ನಿರುದ್ಯೋಗಿಗಳು, ಗೃಹಿಣಿಯರು, ನಿವೃತ್ತರು, ಉದ್ಯೋಗಿಗಳು , ವ್ಯಾಪಾರಿಗಳು. ಇನ್ನಿತರೇ ವೃತ್ತಿಯಲ್ಲಿ ಇರುವವರು ತಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 10 ರಿಂದ 50 ಸಾವಿರ ಸಂಪಾದಿಸುವ ಸುವರ್ಣಾವಕಾಶ/ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
7353430309
9844915554

ಇಂದೇ ಸಂಪರ್ಕಿಸಿ
ಮೈಸೂರಿನ (ಪ್ರತಿಷ್ಠಿತ ಕಂಪನಿಗೆ/ಶೋರೂಂ ಗಳಿಗೆ ಮತ್ತು ಆಫೀಸ್ ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ,
Any Qualification: 7th,10th, PUC, ITI any Degree Pass/Fail ಆದವರಿಗೆ)
ಅರ್ಹತೆಗೆತಕ್ಕಂತೆ ಕೆಲಸ. ಸಂಬಳ: 15000 –45000 ESI,PF,OT
9164052361/ 9740468212

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ
ಸೌತ್ ಇಂಡಿಯನ್ ಭಟ್ಟರು–1, ದೋಸೆಭಟ್ಟರು–1, ಕ್ಯಾಪ್ಟನ್–1, ವೆಯಿಟರ್–4, ಕ್ಯಾಷಿಯರ್–1, ಕಿಚನ್ ಸೂಪರ್‌ವೈಸರ್–2, ಸ್ಟೋರ್ ಮ್ಯಾನೇಜರ್–1, ರೆಸ್ಟೋರೆಂಟ್ ಮ್ಯಾನೇಜರ್–1, ಅಕೌಂಟೆಂಟ್–1
7899929233

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಶೋರೂಮ್‌ಗಳಿಗೆ ಮತ್ತು ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ,ಮೊದಲು ಬಂದವರಿಗೆ ಮೊದಲ ಆದ್ಯತೆ. ಯಾವುದೇ ಎಜುಕೇಶನ್ ಇರಬಹುದು, AGE ಲಿಮಿಟ್ 18 TO 55, SALARY 18000 TO 38000 ಇರುತ್ತದೆ , ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ, HR MADAM,
7899491102
9902230976

MUDA APPROVED
30X40 S/E ಕಾರ್ನರ್ ಸೈಟು @Rs. 27 ಲಕ್ಷ
40x40 S/E ಕಾರ್ನರ್ ಸೈಟು @ Rs 42 ಲಕ್ಷ
LBS ನಗರದ ನಂತರ ಚಾಮುಂಡಿಬೆಟ್ಟದ ಹಿಂಭಾಗ
9538583377

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸಂಸ್ಥೆಗೆ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳು, ಅನುಭವಿ HR ಮ್ಯಾನೇಜರ್ ಹಾಗೂ ಟೆಲಿಕಾಲರ್‌ಗಳು ಬೇಕಾಗಿದ್ದಾರೆ. ಪದವಿ ಹಾಗೂ ಉತ್ತಮ ಸಂವಹನ ಕೌಶಲ್ಯ ಅಗತ್ಯ
0821-2541100

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಕ್ಯಾಷಿಯರ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ : ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು
6364748485

JOB OPENING for Female (Day Shift)
Paid Internship Work for Engineers & other Degree.
1. Telecalling, 2 Data Operator
Salary upto 15000 plus incentives.
Location:
Hebbal 1st Stage, Mysore.
Mob:7338224174

WANTED
TATA Ace & Jeeto Van for rent in Mysore
8310381391
9716666067

MUDA APPROVED
ಟೆಲಿಕಾಂ ಲೇಔಟ್
40x40 S/E ಕಾರ್ನರ್ ಸೈಟು @ Rs. 60 ಲಕ್ಷ
ಆಚಾರ್ಯ ವಿದ್ಯಾಕುಲ ಶಾಲೆ ಹಿಂಭಾಗ, ಹುಣಸೂರು ರೋಡ್, ಇಲವಾಲ
9538583377

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್‌ಗಳು – 10 ಮಂದಿ
ಸ್ಥಳ: ಕುವೆಂಪುನಗರ 2) ಪಡುವಾರಹಳ್ಳಿ
3) ವಿನೋಬ ರಸ್ತೆ 4) ಸರಸ್ವತಿಪುರಂ
5) ಪಂಪ್‌ಹೌಸ್ 6) ಹೆಬ್ಬಾಳ್
2) ಹೌಸ್ ಕೀಪರ್
ರಾತ್ರಿ ಹಾಳಿಗೆ ಸ್ಥಳ : ದಟ್ಟಗಳ್ಳಿ
9686422400
9242406261

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
9945911118
9945144034,7026996123
ARTHOR SERVICES PVT. LTD.
No.L-89, 2nd Floor,
M.Block, Opp. Karuna Hospital,
Kuvempunagar, Mysore-570023

ಬೇಕಾಗಿದ್ದಾರೆ
ಗೂಡ್ಸ್ ವಾಹನಕ್ಕೆ ಡ್ರೈವರ್ ಮತ್ತು ಸಹಾಯಕರು ಬೇಕಾಗಿದ್ದಾರೆ.
ಸಂಬಳ 15000 ವಸತಿ ಉಚಿತ, ಭತ್ಯೆ ಪ್ರತ್ಯೇಕ
8884179981

ಮನೆ ಬಾಡಿಗೆಗೆ ಇದೆ
ರಾಜಶೇಖರ್ ಆಸ್ಪತ್ರೆ ಹಿಂಭಾಗ ಮನೆ ನಂ.172, ರಾಗಿಮಿಲ್ 2ನೇ ಅಡ್ಡ ರಸ್ತೆ, ಮೊದಲನೇ ಮಹಡಿ, 3 ಬೆಡ್ ರೂಂ, ಹಾಲ್, ಅಡುಗೆ ಮನೆ, ಊಟದ ಹಾಲ್, ದೇವರ ಮನೆ, ಸ್ನಾನದ ಮನೆ ಸೋಲಾರ್, ಗೀಸರ್, ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

ವಾರ್ಷಿಕ ಮಹಾಸಭೆ
ಪದಕಿ ಸೌಹಾರ್ದ ಕ್ರೆಡಿಟ್ ಕೊ-ಆಪರೇಟಿವ್ ನಿಯಮಿತ
2023–24ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 22–09–2024ನೇ ಭಾನುವಾರ ಬೆಳಗ್ಗೆ 12.00 ಗಂಟೆಗೆ "ಹೋಟೆಲ್ ಹರಿಗೋವಿಂದಾಸ್" ನಂ 822/ಎ, ವಾಣಿ ವಿಲಾಸ ರಸ್ತೆ, ಒಡ್ಡಪ್ಪ ವೃತ್ತ, ಚಾಮರಾಜ ಮೊಹಲ್ಲಾ, ಲಕ್ಷ್ಮೀಪುರಂ, ಮೈಸೂರು–570004 ಇಲ್ಲಿ ನಡೆಯಲ್ಲಿದ್ದು, ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ದೂರವಾಣಿ ಸಂಖ್ಯೆ: 0821-2524154
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ ಸಹಿ/-ಅಧ್ಯಕ್ಷರು

2 BHK 3 BATHROOM, FURNISHED, ITALIAN KITCHEN, INDEPENDENT HOUSE FOR LEASE
(15,000,00) @ HPO & RMS LAYOUT, SHAKTHINAGAR, MYSORE.
Contact: 9448536782
VEGETARIAN ONLY
(Broker Excuse)

ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸ ಉಳಿದ ಹಣವನ್ನು ತಕ್ಷಣ ಕೊಡುತ್ತೇವೆ
ಒಂದು ಗ್ರಾಂ ಚಿನ್ನಕ್ಕೆ : 7100 (24 Ct)
9108146123

ಭದ್ರತಾ ಸಿಬ್ಬಂದಿಗಳು ತಕ್ಷಣ ಬೇಕಾಗಿದ್ದರೆ
ಮೈಸೂರಿನ ಕೊಲಂಬಿಯಾ ಆಸ್ಪತ್ರೆಯಿಂದ ನಗುವಿನ ಹಳ್ಳಿಗೇಟ್ ಒಳಗಡೆ ಕರ್ತವ್ಯ ನಿರ್ವಹಿಸಲು ಸಂಬಳ ರೂ.15000 ಹಾಗೂ ESI & PF ವಾಸದ ಮನೆ ಸೌಲಭ್ಯವಿದೆ.
8861871926

Life Partner ಆಗಲು Govt. Job ವರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ
ಜಾತಿ ಒಕ್ಕಲಿಗ ಗೌಡ, Age: 44/5.6 BE, Govt. Engineer, well settled ಇರುವಂತಹ ವಿಚ್ಛೇದಿತ ವರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ 2ನೇ ಸಂಬಂಧಕ್ಕೆ ನೌಕರಸ್ಥ /ವಿಧವೆ/ವಿಚ್ಛೇಧಿತೆ ಬಡವೆ ವಧು ಮಕ್ಕಳಿದ್ದರೂ ತೊಂದರೆ ಇಲ್ಲ. ವಧು ಬೇಕಾಗಿದ್ದಾರೆ. (ಶೀಘ್ರ ಹಾಗೂ ಸರಳ ವಿವಾಹಕ್ಕೆ ಆದ್ಯತೆ)
ಮೈಸೂರು: **9742458242 9480385742**

FOR SALE
North West Corner
2716 Sqft., Site for sale
(BMICAPA Approved)
Shooting Mahadevapura Road
Price: 1400/- (Nego)
Mob: 7411877778

Plasmotec Automotive Pvt. Ltd.,
REQUIRED
Role: **NAPS Trainee**
Quali: ITI, Diploma, Mech, EEE, ECE,
Department: Machine Operators,
Salary: 17,000/- 8Hrs, 23,000/- 12 Hrs,
Age: 18-26 Yrs, Gender: Male,
Location: Mysore.
Call: 6366246793

ಬೇಕಾಗಿದ್ದಾರೆ
ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಕೂಡಲೇ ಬೇಕಾಗಿದ್ದಾರೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಉತ್ತಮ ವೇತನ ಹಾಗೂ ESI, PF Bonus ಮತ್ತು ಉಚಿತ ಕ್ಯಾಂಟೀನ್ ಸೌಕರ್ಯ ಇರುತ್ತದೆ. ಆಸಕ್ತಿವುಳ್ಳ ಅಭ್ಯರ್ಥಿಗಳು ಕೆಳಕಂಡ Ph ನಂಬರ್ ಅನ್ನು ಸಂಪರ್ಕಿಸಿ
6364857753/ 6364857751
9900260431

ಕೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ
ಕೈಗಾರಿಕಾ ಮಳಿಗೆ ಬಾಡಿಗೆ /ಭೋಗ್ಯ /ಮಾರಾಟಕ್ಕೆ
600 Sqft., ನಲ್ಲಿ 2 ಶೆಡ್‌ಗಳು ಇದ್ದು 10+2 HP ವಿದ್ಯುಚ್ಛಕ್ತಿ ಇರುತ್ತದೆ. ಬಾಡಿಗೆ / ಭೋಗ್ಯ / ಮಾರಾಟಕ್ಕೆ ಇದೆ.
ಸಂಪರ್ಕಿಸಿ: **9480166629**

ಕೌಶಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ಸರ್ವೆ ನಂ. 68/2, ಕಳೂರು ಗ್ರಾಮ, ಜಯಪುರ ಹೋ. ಮೈಸೂರು ತಾ. ಮೈಸೂರು
13 ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಸೂಚನಾಪತ್ರ
ದಿನಾಂಕ 22–09–2024, ಬೆಳಗ್ಗೆ 10.30 ಗಂಟೆಗೆ
ಸ್ಥಳ: ಬಡಾವಣೆಯ ಪಕ್ಕೀರ ಅವರಣ
ಅಧ್ಯಕ್ಷತೆ: ಕೆ.ನಾಗೇಂದ್ರ
ಆಡಳಿತ ಮಂಡಳಿಯ ಪರವಾಗಿ ಸಹಿ/–ಕಾರ್ಯದರ್ಶಿ

ಬೇಕಾಗಿದ್ದಾರೆ
Xerox ಅಂಗಡಿಯಲ್ಲಿ ಕೆಲಸ ಮಾಡಲು Computer knowledge ಇರುವ Online Application ಭರ್ತಿ ಮಾಡಲು ಬರುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
9972258425

ವಾರ್ಷಿಕ ಮಹಾಸಭೆ
ಪದಕಿ ಗೃಹ ನಿರ್ಮಾಣ ಸಹಕಾರ ಸಂಘ (ನಿ)
2023–24ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 22–09–2024ನೇ ಭಾನುವಾರ ಬೆಳಗ್ಗೆ 10.30 ಗಂಟೆಗೆ "ಹೋಟೆಲ್ ಹರಿಗೋವಿಂದಾಸ್" ನಂ 822/ಎ, ವಾಣಿ ವಿಲಾಸ ರಸ್ತೆ, ಒಡ್ಡಪ್ಪ ವೃತ್ತ, ಚಾಮರಾಜ ಮೊಹಲ್ಲಾ, ಲಕ್ಷ್ಮೀಪುರಂ, ಮೈಸೂರು–570004 ಇಲ್ಲಿ ನಡೆಯಲ್ಲಿದ್ದು, ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ದೂರವಾಣಿ ಸಂಖ್ಯೆ: 0821-2430991
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ ಸಹಿ/-ಅಧ್ಯಕ್ಷರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೋದಿ ಹುಟ್ಟುಹಬ್ಬ ಅಂಗವಾಗಿ ರಕ್ತದಾನ ಶಿಬಿರ

ಪ್ರಧಾನಿ ಮೋದಿ ದೇಶದ ಆಸ್ತಿ: ಎಲ್.ಆರ್.ಮಹದೇವಸ್ವಾಮಿ



ಮೋದಿ ಹುಟ್ಟುಹಬ್ಬ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.

ನಂಜನಗೂಡು, ಸೆ.20– ದೇಶದ ಅಭ್ಯುದಯಕ್ಕಾಗಿ ದಿನದ 18 ಗಂಟೆ ಶ್ರಮಿಸುವ ಪ್ರಧಾನಿ ಮೋದಿ ದೇಶದ ಆಸ್ತಿ. ಅವರ 10 ವರ್ಷಗಳ ಆಡಳಿತಾವಧಿಯಲ್ಲಿ ದೇಶ ವಿಶ್ವ ಮಟ್ಟದಲ್ಲಿ ಮಾನ್ಯತೆ ಗಳಿಸಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ತಿಳಿಸಿದರು.

ವರುಣ ಗ್ರಾಮದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಶುಕ್ರವಾರ ವರುಣ ಬಿಜೆಪಿ ಶಕ್ತಿ ಕೇಂದ್ರದಿಂದ ಮೋದಿಯವರ 74ನೇ ಹುಟ್ಟುಹಬ್ಬದ ಪ್ರಯುಕ್ತ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ರಾಮಮಂದಿರ ನಿರ್ಮಾಣ, ಕಾಶ್ಮೀರದಲ್ಲಿ ಭಯೋತ್ಪಾದನೆ ನಿರ್ಮೂಲನೆ, ತಲಾಖ್ ನಿಷೇಧ ಸೇರಿದಂತೆ ಅನೇಕ ಜನಪರ ಕೆಲಸಗಳಿಂದ ಮೋದಿಯವರು ದೇಶದ ಅತ್ಯಂತ ಜನಪ್ರಿಯ ನಾಯಕರಾಗಿದ್ದಾರೆ. ವಿಶ್ವದ ಮುಂದುವರೆದ ರಾಷ್ಟ್ರಗಳು ಮೋದಿ ಅವರನ್ನು ಹಾಡಿ, ಹೊಗಳಿ ಕೊಂಡಾಡುತ್ತಿವೆ. ಇಂತಹ ನಾಯಕನ ಹುಟ್ಟುಹಬ್ಬ ಆಚರಣೆ ಸಂದರ್ಭ ರಕ್ತದಾನ ಶಿಬಿರ ಏರ್ಪಡಿಸುವ ಮೂಲಕ ಸಮಾಜ ಸೇವಾ ಕಾರ್ಯದಲ್ಲಿ ನಿರತರಾಗಿರುವುದು ಸಂತೋಷ ತಂದಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಂಚಾಲಕ ಮಹದೇವಸ್ವಾಮಿ, ಮುಖಂಡರಾದ ಎ.ಎಂ.ಗುರುಸ್ವಾಮಿ, ಸದಾನಂದ, ಸಿದ್ದಪ್ಪ, ರೈತ ಮೋರ್ಚಾ ಅಧ್ಯಕ್ಷ ಮಹದೇವಸ್ವಾಮಿ, ನಂದೀಶ್, ಚಿಕ್ಕಮಾದಪ್ಪ, ವರುಣ ಶಕ್ತಿ ಕೇಂದ್ರ ಅಧ್ಯಕ್ಷ ಶ್ರೀಧರ್, ಬಾಲರಾಜ್, ಶರತ್ ಪುಟ್ಟಬುದ್ಧಿ, ವೆಂಕಟರಮಣ, ಕುಮಾರ್, ಸಂತೋಷ, ಅಮ್ಜದ್, ಜೆಸಿಬಿ ಪ್ರಕಾಶ್, ಮಧು, ಮಹೇಶ್, ಪುಷ್ಪಲತಾ, ಮಹೇಶ್, ಪುಟ್ಟೇಗೌಡನಹುಂಡಿ ಮಹೇಶ್, ಕೃಷ್ಣ, ಮಹದೇವ್, ಮಂಜು, ಸಂತೋಷ, ಮಹೇಶ್, ಪ್ರಕಾಶ್ ಉಪಸ್ಥಿತರಿದ್ದರು.

ಜ್ಞಾನ ಜ್ಯೋತಿಯಾಗಿ ರಾರಾಜಿಸಿದ ರಾಜೇಂದ್ರ ಶ್ರೀಗಳು

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ ಬಣ್ಣನೆ



ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸರಗೂರು, ಸೆ.20– ವಿದ್ಯಾರ್ಜನೆಗೆ ಹೆಚ್ಚಿನ ಮಹತ್ವ ನೀಡಿ ಜ್ಞಾನ ಜ್ಯೋತಿಯಾಗಿ ರಾರಾಜಿಸಿದವರು ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಎಂದು ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ ಬಣ್ಣಿಸಿದರು.

ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಸಹಯೋಗದೊಂದಿಗೆ ನಡೆದ ರಾಜೇಂದ್ರ ಶ್ರೀಗಳ 109ನೇ ಜಯಂತಿಯಲ್ಲಿ ಮಾತನಾಡಿದ ಅವರು, ನಿರಂತರವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಬಡ ಮಕ್ಕಳಿಗೆ ಶಿಕ್ಷಣ ದೊರಕಿಸಿ ಕೊಡುವಲ್ಲಿ ಮಹತ್ತರ ಪಾತ್ರ ವಹಿಸಿದ ಶ್ರೀಗಳು ಗ್ರಾಮೀಣ ಪ್ರದೇಶಗಳಲ್ಲಿ ಪ್ರಸಾದ ನಿಲಯಗಳನ್ನು ಆರಂಭಿಸಿ ವ್ಯಾಸಂಗ ನಿರತ ಬಡ ವಿದ್ಯಾರ್ಥಿಗಳಿಗೆ ಚೈತನ್ಯ ತುಂಬಿದರು. ಸುತ್ತೂರು ಶ್ರೀಮಠದ ಹೆಸರು ಜ್ಞಾನ ದಾಸೋಹದೊಂದಿಗೆ ರಾಷ್ಟ್ರವ್ಯಾಪಿ ಪಸರಿಸುವಲ್ಲಿ ಮಹತ್ತರ ಪಾತ್ರ ವಹಿಸಿದವರು ರಾಜೇಂದ್ರ ಶ್ರೀಗಳು ಎಂದು ಶ್ಲಾಘಿಸಿದರು.

ತಮ್ಮ ಕಲಾ ಸಾಧನೆಗಾಗಿ ವರನಟ ಡಾ.ರಾಜ್‌ಕುಮಾರ್ ಅವರಲ್ಲದೆ ದೇಶದ ರಾಷ್ಟ್ರಪತಿಯಾಗಿದ್ದ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ವಿಜ್ಞಾನ ಕ್ಷೇತ್ರದ ಮಹಾನ್ ಸಾಧನೆಗಾಗಿ ಖ್ಯಾತಿವಂತರೆನಿಸಿದರು. ಹಾಗೆಯೇ ರಾಜೇಂದ್ರ ಶ್ರೀಗಳು ತಮ್ಮ ಸದ್ದಿಲ್ಲದ ಸೇವೆಯೊಂದಿಗೆ ತುಮಕೂರು ಶ್ರೀಸಿದ್ಧಗಂಗಾ ಶ್ರೀಗಳಿಂದ ಮೌನಕ್ರಾಂತಿಯ ಮಹಿಮರು ಎಂಬ ಪ್ರಶಂಸೆಗೆ ಪಾತ್ರರಾಗಿದ್ದವರು ಎಂದು ತಿಳಿಸಿದರು.

ಸುತ್ತೂರು ಮಠದ ಹೆಸರು ವಿದೇಶಗಳಲ್ಲೂ ವ್ಯಾಪಿಸುವಲ್ಲಿ ಶ್ರಮಿಸಿದ ಶ್ರೀಗಳು ತಮ್ಮ ಅಗಾಧ ಸಮಾಜ ಸೇವೆಯೊಂದಿಗೆ ದಣಿವರಿಯದ ದಣಿಗಳು ಎಂಬ ಅಭಿದಾನಕ್ಕೆ ಪಾತ್ರರಾದರು. ಹಾಗೆಯೇ ಈಗಿನ ಮಠಾಧಿಪತಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ರಾಷ್ಟ್ರ ವ್ಯಾಪ್ತಿಯಲ್ಲದೆ ವಿದೇಶಗಳಲ್ಲೂ ವಿದ್ಯಾಕೇಂದ್ರಗಳನ್ನು ಹಾಗೂ ಧಾರ್ಮಿಕ ಸೇವಾ ಕೇಂದ್ರಗಳನ್ನು ತೆರೆದು ಜ್ಞಾನ, ಕಾಯಕ ಹಾಗೂ ಆರೋಗ್ಯ ದಾಸೋಹ ಕಾರ್ಯವಲ್ಲದೆ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ ಎಂದರು. ಬಡವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವ ಮನೋಭಾವ ಹಾಗೂ ಸಮಾಜೋದ್ಧಾರವನ್ನೇ ಗುರಿಯಾಗಿಸಿಕೊಂಡಿದ್ದ ರಾಜೇಂದ್ರ ಶ್ರೀಗಳು ಮೈಸೂರು ಮಹಾರಾಜರಿಂದ ರಾಜಗುರು ತಿಲಕ ಎಂಬ ಬಿರುದಾಂಕಿತ ಪಡೆದ ಹೆಗ್ಗಳಿಕೆಗೆ ಪಾತ್ರರಾದರು ಎಂದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ ಮಾತನಾಡಿ, ಸಮಾಜದಲ್ಲಿ ಮಹಿಳೆಯರ ಪರ ಧ್ವನಿ ಎತ್ತುವಂತಾಗಬೇಕು. ಮಹಿಳಾ ಸಬಲೀಕರಣದಿಂದ ಕುಟುಂಬ ಹಾಗೂ ಸಮಾಜದ ಏಳ್ಗೆ ಸಾಧ್ಯ. ಸರಗೂರಿನಲ್ಲಿ ತಮ್ಮ ಪತಿ ಡಾ.ಮೃತ್ಯುಂಜಯಪ್ಪ ಮನವಿ ಮೇರೆಗೆ ಸುತ್ತೂರು ಶ್ರೀಮಠದಿಂದ ಶಾಲೆ ತೆರೆಯಲಾಯಿತು. 14 ಮಕ್ಕಳೊಂದಿಗೆ ಆರಂಭವಾದ ಶಾಲೆ ಬೃಹತ್ ಶಿಕ್ಷಣ ಸಂಸ್ಥೆಯಾಗಿ ಬೆಳೆದು ಇಂದು 1600 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಇದೊಂದು ದೊಡ್ಡ ಸಾಧನೆ ಎಂದರು.

ಹಂಚೀಪುರ ಶ್ರೀಸಿದ್ಧಮಲ್ಲೇಶ್ವರ ಪಟ್ಟದ ಮಠದ ಶ್ರೀಚನ್ನಬಸವ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಈ ವೇಳೆ ಎಸ್‌ಎಸ್ ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ದಡದಹಳ್ಳಿ ಶ್ರೀಗುರುಮಲ್ಲೇಶ್ವರ ಪಟ್ಟದ ಮಠದ ಶ್ರೀಷಡಕ್ಷರ ಸ್ವಾಮೀಜಿ ಮಾತನಾಡಿದರು. ಇದಕ್ಕೂ ಮುನ್ನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ರಾಜೇಂದ್ರ ಶ್ರೀಗಳ ಮೂರ್ತಿ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ನಟರಾಜು, ಮಾಜಿ ಅಧ್ಯಕ್ಷ ಡಿ.ಜಿ.ಶಿವರಾಜು, ಕಾರ್ಯಾಧ್ಯಕ್ಷ ಗಿರೀಶ್, ಉಪಾಧ್ಯಕ್ಷ ಎಸ್.ಎನ್. ಮೋಹನ್ ಕುಮಾರ್, ಪ್ರಧಾನ ಕಾರ್ಯದರ್ಶಿ ಗುರುಸ್ವಾಮಿ, ಜೆಎಸ್‌ಎಸ್ ಶಾಲಾ ಮುಖ್ಯೋಪಾಧ್ಯಾಯ ಮಹಮದ್ ಅಂಜುಮ್ ಪಾಷ, ಪ್ರಾಂಶುಪಾಲ ಮಹದೇವಸ್ವಾಮಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗುರುಸ್ವಾಮಿ, ಮುಖಂಡರಾದ ಗಣಪತಿ, ಪ್ರಕಾಶ್, ಶಿವಣ್ಣ, ಶಿವಪ್ಪಾಜಿ, ಶಿವರಾಜಪ್ಪ, ಶಾಂತಮಲ್ಲು, ಬಸವರಾಜು, ಜೈಕುಮಾರ್, ವಿರೂಪಾಕ್ಷ, ಸಮಾಜದ ಬಂಧುಗಳು ಹಾಗೂ ಸ್ನೇಹ ಸ್ತ್ರೀ ಸಮಾಜದ ಸರ್ವ ಸದಸ್ಯರು, ಜೆಎಸ್‌ಎಸ್ ಶಾಲಾ ಶಿಕ್ಷಕರು ಹಾಗೂ ಮಕ್ಕಳು ಇದ್ದರು.

ಚಿರತೆ ದಾಳಿಗೆ ಕರು ಬಲಿ

ಹೆಚ್.ಡಿ.ಕೋಟೆ, ಸೆ.20– ಚಿರತೆ ದಾಳಿಗೆ ಕರು ಬಲಿಯಾಗಿರುವ ಘಟನೆ ಶುಕ್ರವಾರ ಮಧ್ಯಾಹ್ನ ತಾಲೂಕಿನ ಭೋಗೇಶ್ವರ ಕಾಲೋನಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ರೈತ ರಾಮಯ್ಯ ಅವರಿಗೆ ಸೇರಿದ ಕರು ಬಲಿಯಾಗಿರುವುದು. ಗ್ರಾಮದಲ್ಲಿ ಹಲವು ದಿನಗಳಿಂದ ಚಿರತೆ ಓಡಾಡುತ್ತಿತ್ತು ಎನ್ನಲಾಗಿದೆ. ಇಂದು ಮಧ್ಯಾಹ್ನ ರಾಮಯ್ಯನವರು ತಮ್ಮ ಜಮೀನಿನಲ್ಲಿ ಕರುವನ್ನು ಮೇಯಿಸುತ್ತಿದ್ದು, ಊಟಕ್ಕೆಂದು ಕಟ್ಟಿಹಾಕಿ ಮನೆಗೆ ತೆರಳಿದ್ದರು. ಈ ವೇಳೆ ದಾಳಿ ನಡೆಸಿರುವ ಚಿರತೆ ಕರುವನ್ನು ಬಲಿ ಪಡೆದಿದೆ.

ಚಿರತೆ ದಾಳಿಯಿಂದ ಈ ಭಾಗದ ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಅಲ್ಲದೇ ತಮ್ಮ ಜಮೀನುಗಳಲ್ಲಿ ಕೃಷಿ ಮಾಡಲು ಹಾಗೂ ರಾತ್ರಿ ವೇಳೆ ನೀರು ಹಾಯಿಸಲು ಜಮೀನಿಗೆ ತೆರಳಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು. ಅಲ್ಲದೇ ನಷ್ಟಕ್ಕೆ ಒಳಗಾಗಿರುವ ರಾಮಯ್ಯ ಅವರಿಗೆ ಸೂಕ್ತ ಪರಿಹಾರ ಕೊಡಿಸಲು ಮುಂದಾಗಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿದರು. ಆರ್‌ಎಫ್‌ಓ ಪೂಜಾ ಮಾತನಾಡಿ, ಚಿರತೆ ಸೆರೆ ಹಿಡಿಯಲು ಬೋನ್ ಇಡಲಾಗುವುದು. ಅಲ್ಲದೇ ಸೂಕ್ತ ಪರಿಹಾರ ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

ಸಂಘದ ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿಸಿ

ಚಿದರವಳ್ಳಿ ಪಿಎಸಿಎಸ್ ಅಧ್ಯಕ್ಷ ಶಿವಮೂರ್ತಿ ಮನವಿ



ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಆರ್.ಜಿ.ಶಿವಮೂರ್ತಿ ಮಾತನಾಡಿದರು.

ತಿ.ನರಸೀಪುರ, ಸೆ.20– ಸಂಘದ ಸದಸ್ಯರು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಬೇಕು ಎಂದು ತಾಲೂಕಿನ ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಆರ್.ಜಿ. ಶಿವಮೂರ್ತಿ ಮನವಿ ಮಾಡಿದರು.

ಗ್ರಾಮದ ಶ್ರೀಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಶುಕ್ರವಾರ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದಿಂದ ವಿವಿಧೋದ್ದೇಶಗಳಿಗೆ ಸಾಲ ಪಡೆದ ಸಂಘದ ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿಸಿದಲ್ಲಿ ಸಂಘದ ಬೆಳವಣಿಗೆ ಸಾಧ್ಯವಾಗಲಿದೆ. ಹಾಗಾಗಿ ಸಾಲ ಪಡೆದ ರೈತರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿಸಿ ಮತ್ತೆ ಹೆಚ್ಚುವರಿ ಸಾಲ ಪಡೆದು ಸ್ವಾವಲಂಬಿ ಜೀವನ ನಡೆಸುವಂತೆ ಮನವಿ ಮಾಡಿದರು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಾಲ ಪಡೆದ ರೈತರು ಹೆಚ್ಚಿನ ಸುಸ್ತಿದಾರರಾಗಿದ್ದಾರೆ. ಸರ್ಕಾರ ಸಾಲ ಮನ್ನಾ ಮಾಡುತ್ತದೆ ಎಂಬ ನಿರೀಕ್ಷೆಯಲ್ಲಿ ಸಾಲ ಮರು ಪಾವತಿಗೆ ಮುಂದಾಗುತ್ತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರ ಸಾಲಮನ್ನಾ ಮಾಡುವ ಯಾವುದೇ ಮುನ್ಸೂಚನೆ ಕಾಣುತ್ತಿಲ್ಲ. ಹಾಗಾಗಿ ರೈತರು ಸಂಘದಿಂದ ಪಡೆದ ಸಾಲವನ್ನು ಮರುಪಾವತಿ ಮಾಡಿ, ಒಂದು ವೇಳೆ ಸರ್ಕಾರ ಸಾಲಮನ್ನಾ ಮಾಡಿದರೆ ಸಾಲ ಮರುಪಾವತಿಸಿರುವ ರೈತರು ತಮ್ಮ ಹಣ ಹಿಂಪಡೆಯುವ ಅವಕಾಶ ಇರುತ್ತದೆ ಎಂದರು.

ಸಂಘದ ಸಿಇಓ ಸಿ.ಪಿ.ರಾಜೇಂದ್ರ ಪ್ರಸಾದ್ ವಾರ್ಷಿಕ ವರದಿ ಮಂಡಿಸಿ ಸಂಘವು ಪ್ರತಿ ವರ್ಷವೂ ಲಾಭಗಳಿಸುತ್ತಲೇ ಬಂದಿದೆ. ಈ ಬಾರಿ 1,38,763 ರೂ. ನಿವ್ವಳ ಲಾಭಗಳಿಸಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು. ಈ ವೇಳೆ ಉಪಾಧ್ಯಕ್ಷ ಹೆಚ್.ಟಿ.ಮಹದೇವ, ಇಂದ್ರೇಶ್, ಸಿದ್ದು, ಜೆ.ವಿಜಯ ಕುಮಾರ್, ಚಂದ್ರು, ಮಹದೇವ, ಚೌಡಯ್ಯ, ಗೌರಮ್ಮ, ಬಿ.ಲಕ್ಷ್ಮಿ, ಪಾರ್ವತಮ್ಮ, ಸಿ.ಎನ್.ನವೀನ್ ಕುಮಾರ್, ಮುಖಂಡರಾದ ಕಲ್ಲುಣಿ ಆನಂದ್, ಡೈರಿ ಕಾರ್ಯದರ್ಶಿ ರವಿ, ಸಿ.ಎ. ಜಯಶಂಕರ್, ಡಿ.ಎಂ.ರಮೇಶ್, ಮಲ್ಲೇಶ್ ಕುಮಾರ್ ಸೇರಿದಂತೆ ಗ್ರಾಮಸ್ಥರು, ಷೇರುದಾರರು ಹಾಜರಿದ್ದರು.

ಸ್ಪರ್ಧಾತ್ಮಕ ಪರೀಕ್ಷೆ ಪರಿಣಾಮಕಾರಿ ತರಬೇತಿಗೆ ಕ್ರಮ

ಶಾಸಕ ಜಿ.ಡಿ.ಹರೀಶ್‌ಗೌಡ



ಕಾರ್ಯಕ್ರಮದಲ್ಲಿ ಸಾಧಕ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಹುಣಸೂರು, ಸೆ.20– ಸಿಇಟಿ, ನೀಟ್ ಮತ್ತು ಜೆಇಇ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಉಚಿತ ಕಾರ್ಯಾಗಾರಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ವಿಜೇತರಿಗೆ ಸನ್ಮಾನ, ಶಿಕ್ಷಕರ ದಿನಾಚರಣೆ ಮತ್ತು ಸಿಇಟಿ, ನೀಟ್ ತರಬೇತಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಲೇಜಿನ ಜೀವಶಾಸ್ತ್ರ ವಿಭಾಗದ ಉಪನ್ಯಾಸಕ ಹೆಚ್.ಎನ್. ಗಿರೀಶ್ ರಾಷ್ಟ್ರ ಪ್ರಶಸ್ತಿ ಗಳಿಸಿದ್ದರೆ, ಕಾಲೇಜಿನ ಪ್ರಾಂಶುಪಾಲ ರಾಮೇಗೌಡರನ್ನು ರಾಜ್ಯ ಸರ್ಕಾರ ಸನ್ಮಾನಿಸಿದೆ. ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳೆರಡೂ ಈ ಕಾಲೇಜಿಗೆ ಲಭಿಸಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಇದೀಗ ನಾನು ವಿದ್ಯಾರ್ಥಿಗಳಿಂದ ಇಂತಹ ಸಾಧನೆಯ ನಿರೀಕ್ಷೆಯಲ್ಲಿದ್ದೇನೆ. ಸಾಧಿಸಲು ನಿಮ್ಮಲ್ಲಿ ಅವಿರತ ಶ್ರಮವಿರಬೇಕು. ನಿಮ್ಮ ಗುರುಗಳ ಸಾಧನೆಯೇ ನಿಮಗೆ ಪ್ರೇರಣೆಯಾಗಬೇಕು ಎಂದರು.

ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ 1300ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಸಾಮಾಜಿಕ ಜಾಲತಾಣಗಳ ಸದ್ಬಳಕೆ ಕುರಿತು ಆಲೋಚಿಸಲಿ. ಹೆಣ್ಣು ಹೆತ್ತ ತಂದೆ ತಾಯಂದಿರು ತಲೆ ಎತ್ತಿ ನಡೆಯುವಂತೆ ನೋಡಿಕೊಳ್ಳಿ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಉಚಿತವಾಗಿ ಕಾಲೇಜಿನಲ್ಲಿ ಸಿಇಟಿ, ನೀಟ್ ಮುಂತಾದ ತರಬೇತಿ ತರಗತಿ ನೀಡುತ್ತಿದ್ದು, ಅದನ್ನು ಪರಿಣಾಮಕಾರಿಯಾಗಿಸಲು ಗುಣಮಟ್ಟದ ಸಂಪನ್ಮೂಲ ಆಯ್ಕೆ ಸೇರಿದಂತೆ ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಿದ್ದೇನೆ ಎಂದರು. ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ ಮಾತನಾಡಿ, ಕಲಿಕೆಯಲ್ಲಿ ಶ್ರದ್ಧೆ, ಶ್ರಮ ಮತ್ತು ಆತ್ಮವಿಶ್ವಾಸ ನಿಮ್ಮಲ್ಲಿರಲಿ. ಕಾಲೇಜಿನ ಅಭಿವೃದ್ಧಿಗಾಗಿ ಈ ಸಾಲಿನಲ್ಲಿ 5 ಲಕ್ಷ ರೂ., ಮುಂದಿನ ಏಪ್ರಿಲ್ ನಂತರ ಮತ್ತೆ 5 ಲಕ್ಷರೂ. ನೀಡುತ್ತೇನೆ. ಹುಣಸೂರಿನಲ್ಲಿ ವ್ಯಾಸಂಗ ಮಾಡಿರುವ ನನ್ನನ್ನು ಹುಣಸೂರಿನ ಜನ ಈ ಎತ್ತರಕ್ಕೆ ಬೆಳೆಸಿದ್ದಾರೆ. ನನ್ನೂರಿನ ಜನರಿಗಾಗಿ ನಾನು ಸೇವೆ ನೀಡಲು ಸದಾ ಸಿದ್ಧ ಎಂದರು.

ಇದೇ ವೇಳೆ ರಾಷ್ಟ್ರಪ್ರಶಸ್ತಿ ವಿಜೇತ ಹೆಚ್.ಎನ್. ಗಿರೀಶ್, ರಾಜ್ಯಪ್ರಶಸ್ತಿ ವಿಜೇತ ರಾಮೇಗೌಡ, ಜಿಲ್ಲಾ ಮಟ್ಟದ ಅತ್ಯುತ್ತಮ ಪ್ರಶಸ್ತಿ ವಿಜೇತರಾದ ಮಂಜುಳಾ, ಹರೀಶ್ ಮತ್ತು ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ನಗರಸಭಾ ಧ್ಯಕ್ಷ ಶರವಣ, ಉಪಾಧ್ಯಕ್ಷೆ ಆಶಾ, ಸದಸ್ಯರಾದ ಹರೀಶ್, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಸದಸ್ಯರಾದ ಕೆ.ಕೃಷ್ಣ, ಕೆಂಪೇಗೌಡ, ಮಮತ ಗಜೇಂದ್ರ ಸೇರಿದಂತೆ ಅಧ್ಯಾಪಕರು ಮತ್ತು ವಿದ್ಯಾರ್ಥಿನಿಯರು ಹಾಜರಿದ್ದರು.

ಅನ್ನಸಂತರ್ಪಣೆಗೆ ಚಾಲನೆ



ಮೈಸೂರು ತಾಲೂಕು ಜಯಪುರ ಗ್ರಾಮದ ಶಾಂತಿನಗರ ಬಡಾವಣೆಯಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆ ಕಾರ್ಯಕ್ರಮದಲ್ಲಿ ಭಾಗಿಯಾದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ವೈಯಕ್ತಿಕ ದೇಣಿಗೆ ನೀಡಿ, ಅನ್ನಸಂತರ್ಪಣೆಗೆ ಚಾಲನೆ ನೀಡಿದರು.

ಚಂದ್ರವಾಡಿ ಡೈರಿಗೆ 1.56 ಲಕ್ಷ ನಿವ್ವಳ ಲಾಭ



ಮೈಮುಲ್ ವಿಸ್ತರಣಾಧಿಕಾರಿ ಎ.ಎಸ್.ನಂಜುಂಡಸ್ವಾಮಿ ಮಾತನಾಡಿದರು.

ಮಲ್ಕುಂಡಿ, ಸೆ.20– ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಸಂಘಕ್ಕೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮೈಮುಲ್ ವಿಸ್ತರಣಾಧಿಕಾರಿ ಎ.ಎಸ್. ನಂಜುಂಡಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಚಂದ್ರವಾಡಿ ಡೈರಿ ಆವರಣದಲ್ಲಿ ನಡೆದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಸಹಕಾರ ಸಂಘ ಆರ್ಥಿಕವಾಗಿ ಪ್ರಗತಿ ಪಥದಲ್ಲಿ ಸಾಗಬೇಕಾದರೆ ಸದಸ್ಯರು ಪ್ರಮುಖ ಪಾತ್ರ ವಹಿಸುತ್ತಾರೆ. ಅಲ್ಲದೇ ಸಂಘದ ಸದಸ್ಯರು ಗುಣಮಟ್ಟದ ಹಾಲನ್ನು ಪೂರೈಸುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು. ಪ್ರಸಕ್ತ ಸಾಲಿನಲ್ಲಿ ಸಂಘವು 1.56.639 ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಈ ವೇಳೆ ಸಂಘದ ಅಧ್ಯಕ್ಷ ರಾಜು, ಉಪಾಧ್ಯಕ್ಷೆ ಸುಂದ್ರಮ್ಮ, ನಿರ್ದೇಶಕರಾದ ಪುಟ್ಟಸ್ವಾಮಪ್ಪ, ಶಿವು, ಪಿ.ನಾಗಣ್ಣ, ರಂಗಸ್ವಾಮಿ, ಬಸವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡ ಪರಮೇಶ್, ಸಿಇಓ ವಿಜೇಂದ್ರಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಕೋಟೆಯಲ್ಲೇ ಇಂದಿರಾನಗರ ಡೈರಿಗೆ ಹೆಚ್ಚು ಲಾಭ

ಮೈಮುಲ್ ನಿರ್ದೇಶಕ ಈರೇಗೌಡ



ಇಂದಿರಾನಗರ ಡೈರಿ ಮಹಾಸಭೆಯನ್ನು ಮೈಮುಲ್ ನಿರ್ದೇಶಕ ಈರೇಗೌಡ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಸೆ.20– ತಾಲೂಕಿನಲ್ಲೇ ಹೆಚ್ಚು ಲಾಭ ಗಳಿಸಿದ ಹಾಲು ಉತ್ಪಾದಕರ ಸಹಕಾರ ಸಂಘವೆಂದರೆ ಅದು ಇಂದಿರಾನಗರ ಹಾಲು ಉತ್ಪಾದಕರ ಸಹಕಾರ ಸಂಘ ಎಂದು ಮೈಮುಲ್ ನಿರ್ದೇಶಕ ಈರೇಗೌಡ ತಿಳಿಸಿದರು.

ತಾಲೂಕಿನ ಇಂದಿರಾ ನಗರ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಇಂದಿರಾ ನಗರ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 200 ಸದಸ್ಯರಿದ್ದು, ಈ ಪೈಕಿ ನಿತ್ಯ 130 ಮಂದಿ ಸಂಘಕ್ಕೆ ಹಾಲು ಸರಬರಾಜು ಮಾಡುತ್ತಿದ್ದಾರೆ. ಪ್ರಸ್ತುತ ಸಂಘದಲ್ಲಿ ನಿತ್ಯ 3500 ಲೀಟರ್ ಹಾಲು ಶೇಖರಣೆಯಾಗುತ್ತಿದ್ದು, 2023–24ನೇ ಸಾಲಿನಲ್ಲಿ 19 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ತಾಲೂಕಿನಲ್ಲಿ ಅತೀ ಹೆಚ್ಚು ಹಾಲು ಸಂಗ್ರಹಣೆ ಜೊತೆಗೆ ಹಾಲಿನ ಗುಣಮಟ್ಟದಲ್ಲೂ ಇಂದಿರಾನಗರ ಡೈರಿ ಪ್ರಥಮ ಸ್ಥಾನದಲ್ಲಿರುವುದು ತಾಲೂಕಿಗೆ ಹಾಗೂ ಮೈಸೂರು ಜಿಲ್ಲಾ ಹಾಲು ಒಕ್ಕೂಟಕ್ಕೆ ಹೆಮ್ಮೆಯ ವಿಚಾರ ಎಂದ ಅವರು, ಸಂಘ 19 ಲಕ್ಷ ಲಾಭ ಗಳಿಸಲು ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯ ಕಾರಿ ಸಮಿತಿಯ ಎಲ್ಲಾ ಸಿಬ್ಬಂದಿಗಳ ಪರಿಶ್ರಮವೇ ಕಾರಣ ಎಂದರು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಆರ್.ಜೈ ಶಂಕರ್, ಉಪಾಧ್ಯಕ್ಷ ಸನಾವುಲ್ಲ, ವಿಸ್ತರಣಾಧಿಕಾರಿಗಳಾದ ಆರೀಫ್ ಇಕ್ಬಾಲ್, ಕೆ.ಆರ್.ಜಯಂತ್‌ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್. ಶೇಖರ್, ನಿರ್ದೇಶಕರಾದ ಸಿ.ಕೆ.ಮದನ್, ರಾಮಕೃಷ್ಣ, ಎಸ್.ನಾಗರಾಜ್, ಈರನಾಯಕ, ಶಿವರಾಮನ್, ಫಯಾಜ್, ಆರ್.ಕುಮಾರ್, ಶಿಬಾ, ಓಮನ್, ಸಿಬ್ಬಂದಿ ತಂಗವೇಲು ಇನ್ನಿತರರಿದ್ದರು.

ಮೈಸೂರು ಮಿತ್ರ


ಕೇಂದ್ರ ಸಚಿವ ಕುಮಾರಸ್ವಾಮಿಗೆ ಹಿಟ್ ಅಂಡ್ ರನ್ ಚಾಳಿ ಇದೆ

● ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ● ಅವರು ಡಿ ನೋಟಿಫಿಕೇಷನ್ ಮಾಡಿರುವ ದಾಖಲೆ ಪರಿಶೀಲಿಸಿ ಕ್ರಮ ● ರಾಜ್ಯದಲ್ಲಿ ನಡೆದ ಗಲಭೆಗೆ ಬಿಜೆಪಿಯವರ ಪ್ರಚೋದನೆಯೇ ಕಾರಣ

ಮೈಸೂರು,ಸೆ.20(ಎಂಟಿವೈ)– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಜವಾಬ್ದಾರಿ ಮರೆತು ಹಿಟ್ ಅಂಡ್ ರನ್ ರೀತಿಯಲ್ಲಿ ಸರ್ಕಾರದ ಮೇಲೆ ಆರೋಪ ಮಾಡುವ ಚಾಳಿ ಹೊಂದಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾಡಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾವುದೇ ಆರೋಪ ಮಾಡಬೇಕಾದರೂ ಅಗತ್ಯ ದಾಖಲೆಗಳನ್ನಿಟ್ಟುಕೊಂಡು ಮಾಡಬೇಕು. ಕೇವಲ ಬಾಯಿ ಮಾತಿಗೆ ಆರೋಪ ಮಾಡುವುದು ಸರಿಯಲ್ಲ. ಕೇಂದ್ರ ಸಚಿವರಾಗಿದ್ದರೂ ಹೆಚ್.ಡಿ.ಕುಮಾರಸ್ವಾಮಿ ಜವಾಬ್ದಾರಿ ಮರೆತು ಸರ್ಕಾರದ ವಿರುದ್ಧ ಹಿಟ್ ಅಂಡ್ ರನ್‌ನಂತೆ ಸುಳ್ಳು ಆರೋಪ ಮಾಡುತ್ತಲೇ ಇದ್ದಾರೆ. ಅವರು, ಯಾವುದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೆಲೆ ಬಾಳುವ ಭೂಮಿ ಡಿ ನೋಟಿಫಿಕೇಷನ್ ಮಾಡಿದ್ದಾರೆ: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧದ ಡಿ ನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನಾನು ಇನ್ನು ಫೈಲ್ ನೋಡಿಲ್ಲ. ನಿನ್ನೆಯಷ್ಟೇ ಸಚಿವರಾದ ದಿನೇಶ್ ಗುಂಡುರಾವ್, ಕೃಷ್ಣಬೈರೇಗೌಡ, ಸಂತೋಷ್ ಲಾಡ್ ಹಾಗೂ ಪಕ್ಷದ ಮುಖಂಡರು ಡಿ ನೋಟಿಫಿಕೇಷನ್‌ಗೆ ಸಂಬಂಧಿಸಿದ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ. ಬೆಲೆ ಬಾಳುವ 1.11 ಎಕರೆ ಭೂಮಿಯನ್ನು ಡಿ ನೋಟಿಫಿಕೇಷನ್ ಮಾಡಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದರು.

ಕುಮಾರಸ್ವಾಮಿಯವರು ಬಾಮೈದುನನ ಹೆಸರಿಗೆ ಮಾಡಿದ್ದಾರೆ. ಅವರ ಅತ್ತೆ ಜಿಪಿಎ ಹೋಲ್ಡರ್ ಆಗಿದ್ದಾರೆ. ಅದರಲ್ಲೂ ಮೃತಪಟ್ಟಿರುವವರ ಹೆಸರಲ್ಲಿ ದಾಖಲೆ ಮಾಡಿಕೊಟ್ಟಿದ್ದಾರೆ. ಫೈಲ್ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಎಸ್‌ಐಟಿಗೆ ವಹಿಸಲು ಮನವಿ ಮಾಡಿದ್ದಾರೆ: ಶಾಸಕ ಮುನಿರತ್ನ ವಿರುದ್ಧ ಮೂರು ದೂರುಗಳು ದಾಖಲಾಗಿವೆ. ಈ ಪ್ರಕರಣವನ್ನು ಎಸ್‌ಐಟಿಗೆ ವಹಿಸುವಂತೆ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಸಮುದಾಯದ ಶಾಸಕರು, ಮುಖಂಡರು ನನ್ನನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ಗೃಹಸಚಿವ ಡಾ.ಜಿ.ಪರಮೇಶ್ವರ ಜೊತೆ ಮಾತಾಡಿ ಹೇಳುತ್ತೇನೆ ಎಂದಿದ್ದೇನೆ ಎಂದರು.

ಮರು ಪರೀಕ್ಷೆ ನಡೆಸಲು ಸೂಚನೆ: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಮರು ಪರೀಕ್ಷೆಯನ್ನು ಆದಷ್ಟೂ ಶೀಘ್ರದಲ್ಲಿಯೇ ಏರ್ಪಡಿಸುವಂತೆ ಕೆಪಿಎಸ್‌ಸಿಗೆ ಸೂಚಿಸಲಾಗಿದೆ. ಕಾನ್‌ಸ್ಟೇಬಲ್ ಹುದ್ದೆಗಳಿಗೆ ವಯೋಮಿತಿಯನ್ನು 27 ರಿಂದ 33 ವರ್ಷಕ್ಕೆ ಏರಿಸಬೇಕೆಂಬ ಬೇಡಿಕೆಗೂ ಸಂಬಂಧಿಸಿದಂತೆ ಗೃಹ ಸಚಿವ ಪರಮೇಶ್ವರ್ ಜೊತೆ ಚರ್ಚಿಸುವುದಾಗಿ ತಿಳಿಸಿದರು.

ಅರವತ್ತು ಸಾವಿರ ಗಣೇಶ ಪ್ರತಿಷ್ಠಾಪನೆ: ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಈ ಬಾರಿ 60 ಸಾವಿರಕ್ಕೂ ಹೆಚ್ಚು ಗಣಪತಿ ವಿಗ್ರಹ ಪ್ರತಿಷ್ಠಾಪಿಸಿ ಪೂಜಿಸಲಾಗಿದೆ. ಅವುಗಳಲ್ಲಿ ಎರಡು ಕಡೆ ಮಾತ್ರ ಗೊಂದಲ ಉಂಟಾಗಿದೆ. ಉಳಿದೆಲ್ಲೆಡೆ ಶಾಂತಿಯುತವಾಗಿ ಗಣೇಶ ಮೂರ್ತಿ ವಿಸರ್ಜನೆ ನಡೆದಿದೆ. ನಾಗಮಂಗಲದಲ್ಲಿ ಅಂಗಡಿಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ದಾವಣೆಗೆರೆಯಲ್ಲಿ ಕಲ್ಲು ತೂರಾಟ ನಡೆದಿದೆ. ಉಳಿದೆಡೆ ಸಾಮರಸ್ಯದಿಂದ ಹಬ್ಬ ಆಚರಿಸಿದ್ದಾರೆ. ನಾಗಮಂಗಲದ ಪ್ರಕರಣದಲ್ಲಿ ಪೊಲೀಸರ ನಿರ್ಲಕ್ಷತೆ ಕಂಡು ಬಂದ ಹಿನ್ನೆಲೆಯಲ್ಲಿ ಡಿವೈಎಸ್ಪಿಯನ್ನು ಅಮಾನತು ಮಾಡಲಾಗಿದೆ ಎಂದು ತಿಳಿಸಿದರು.

ಬಿಜೆಪಿ ಪ್ರಚೋದನೆ: ರಾಜ್ಯದಲ್ಲಿ ನಡೆದ ಗಲಭೆ ಪ್ರಕರಣಗಳ ಹಿಂದೆ ಬಿಜೆಪಿ ಕೈವಾಡವಿದೆ. ಶಾಂತಿಯುತವಾಗಿ ಸಾಗುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪ್ರಚೋದನೆ ಮಾಡಿ ಗಲಭೆ ಸೃಷ್ಟಿಸುವ ಸಂಚು ನಡೆಸುತ್ತಲೇ ಇದೆ. ಬಿಜೆಪಿ ಪ್ರಚೋದನೆಯಿಂದಾಗಿಯೇ ಕೆಲವೆಡೆ ಕೋಮುಗಲಭೆ ನಡೆದಿದೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಶಿವರಾಜ್ ತಂಗಡಗಿ, ಶಾಸಕರಾದ ಪುಟ್ಟರಂಗಶೆಟ್ಟಿ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೋಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯುದ್ಧ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯುದ್ಧ (ಹಿಂ)	4 ಪ್ರದರ್ಶನಗಳು
ಸಂಗಂ	
ಹಗ್ಗ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ಖೈದಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟ್ರಾನ್ಸ್‌ಫಾರ್ಮರ್ಸ್ ಒನ್ (3ಡಿ) (ಇಂ): ಬೆ.11.20ಕ್ಕೆ, ರಾ.7.40ಕ್ಕೆ, ರಾ.9.55ಕ್ಕೆ, ಹಗ್ಗ (ಕ): ಮ.1.35ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.4.15ಕ್ಕೆ.
ಸ್ಕ್ರೀನ್ 2	ಲಂಗೋಟಿ ಮ್ಯಾನ್ (ಕ): ಬೆ.10.30ಕ್ಕೆ, ಲಬ್ಬರ್ ಪಾಂಡು (ತ): ಮ.1.40ಕ್ಕೆ, ನಂದನ್ (ತ): ಸಂ.4.35ಕ್ಕೆ, ಕಹಾನ್ ಶುರು ಕಹಾನ್ ಕಥಂ (ಹಿಂ): ರಾ.7.15ಕ್ಕೆ, ತುಂಬ್ಬಾಡ್ (ಹಿಂ): ರಾ.9.55ಕ್ಕೆ.
ಸ್ಕ್ರೀನ್ 3	ಉಪೇಂದ್ರ (ಕ): ಬೆ.10.50ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಮ.1.35ಕ್ಕೆ, ಅನ್ನ (ಕ): ಸಂ.4.35ಕ್ಕೆ, ಯುದ್ರ (ಹಿಂ): ರಾ.7.15ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ, ರಾ.7.10ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.4.05ಕ್ಕೆ, ಯುದ್ರ (ಹಿಂ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಧ್ರುವತಾರೆ (ಕ): ಮ.1.05ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಸಂ.4.10ಕ್ಕೆ, ಹಗ್ಗ (ಕ): ರಾ.7.05ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ರಾ.9.35ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.1.10ಕ್ಕೆ, ಲಂಗೋಟಿ ಮ್ಯಾನ್ (ಕ): ಸಂ.4.10ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7.15ಕ್ಕೆ.
ಸ್ಕ್ರೀನ್ 3	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕೋಳಿಪಣ್ಣೈ ಚೆಲ್ಲದುರೈ (ತ): ರಾ.9.40ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ರಾ.9.30ಕ್ಕೆ, ನಂದನ್ (ತ): ಸಂ.4.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.6.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅತ್ಯಾಚಾರ, ಬ್ಲ್ಯಾಕ್‌ಮೇಲ್ ಪ್ರಕರಣ
ಜೈಲಿನಿಂದ ಹೊರ ಬಂದ ಬಿಜೆಪಿ ಶಾಸಕ ಮುನಿರತ್ನ ಮತ್ತೆ ಬಂಧನ



ಬೆಂಗಳೂರು, ಸೆ.20(ಕೆಎಂಶಿ)– ಜಾತಿ ನಿಂದನೆ, ಗುತ್ತಿಗೆದಾರನಿಗೆ ಪ್ರಾಣ ಬೆದರಿಕೆ ಪ್ರಕರಣದಲ್ಲಿ ಜಾಮೀನು ಪಡೆದು ಹೊರಬಂದ ಬಿಜೆಪಿ ಶಾಸಕ ಮುನಿರತ್ನ, ಅತ್ಯಾಚಾರ, ಬ್ಲ್ಯಾಕ್‌ಮೇಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಬಂಧನವಾಗಿದೆ. ಮುನಿರತ್ನ ಪ್ರತಿನಿಧಿಸುವ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಮಹಿಳೆಯೊಬ್ಬರು, ತಮ್ಮ ಮೇಲೆ ಅತ್ಯಾಚಾರ ಎಸಗಿದ್ದಾರೆ ಮತ್ತು ನಂತರ ಬ್ಲ್ಯಾಕ್‌ಮೇಲ್ ಮಾಡಿದ್ದಾರೆ ಎಂದು ನೀಡಿದ ದೂರಿನ ಆಧಾರದ ಮೇಲೆ ರಾಮನಗರ ಜಿಲ್ಲಾ ವ್ಯಾಪ್ತಿಯ ಕಗ್ಗಲಿಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಂತ್ರಸ್ತೆ ನೀಡಿದ ದೂರಿನ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿ, ಬಂಧಿಸಿದ್ದಾರೆ. ಮುನಿರತ್ನ ವಿರುದ್ಧ ಪ್ರಕರಣ ದಾಖಲಾಗಿ ಜೈಲು ಸೇರುತ್ತಿದ್ದಂತೆ, ಸಂತ್ರಸ್ತೆ ರಾಮನಗರ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ಭೇಟಿ ಮಾಡಿ ತಮ್ಮ ಮೇಲೆ ನಿರಂತರ ಅತ್ಯಾಚಾರ ಎಸಗಿರುವುದಲ್ಲದೆ, ಅದನ್ನೇ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ.

ಅತ್ಯಾಚಾರ ಎಸಗಿದ ಸ್ಥಳಗಳು, ವಿರೋಧಿಗಳನ್ನು ಮಣಿಸಲು ಮುನಿರತ್ನ ಹೇಗೆ ತಮ್ಮನ್ನು ಬಳಕೆ ಮಾಡಿಕೊಂಡರೆಂಬ ಕುರಿತು ವಿವರಿಸಿದ್ದರು. ಕಗ್ಗಲಿಪುರ ಠಾಣಾ ವ್ಯಾಪ್ತಿಯಲ್ಲಿ ಅತ್ಯಾಚಾರ ನಡೆದಿದೆ ಎಂಬ ಹಿನ್ನೆಲೆಯಲ್ಲಿ ಪ್ರಕರಣವನ್ನು ಜಿಲ್ಲಾ ಪೊಲೀಸ್ ಅಧಿಕಾರಿಗಳು ಸಂಬಂಧಿತ ಠಾಣೆಗೆ ವರ್ಗಾಯಿಸಿದ್ದರು. ಬಿಬಿಎಂಪಿ ತ್ಯಾಜ್ಯ ವಿಲೇವಾರಿ ಗುತ್ತಿಗೆಯಲ್ಲಿ ಕಮಿಷನ್ ನೀಡುವಂತೆ ಗುತ್ತಿಗೆದಾರ ಚಲುವರಾಜ್ ಅವರಿಗೆ ಜೀವ ಬೆದರಿಕೆ ಹಾಕಿ ನಿಂದಿಸಿದ ಹಾಗೂ ಜಾತಿನಿಂದನೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ವೈಯಾಲಿಕಾವಲ್ ಠಾಣೆಯಲ್ಲಿ ಮುನಿರತ್ನ ವಿರುದ್ಧ ಪ್ರತ್ಯೇಕ ಎಫ್‌ಐಆರ್ ದಾಖಲಾಗಿತ್ತು. ದೂರು ದಾಖಲಾದ ನಂತರ ಮುನಿರತ್ನ ಅವರನ್ನು ಕೋಲಾರದಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಜೈಲಿಗೆ ಕಳುಹಿಸಲಾಗಿತ್ತು.

ಹಿಂದೂ ನಂಬಿಕೆಗೆ ಧಕ್ಕೆ ತಂದ ತಿರುಪತಿ ಲಡ್ಡು: ವರದಿ ಕೇಳಿದ ಕೇಂದ್ರ ಸರ್ಕಾರ



ನವದೆಹಲಿ, ಸೆ.20– ಹಿಂದೂ ಧಾರ್ಮಿಕ ಬಾವನೆಗೆ ಧಕ್ಕೆ ತಂದಿರುವ ತಿರುಪತಿ ಲಡ್ಡು ಪ್ರಕರಣ ಇದೀಗ ದೇಶಾದ್ಯಂತ ಆಕ್ರೋಶಕ್ಕೆ ಕಾರಣವಾಗಿದೆ. ತಿರುಪತಿ ಲಡ್ಡುವಿನಲ್ಲಿ ದನದ ಕೊಬ್ಬು, ಮೀನಿನ ಎಣ್ಣೆ ಬಳಸಲಾಗುತ್ತಿದೆ ಎಂಬ ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಆರೋಪ ಲ್ಯಾಬ್ ವರದಿಯಲ್ಲಿ ಖಚಿತವಾಗಿದೆ.

ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾ ತಿರುಪತಿ ಲಡ್ಡು ಪ್ರಕರಣ ಕುರಿತು ವರದಿ ಕೇಳಿದ್ದಾರೆ. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸುತ್ತಿದ್ದಂತೆ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ. ಚಂದ್ರಬಾಬು ನಾಯ್ಡು ತೆಲುಗುದೇಶಂ ಪಾರ್ಟಿ ಮಾಡಿದ ಆರೋಪ ದೇಶಾದ್ಯಂತ ಕೋಲಾಹಲ ಸೃಷ್ಟಿಸಿದೆ. ಬುಧವಾರ ಚಂದ್ರಬಾಬು ನಾಯ್ಡು ಈ ಕುರಿತು ಆರೋಪ ಮಾಡಿದ್ದರು. ಇದೇ ವೇಳೆ ಲ್ಯಾಬ್ ವರದಿ ಯನ್ನು ಬಿಡುಗಡೆ ಮಾಡಿದ್ದರು. ಜಗನ್ ಸರ್ಕಾರ ಹಿಂದೂ ಭಾವನೆಗಳ ಜೊತೆ ಚೆಲ್ಲಾಟವಾಡಿದೆ. ನೈಸರ್ಗಿಕ ತುಪ್ಪ ಟೆಂಡರ್ ನಿಲ್ಲಿಸಿ, ಕಳಪೆ ಮಟ್ಟದ ಕೊಬ್ಬುಗಳನ್ನು ಬಳಸಲಾಗಿದೆ ಎಂದು ಆರೋಪ ಮಾಡಿದ್ದರು. ಇದೀಗ ಸರ್ಕಾರದ ಮುಜರಾಯಿ ಇಲಾಖೆ ಅಡಿಯಲ್ಲಿರುವ ಹಿಂದೂ ದೇವಸ್ಥಾನಗಳನ್ನು ಮುಕ್ತಗೊಳಿಸುವಂತೆ ಮತ್ತೆ ಧ್ವನಿಗಳು ಜೋರಾಗುತ್ತಿವೆ. ಸೋಶಿಯಲ್ ಮೀಡಿಯಾದಲ್ಲಿ ಹಲವು ಬಾರಿ ಈ ರೀತಿಯ ಆಂದೋಲನ ತೀವ್ರ ಸ್ವರೂಪ ಪಡೆದುಕೊಂಡಿದೆ. ಇದೀಗ ಮತ್ತೆ ದೇವಸ್ಥಾನಗಳ ಮುಕ್ತಿಗೊಳಿಸಲು ಹೋರಾಟಗಳು ಆರಂಭಗೊಳ್ಳುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಚಿತ್ರನಗರಿ ಕನಸು ನನಸು

ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ವಿಶ್ವಾಸ

ಮೈಸೂರು, ಸೆ.20(ಎಸ್‌ಪಿಎನ್)– ನಂಜನಗೂಡು ತಾಲೂಕಿನ ಇಮ್ಮಾವು ಬಳಿ ಚಿತ್ರನಗರಿ ನಿರ್ಮಾಣ ಕನಸು ಹಲವು ವರ್ಷಗಳ ನಂತರ ನನಸಾಗುತ್ತಿದ್ದು, 110 ಎಕರೆ ಪ್ರದೇಶದಲ್ಲಿ ತಂತ್ರಜ್ಞಾನಕ್ಕೆ ತಕ್ಕಂತೆ ಅತ್ಯಾಧುನಿಕ 'ಚಿತ್ರನಗರಿ' ನಿರ್ಮಾಣಕ್ಕೆ ಒತ್ತು ನೀಡಲಾಗುವುದು ಎಂದು ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಹೇಳಿದರು.



ಪತ್ರಿಕಾಗೋಷ್ಠಿಯಲ್ಲಿ 'ಚಿತ್ರನಗರಿ' ಸ್ಥಾಪನೆ ಕುರಿತು ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ಮಾತನಾಡಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಚಿತ್ರರಂಗಕ್ಕೆ ಚಿತ್ರನಗರಿ ಬೇಕು ಎಂಬ ಹಲವರ ಕೂಗಿಗೆ ರಾಜ್ಯ ಸರ್ಕಾರ ಈಗ ಅನುಮತಿ ನೀಡಿದೆ. ಐದು ದಶಕಗಳ ಹೋರಾಟ ಸಾಕಾರಗೊಳ್ಳುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಚಿತ್ರನಗರಿ ನಿರ್ಮಾಣಕ್ಕೆ ಮೀಸಲಿಟ್ಟ ಜಾಗವನ್ನು ಕೆಐಎಡಿಬಿಯಿಂದ ವಾರ್ತಾ ಇಲಾಖೆಗೆ ಹಸ್ತಾಂತರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಿದ್ದು, ಹಸ್ತಾಂತರ ಪ್ರಕ್ರಿಯೆ ಆರಂಭವಾಗಿದೆ. ಚಿತ್ರರಂಗದಲ್ಲಿ ತೊಡಗಿಸಿಕೊಂಡಿರುವವರಲ್ಲಿ ಸಂತಸ ಮೂಡಿದೆ ಎಂದು ತಿಳಿಸಿದರು.

ಈವರೆಗೆ ಆಡಳಿತ ನಡೆಸಿದ ಮುಖ್ಯಮಂತ್ರಿಗಳಿಂದ ಸಾಧ್ಯವಾಗದಿದ್ದನ್ನು ಸಿದ್ದರಾಮಯ್ಯ ಸಾಧಿಸಿ ತೋರಿಸಿದ್ದಾರೆ. ಸಿದ್ದರಾಮಯ್ಯ ಅವಧಿಯಲ್ಲಿ ಚಿತ್ರನಗರಿ ಪೂರ್ಣ ಪ್ರಮಾಣದಲ್ಲಿ ನಿರ್ಮಾಣವಾದರೆ ಮಾತ್ರ ನಮ್ಮ ಕನಸು ಈಡೇರಿದಂತೆ. ಇಲ್ಲವಾದರೆ ಮುಂದಿನ ಪೀಳಿಗೆಗೂ ಅದು ಕನಸಾಗಿಯೇ ಉಳಿಯಲಿದೆ ಎಂದರು.

ಕಳೆದ ಹತ್ತು ವರ್ಷಗಳಿಂದ ಫಿಲ್ಮ್ ಸಿಟಿ ಮೈಸೂರಲ್ಲಿ ನಿರ್ಮಾಣವಾಗಲಿದೆ ಎಂದು ಪ್ರಚಾರ ಪಡೆದಿದ್ದರೂ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಇದೀಗ ಕನ್ನಡ ಚಿತ್ರರಂಗದ ಬೆಳವಣಿಗೆ ದೃಷ್ಟಿಯಿಂದ ಚಿತ್ರನಗರಿ ಸ್ಥಾಪನೆ ಅನಿವಾರ್ಯ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಇದಕ್ಕೆ ಚಾಲನೆ ನೀಡಿರುವುದು ಸಂತಸದ ಸಂಗತಿ ಎಂದರು.

ತಂತ್ರಜ್ಞಾನಕ್ಕೆ ತಕ್ಕಂತೆ ಚಿತ್ರನಗರಿ ನಿರ್ಮಾಣ: ತಂತ್ರಜ್ಞಾನ ಯುಗಕ್ಕೆ ಪೂರಕವಾಗಿ ಅತ್ಯಾಧುನಿಕ ಮಾದರಿಯಲ್ಲಿ ಚಿತ್ರನಗರಿ ನಿರ್ಮಾಣ ಮಾಡಲು ಕನ್ನಡ ಚಿತ್ರರಂಗ ಸಂಪೂರ್ಣ ಸಹಕಾರ ನೀಡಲಿದೆ ಇದರಲ್ಲಿ ಚಿತ್ರಮಂದಿರ, ಸ್ಟುಡಿಯೋ, ಮಲ್ಟಿಪ್ಲೆಕ್ಸ್ ಥೀಮ್ ಪಾರ್ಕ್ ಹಾಗೂ ಹೋಟೆಲ್ ಸಹ ನಿರ್ಮಾಣ ಆಗಲಿದೆ. ಚಿತ್ರನಗರಿ ನಿರ್ಮಾಣಕ್ಕೆ ಮೊದಲು 110 ಎಕರೆ ಮೀಸಲಿರಿಸಲಾಗಿತ್ತು ಇದೀಗ ಹೆಚ್ಚುವರಿಯಾಗಿ 50 ಎಕರೆ ನೀಡಲು ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹ ಎಂದರು.

ಪ್ರವಾಸೋದ್ಯಮದ ಜೊತೆಗೆ ಚಿತ್ರ ಪ್ರವಾಸೋದ್ಯಮ ಬೆಳವಣಿಗೆಗೂ ರಾಜ್ಯ ಸರ್ಕಾರ ಆದ್ಯತೆ ನೀಡಬೇಕು. ಜೊತೆಗೆ ಬೇರೆಬೇರೆ ಭಾಷೆಗಳ ಚಿತ್ರರಂಗದಲ್ಲಿರುವಂತೆ ನಮ್ಮಲ್ಲಿಯೂ ಹೌಸಿಂಗ್ ಸೊಸೈಟಿ ನಿರ್ಮಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ ಅವರು, ಈ ಹಿಂದೆ ಹಾಲಿವುಡ್, ಬಾಲಿವುಡ್ ಚಿತ್ರಗಳ ಚಿತ್ರೀಕರಣಕ್ಕೆ ಮೈಸೂರು ಮೊದಲ ಪ್ರಾಶಸ್ತ್ಯವಾಗಿತ್ತು ಎಂದರು.

ಪ್ರವಾಸೋದ್ಯಮ ಬೆಳವಣಿಗೆಗೆ ಪೂರಕ: ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣವಾಗುವುದರಿಂದ ಮೈಸೂರಲ್ಲಿ ಪ್ರವಾಸೋದ್ಯಮ ವೇಗವಾಗಿ ಬೆಳೆಯಲಿದೆ ಇದರಿಂದ ಸಾವಿರಾರು ಮಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗ ಸೃಷ್ಟಿಯಾಗಲಿದೆ ಎಂದರು.

ನಕರಾತ್ಮಕ ಧೋರಣೆ ಸಲ್ಲದು: ಕನ್ನಡ ಚಿತ್ರರಂಗ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣಗೌಡ ಮಾತನಾಡಿ, ಕೇವಲ ಹೆಸರಿಗಾಗಿ ಹಾಗೂ ಸದಾ ಸುದ್ದಿಯಲ್ಲಿರಬೇಕೆಂಬ ಹಂಬಲದಿಂದ ಕೆಲವರು ಅನಗತ್ಯವಾಗಿ ಮೀಟೂ ಆರೋಪ ಮಾಡುತ್ತಿದ್ದಾರೆ. ಈ ಮನೋಭಾವವನ್ನು ಕಲಾವಿದರು ಬಿಡಬೇಕು. ಹಾಗೊಂದು ವೇಳೆ ಚಿತ್ರರಂಗದಲ್ಲಿ ಚಿತ್ರನಟಿಯರಿಗೆ ಲೈಂಗಿಕ ದೌರ್ಜನ್ಯವಾಗಿದ್ದರೆ, ಅಂತಹವರ ಪರವಾಗಿ ಇಡೀ ಚಿತ್ರರಂಗ ನಿಲ್ಲುತ್ತದೆ. ಆದರೆ, ಕನ್ನಡ ಚಿತ್ರರಂಗದಲ್ಲಿ ಅಂತಹ ಘಟನೆಗಳು ನಡೆದಿಲ್ಲ ಎಂದು ಬಲವಾಗಿ ಸಮರ್ಥಿಸಿಕೊಂಡರು.


ಕೇರಳ ಚಿತ್ರರಂಗದ ಪರಿಸ್ಥಿತಿಯೇ ಬೇರೆ. ಕನ್ನಡ ಚಿತ್ರರಂಗದ ಪರಿಸ್ಥಿತಿ ಬೇರೆ. ನಮಗೆ ಕೇರಳದ ಹೇಮಾ ಕಮಿಟಿ ಮಾದರಿ ಅಗತ್ಯವಿಲ್ಲ ಎಲ್ಲರೂ ಒಟ್ಟಾಗಿ ಚಿತ್ರರಂಗ ಬೆಳವಣಿಗೆಗೆ ಶ್ರಮಿಸಬೇಕು. ಸಾಹಿತ್ಯ ಆಧಾರಿತ ಚಿತ್ರ ನಿರ್ಮಿಸಲು ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ನಟ ಜೈಜಗದೀಶ್, ನಟಿ ವಿಜಯಲಕ್ಷ್ಮೀ ಸಿಂಗ್ ಇದ್ದರು.

ಅ. 7 ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಸೆ 20– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಅ. 7 ರಂದು ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹರಗುರು ಚರಮೂರ್ತಿಗಳು, ವಧುವರರ ಬಂಧುಮಿತ್ರರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಲಿದ್ದಾರೆ. ಈ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ಆಸಕ್ತರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂ: 08221–232217, 232033, 9741342222, ಸಂಪರ್ಕಿಸಿ, ನೋಂದಾಯಿಸಿಕೊಳ್ಳಬಹುದು.

ದೇಶದ್ರೋಹಿಗಳ ವಿಚಾರದಲ್ಲಿ ಕಾಂಗ್ರೆಸ್ ಮೃದು ಧೋರಣೆ

● ಹಾಗಾಗಿಯೇ ಕರ್ನಾಟಕದಲ್ಲಿ ಶಾಂತಿ–ಸುವ್ಯವಸ್ಥೆ ಹದಗೆಟ್ಟಿದೆ
● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಗಂಭೀರ ಆರೋಪ
● ಅಲ್ಪಸಂಖ್ಯಾತರಿಂದಲೇ ಅಧಿಕಾರಕ್ಕೆ ಬಂದಂತಿದೆ ಮುಖ್ಯಮಂತ್ರಿ ಧೋರಣೆ
● ನಾಗಮಂಗಲ, ದಾವಣಗೆರೆ ಘಟನೆ ಎನ್‌ಐಎ ತನಿಖೆಗೆ ಆಗ್ರಹ



ಬೆಂಗಳೂರು, ಸೆ.20(ಕೆಎಂಶಿ)– ದೇಶದ್ರೋಹಿಗಳ ವಿರುದ್ಧ ರಾಜ್ಯ ಕಾಂಗ್ರೆಸ್ ಸರ್ಕಾರದ ಮೃದು ಧೋರಣೆಯಿಂದ ಕರ್ನಾಟಕದಲ್ಲಿ ಶಾಂತಿ–ಸುವ್ಯವಸ್ಥೆ ಕದಡುವಂತಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಗಮಂಗಲ, ದಾವಣಗೆರೆ ಮತ್ತಿತರ ಕಡೆ ನಡೆದ ಗಲಭೆಗಳ ಕುರಿತು ರಾಜ್ಯ ಸರ್ಕಾರಿ ಸಂಸ್ಥೆಗಳು ಸಮರ್ಪಕ ತನಿಖೆ ನಡೆಸಲು ಸಾಧ್ಯವಿಲ್ಲ, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಯಿಂದ ತನಿಖೆ ಆಗಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಬದಿಗಿಟ್ಟು, ಎಲ್ಲ ಸಮುದಾಯದ ಜನರು ನೆಮ್ಮದಿಯಿಂದ ಬದುಕುವಂತಾಗಲು ಘಟನೆಗಳ ತನಿಖೆಯನ್ನು ಎನ್‌ಐಎಗೆ ಕೊಡಿ.

ಹಿಂದೂಗಳ ಮೇಲೆ ಬಲಾತ್ಕಾರ, ದಾಳಿ ನಡೆಯುತ್ತಿದೆ. ಇವೆಲ್ಲಾ ಪೊಲೀಸರ ಕಣ್ಮುಂದೆಯೇ ನಡೆದರೂ ಕಣ್ಮುಚ್ಚಿ ಕೂತಿದ್ದಾರೆ ಅವರಿಗೆ ಯಾವುದೇ ಕ್ರಮ ಕೈಗೊಳ್ಳಲು ಅಧಿಕಾರ ಇಲ್ಲದಿರುವುದೇ ಇದಕ್ಕೆ ಕಾರಣ.

ರಾಜ್ಯದಲ್ಲಿ ಅಲ್ಪಸಂಖ್ಯಾತರಿಂದಲೇ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ ಎಂಬ ಭ್ರಮೆಯಲ್ಲಿ ಮುಖ್ಯಮಂತ್ರಿಗಳಿದ್ದು, ಇದೇ ಕಾರಣಕ್ಕೆ ಅಲ್ಪಸಂಖ್ಯಾತರು ರಾಜ್ಯದಲ್ಲಿ ಮೆರೆಯುತ್ತಿದ್ದಾರೆ. ವಿರೋಧ ಪಕ್ಷವಾದ ಬಿಜೆಪಿ ಎಲ್ಲ ವಿಚಾರಗಳನ್ನು ಗಂಭೀರವಾಗಿ ತೆಗೆದು ಕೊಂಡಿದೆ. ಮುಂದೆ ಹೇಗೆ ತೆಗೆದುಕೊಂಡು ಹೋಗಬೇಕೆಂದು ಚರ್ಚಿಸಲಿದ್ದೇವೆ. ರಾಜ್ಯದಲ್ಲಿ ಅರಾಜಕತೆ ದಿನೇ ದಿನೇ ಹೆಚ್ಚಾಗುತ್ತಿದೆ. ಕಾನೂನು–ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ ಒಂದಾದ ಮೇಲೆ ಒಂದರಂತೆ ದುರ್ಘಟನೆಗಳು ನಡೆಯುತ್ತಿವೆ. ನಾಗಮಂಗಲ ನಂತರ ಪಾಂಡವಪುರದಲ್ಲಿ ಪೊಲೀಸರು ಏಕಾಏಕಿ ಸಂಘದ ಕಾರ್ಯಾಲಯಕ್ಕೆ ನುಗ್ಗಿ ದಬ್ಬಾಳಿಕೆ ಮಾಡಿದ್ದಾರೆ. ನಿನ್ನೆ ರಾತ್ರಿ ದಾವಣಗೆರೆಯಲ್ಲಿ ಘಟನೆ ನಡೆದಿದೆ. ಹಿಂದೂ ಯುವಕರು ಶಾಂತಿಯುತವಾಗಿ ಗಣಪತಿ ಮೆರವಣಿಗೆ ಮಾಡುತ್ತಿದ್ದಾಗ ಅವರ ಮೇಲೆ ದಾಳಿ ಮಾಡಲಾಗಿದೆ, ಪೊಲೀಸ್ ಅಧಿಕಾರಿಗಳಿಗೂ ಕಲ್ಲಿನ ಪೆಟ್ಟು ಬಿದ್ದಿದೆ. ವಿವಿಧೆಡೆ ನಡೆಯುತ್ತಿರುವ ಘಟನಾವಳಿಗಳನ್ನು ಗಮನಿಸಿದರೆ ರಾಜ್ಯದಲ್ಲಿ ಚುನಾಯಿತ ಸರ್ಕಾರ, ಪೊಲೀಸ್ ವ್ಯವಸ್ಥೆ ಇದೆಯೇ ಎಂಬ ಸಂಶಯವಾಗಿದೆ ಎಂದರು.

ಮಿಸ್ಟರ್ ಕೃಷ್ಣ ಭೈರೇಗೌಡ ಯಾರನ್ನೋ ಮೆಚ್ಚಿಸಲು ಏನೇನೂ ಮಾತನಾಡಬೇಡಿ

ತಮ್ಮ ವಿರುದ್ಧ ಡಿ ನೋಟಿಫಿಕೇಷನ್ ಆರೋಪಕ್ಕೆ ಕೇಂದ್ರ ಸಚಿವ ಹೆಚ್‌ಡಿಕೆ ಆರೋಪ

ಮೈಸೂರು, ಸೆ.20(ಜಿಎ)–'ಮಿಸ್ಟರ್ ಕೃಷ್ಣ ಭೈರೇಗೌಡ ಯಾರನ್ನೋ ಮೆಚ್ಚಿಸಲು ಏನೇನೋ ಮಾತನಾಡಬೇಡಿ. ನೀನು ಏನು ಸತ್ಯ ಹರಿಶ್ಚಂದ್ರನಾ, ಕಂದಾಯ ಇಲಾಖೆಯಲ್ಲಿ ಏನೇನು ಮಾಡಿದ್ದೀಯಾ ಗೊತ್ತಿದೆ. ನೀವು ಏನೇ ಮಾಡಿದರೂ ನನ್ನದು ಏನು ಸಿಗುವುದಿಲ್ಲ' ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.



ಡಿನೋಟಿಫಿಕೇಷನ್ ಆರೋಪ ಹಿನ್ನೆಲೆಯಲ್ಲಿ ಮೈಸೂರಿನ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಿನ್ನೆಯ ಕಾಂಗ್ರೆಸ್ ಸಚಿವರ ಪತ್ರಿಕಾಗೋಷ್ಠಿಯೂ ಕಾಂಗ್ರೆಸ್‌ನ ಟೂಲ್ ಕಿಟ್ ಆಗಿದ್ದು, ಯಾರೋ ಅವರಿಗೆ ಸರಿಯಾಗಿ ಸ್ಕ್ರಿಪ್ಟ್ ಕೂಡ ಬರೆದುಕೊಟ್ಟಿಲ್ಲ. ಅದರಲ್ಲೇ ಅವರು ಸಿಕ್ಕಿ ಬೀಳುತ್ತಾರೆ ಎಂದರು.

ಕೃಷ್ಣ ಭೈರೇಗೌಡ ಫಾರಿನ್‌ನಲ್ಲಿ ಓದಿದವನು. ಬಹಳ ಮೇಧಾವಿ ಎಂದು ಕೊಂಡಿದ್ದೆ. ಆದರೆ ಕೃಷ್ಣ ಭೈರೇಗೌಡ ಹೆಬ್ಬೆಟ್ಟು ಎಂದು ಕೊಂಡಿರಲಿಲ್ಲ. ಯಾವನೋ ಏನೋ ಬರೆದು ಕೊಟ್ಟ, ಅದನ್ನು ಇವರು ತಂದು ಓದಿದ್ದಾರೆ. ಕಳೆದ ಮೂರು ತಿಂಗಳಿನಿಂದಲೂ ಈ ಸರ್ಕಾರ ನನ್ನ ವಿರುದ್ಧ ದಾಖಲೆ ಹುಡುಕಿಸುತ್ತಿದೆ. ಯಾವುದೂ ಸಿಗದ ಕಾರಣ ಹಳೇ ಕೇಸ್‌ಗೆ ಮರುಜೀವ ಕೊಡುವ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಡಿನೋಟಿಫಿಕೇಷನ್ ಆಗಿರುವುದು ನಿಜ. ಆದರೆ, ಅದನ್ನು ನಾನು ಮಾಡಿದ್ದೇನಾ. ಆ ಜಮೀನು ತೆಗೆದುಕೊಂಡಿರುವುದು ನನ್ನ ಪತ್ನಿಯ ಅತ್ತೆ. ನನಗೂ ಅವರಿಗೂ ಸಂಬಂಧವೇ ಇಲ್ಲ ಎಂದು ಸಿಎಂ ರೀತಿ ಹೇಳುವುದಿಲ್ಲ ಎಂದು ಕಿಡಿಕಾರಿದರು.

2015ರಲ್ಲೇ ಈ ಕೇಸ್ ಆಗಿತ್ತು. ಆ ನಂತರ ತನಿಖೆ ಮಾಡಿ ಬಿ ರಿಪೋರ್ಟ್ ಸಹ ಹಾಕಿದ್ದಾರೆ. ಈಗ ಅದಕ್ಕೆ ಮರು ಜೀವ ಕೊಡಲು ಪ್ರಯತ್ನಿಸುತ್ತಿದ್ದಾರೆ. ನಾನು ಯಾರಿಗೋ ಟೋಪಿ ಹಾಕಿ ಜಮೀನು ಪಡೆದಿಲ್ಲ ಈ ಹಿಂದೆ ನಾನೇ ಆ ಫೈಲ್ ಅನ್ನು ನನ್ನ ಅವಧಿಯಲ್ಲಿ ರಿಜೆಕ್ಟ್ ಮಾಡಿದ್ದೇನೆ. ನನಗೂ ಯಡಿಯೂರಪ್ಪನವರಿಗೂ ರಾಜಕೀಯ ಸಂಘರ್ಷ ಯಾವ ರೀತಿ ಇತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಆ ಸಂದರ್ಭದಲ್ಲಿ ಅವರೇಕೆ ನನಗೆ ಸಹಾಯ ಮಾಡುತ್ತಾರೆ ಎಂದು ಪ್ರಶ್ನಿಸಿದರು.

> ನನ್ನ ರಕ್ಷಣೆ ಮಾಡಿ ಎಂದು ಯಾರ ಮುಂದೆಯೂ ಗೋಗರೆಯುವುದಿಲ್ಲ. ಗೋಗರೆಯುವ ಕೆಲಸವನ್ನು ನಾನು ಮಾಡಿಲ್ಲ. ನಾನು ಸಿದ್ದರಾಮಯ್ಯರಂತೆ ಯಾವುದೇ ಹಲ್ಕ ಕೆಲಸಗಳನ್ನು ಮಾಡಿಲ್ಲ. ನನ್ನ ಉಳಿಸಿ ಎಂದು ಕೈ ಕಟ್ಟುವ ಪರಿಸ್ಥಿತಿ ಬಂದರೆ ನಾನು 5 ಸೆಕೆಂಡ್ ಕೂಡ ರಾಜಕಾರಣದಲ್ಲಿ ಇರುವುದಿಲ್ಲ.
> –ಹೆಚ್.ಡಿ.ಕುಮಾರಸ್ವಾಮಿ,
> ಕೇಂದ್ರ ಸಚಿವ

ಸತ್ತವರ ಹೆಸರಿನಲ್ಲಿ ಹೆಬ್ಬೆಟ್ಟು ಪಡೆದು, ಜಮೀನು ಹೊಡೆದಿದ್ದು ಯಾರು?. ಡಿ.ಕೆ.ಶಿವಕುಮಾರ್‌ಗೆ ಅಂತಹದ್ದು ಗೊತ್ತಿದೆ. ಬೆನಗಾನಹಳ್ಳಿ ಜಮೀನು ವಿಚಾರದಲ್ಲಿ ಏನೇನಾಗಿದೆ ಎಂಬುದು ಡಿ.ಕೆ.ಸುರೇಶ್ ಮರೆತು ಹೋಯಿತಾ? ನನಗೆ ಅಂತಹ ಯಾವ ವ್ಯವಹಾರಗಳು ಗೊತ್ತಿಲ್ಲ ಎಂದರು.

ಈಗ ಕೆಲವರಿಗೆ ಒಕ್ಕಲಿಗರ ಮೇಲೆ ಪ್ರೀತಿ ಹುಟ್ಟುತ್ತಿದೆ. ಮೈಸೂರಿನಲ್ಲಿ ದೇವೇಗೌಡರ ಫೋಟೊಗೆ ಚಪ್ಪಲಿ ಹಾರ ಹಾಕಿಸಿದ್ದು ಯಾರು? ಆಗ ಒಕ್ಕಲಿಗರ ಸ್ವಾಭಿಮಾನ ಎಲ್ಲಿಗೆ ಹೋಗಿತ್ತು. ನಮ್ಮ ಸಮಾಜದ ಸ್ವಾಮೀಜಿಗೆ ಸಾಫ್ಟ್ ಆಗಿ ಇರಲು ಹೇಳಿದ್ದೇನೆಂದು ಕೆಲವರು ಹೇಳಿದ್ದಾರೆ. ನಾನ್ಯಾಕೆ ಇಂತಹವೆಲ್ಲಾ ಮಾಡಲಿ ಹೇಳಿ ಎಂದು ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಮುನಿರತ್ನ ಪ್ರಕರಣದ ತನಿಖೆಗೆ ಎಸ್‌ಐಟಿಗೆ ರಚನೆ ಪ್ರಸ್ತಾಪ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಎಸ್‌ಐಟಿ ಎನ್ನುವುದು ಸಿದ್ದರಾಮಯ್ಯ ಶಿವಕುಮಾರ್ ತನಿಖಾ ಸಂಸ್ಥೆ ಇದ್ದಂತೆ. ಎಸ್‌ಐಟಿ ಅವರು ಮಾಡುವುದು ತನಿಖೆಯಲ್ಲ, ಅವರು ಮಾಡುವುದು ಇವರ ಗುಲಾಮಗಿರಿ. ಯಾವನೋ ಸುಬ್ರಹ್ಮಣೇಶ್ವರ ರಾವ್ ಅಂಥೇ. ಅವನ ಮೂಲಕವೂ ಈಗ ನನ್ನ ಮೇಲೆ ತನಿಖೆ ಮಾಡಿಸುತ್ತಾರಂತೆ. ನಾನು ಯಾರ ಮೇಲಿನ ಎಸ್‌ಐಟಿ ತನಿಖೆಯ ಬಗ್ಗೆಯೂ ಮಾತನಾಡುವುದಿಲ್ಲ. ಎಸ್‌ಐಟಿ ಹೇಗೆ ಕಾರ್ಯ ಮಾಡುತ್ತೇ ಎಂಬುದು ರಾಜ್ಯದ ಜನರಿಗೆ ಗೊತ್ತಾಗಲಿ ಎಂದರು.

NAMMANE Constructions Pvt. Ltd

SITES FOR SALE
At Prime Locations in Mysore
20X30, 30X40, 30X50

Newly Built House For Sale
At Prime Locations In Mysore
30X40, 40X60

CONSTRUCTIONS | INTERIORS

9986474401
9380468614

SITE AVAILABLE FOR SALE

40x60 (80 feet road) south facing near Rashtrotthana Vidya Kendra, Vijayangar 4th stage, Mysore
4250/- (slightly negotiable)

9036665888

MUDA APPROVED SITES FOR SALE

All Dimensions 20 X 30 also
Behind Chamundi Hills
BVL, KBL &
Sapthamathruka Layout

99808 21777
99005 69400

ಬೇಕಾಗಿದ್ದಾರೆ

Hero Electric ಮತ್ತು Exide ಕಂಪನಿಗಳ ಬ್ಯಾಟರಿ ಚಾಲಿತ ಸ್ಕೂಟರ್‌ಗಳು, ಬ್ಯಾಟರಿಗಳು ಹಾಗೂ UPS ಗಳ 'ಸರ್ವಿಸ್ ಸೆಂಟರ್' ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC / ITI
(ಇಲೆಕ್ಟ್ರಾನಿಕ್ ಉಪಕರಣಗಳ ರಿಪೇರಿ ತಿಳಿದವರಿಗೆ/ ಮೈಸೂರಿನಲ್ಲಿ ವಾಸವಿರುವವರಿಗೆ ಆದ್ಯತೆ)

– ಉತ್ತಮ ಬೆಳವಣಿಗೆಯ ಅವಕಾಶಗಳು –
ಕೂಡಲೆ ಸಂಪರ್ಕಿಸಿ
ಶ್ರೀಧರ್ 98451 97718
ಶ್ರೀವರ್ಧಿನಿ ವೆಂಚರ್ಸ್, ಕುವೆಂಪುನಗರ



ಮಾರಾಟವು 27-09-2024 ರಂದು ಕೊನೆಗೊಳ್ಳುತ್ತದೆ
ಸಮಯ- ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)

ಸೀರೆಗಳು ₹395 ರಿಂದ ಆರಂಭ	ಡ್ರೆಸ್ ಮೆಟೀರಿಯಲ್ ₹74 / ಮೀ.ನಿಂದ ಆರಂಭ	ಸಲ್ವಾರ್ ಸೆಟ್ ಪೀಸ್‌ಗಳ ವಿಶೇಷ ಶ್ರೇಣಿ

ಹೋಟೆಲ್ ಅಭಿಷೇಕ್, 2930/A, (ಆನಂದ್ ವಿಹಾರ್ ಕಲ್ಯಾಣ ಭವನ ಕಾಂಪೌಂಡು), ಕಲ್ಯಾಣ್ ಜ್ಯುವೆಲರ್ಸ್ ಪಕ್ಕದಲ್ಲಿ, ಬಿ. ಎಸ್. ರಸ್ತೆ, ಮೈಸೂರು- 570001.

ಸ್ಥಾಪನೆ - 1920 ದೂ. : 0821-2425261

ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ (ನಿ).,
THE RAILWAY CO-OPERATIVE BANK LTD.,

ಕೇಂದ್ರ ಕಛೇರಿ : ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು - 570001
ಶಾಖೆಗಳು : ಬೆಂಗಳೂರು, ಅರಸೀಕೆರೆ, ಯಲಹಂಕ ಮತ್ತು ಮೈಸೂರು ರೈಲ್ವೆ ಕಾರ್ಯಾಗಾರ

105ನೇ 2023-24ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 105ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ: 22-09-2024ರ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ಯತಿರಾಜು ರವರ ಅಧ್ಯಕ್ಷತೆಯಲ್ಲಿ ವಿದ್ಯಾವರ್ಧಕ ಕಾನೂನು ಹಾಗೂ ಪದವಿ ಕಾಲೇಜು, ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು ಇಲ್ಲಿ ನಡೆಯಲಿದೆ. ಸಂಬಂದಪಟ್ಟಂತೆ ಸದಸ್ಯರುಗಳೆಲ್ಲರಿಗೂ ಬ್ಯಾಂಕಿನ 2023-24ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ವರದಿಯೊಡನೆ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಇದುವರೆಗೂ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ಆಹ್ವಾನ ಪತ್ರಿಕೆಯೆಂದು ತಿಳಿದು ಸದಸ್ಯರು ಸದರಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆಯ ಮೇರೆಗೆ
ನಾರಾಯಣ ಎಸ್.ಜೆ. ಮುಖ್ಯಕಾರ್ಯನಿರ್ವಹಣಾಧಿಕಾರಿ



• 10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS

Venues in Mysore & Hassan
Mysore: The Institution Of Engineers, Jhansi Lakshmibai Road, JLB Road - 5
Hassan: Sri Sringeri Shankar Math, Shankar Math Road, K.R. Puram

100% TEAK WOOD
FACTORY FINISH DOORS & FRAMES
@ FACTORY DEPOT RATES



10 YEARS WARRANTY*
9845426862
9901291267

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

Sites for sale
MANGO TREE LAYOUT
After Yelwala fully Developed & Ready for construction
8050009696

50% ರಿಯಾಯಿತಿ
ಕಾಂಚೀಪುರಂ ರೇಷ್ಮೆ ಸೀರೆಗಳು
ಮಾರಾಟ ಮತ್ತು
ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಈ ಅವಕಾಶ ಕೆಲವೇ ದಿನಗಳು ಮಾತ್ರ
ಹೋಟೆಲ್ ಮಯೂರ ಹೊಯ್ಸಳ
ಜೆಎಲ್‌ಬಿ ರಸ್ತೆ, ಮೈಸೂರು
ಮೊ. : 9481820079

MUDA APPROVED
Vee2 Developers
DASARA OFFER
₹20 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
8055 004 400

ನಿವೇಶನ ಮಾರಾಟಕ್ಕಿದೆ

ಮೈಸೂರಿನ ಆನಂದ ನಗರದಲ್ಲಿ ರಿಂಗ್ ರಸ್ತೆಯ ಹಿಂಭಾಗ ಉತ್ತರಾಭಿಮುಖವಾಗಿರುವ ಹಾಗೂ 30 ಅಡಿ ರಸ್ತೆ ಹೊಂದಿರುವ 40 x 60 ವಿಸ್ತೀರ್ಣದ ನಿವೇಶನ ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಸಂಪರ್ಕಿಸಿ:
77958 00644

ಮೈಸೂರು ಪ್ರಾಂತೀಯ ಪ್ರಾಥಮಿಕ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಜಿಲ್ಲಾ ಶಿಕ್ಷಕರ ಸದನ, ಮೈಸೂರು ಮಿಲ್ಕ್ ಡೈರಿ ಪಕ್ಕ, ಬನ್ನೂರು ರಸ್ತೆ, ಮೈಸೂರು 570 011
(ಜೆಆರ್‌ಎಂ/ಎಸ್-7/ಹೆಚ್ ಹೆಚ್‌ಎಸ್/126) ನೋಂದಣಿ ಸಂಖ್ಯೆ : 37289/2010-11 ದಿ:25-04-11)

2023-24ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ದಿ: 22.09.2024ನೇ ಭಾನುವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮೇಲ್ಕಂಡ ನಮ್ಮ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಬಿ.ಬಸವರಾಜುರವರ ಅಧ್ಯಕ್ಷತೆಯಲ್ಲಿ ಮಹಾಜನ ಎಜುಕೇಷನ್ ಸೊಸೈಟಿ, ಮಹಾಜನ ಪ್ರೌಢಶಾಲಾ ವಿಭಾಗ, ಸುಬ್ಬಲಕ್ಷ್ಮಿ ಹಾಲ್ ಜಯಲಕ್ಷ್ಮಿಪುರಂ, ಮೈಸೂರು - 12. ಇಲ್ಲಿ ಮಹಾಸಭೆಯನ್ನು ಏರ್ಪಡಿಸಲಾಗಿದೆ, ಆಹ್ವಾನ ಪತ್ರಿಕೆಯನ್ನು ಅಂಚೆಯ ಮೂಲಕ ಕಳುಹಿಸಲಾಗಿದ್ದು ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೆ ಆಹ್ವಾನವೆಂದು ತಿಳಿದು ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಸಹಿ/- ಶ್ರೀ ಹೆಚ್.ಬಿ.ಬಸವರಾಜು, ಅಧ್ಯಕ್ಷರು

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

READY TO REGISTER SITES FOR SALE
Layout - BALAJI ENCLAVE
Price - 1499/- Per Sqft (Negotiable)
Manuganahalli NH 275 (5 Km from Yelwala)
20 X 30 & 30 X 40 SITES AVAILABLE
Ready for Registration with 70% Bank Loan
FREE SITE VISIT AVAILABLE
Contact : 63639 97996, 95914 58460

2.5 BHK
HOME INTERIORS @ ₹ 2.5 Lakh*
Home Space Mart
*T&C Apply
91089 23123

ಶ್ರೀ ರಾಮಲಿಂಗ ಚೌಡೇಶ್ವರಿ ವೀವರ್ಸ್ ಕೋ ಆಪರೇಟಿವ್ ಸೊಸೈಟಿ ಲಿ.


ನಂ. 79, ಕೆ.ಟಿ. ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು.

ಮೇಲ್ಕಂಡ ಸೊಸೈಟಿ 2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ
ಶ್ರೀ ಬಿ.ಎಸ್. ರವಿನಾಥ್‌ರವರ
ಅಧ್ಯಕ್ಷತೆಯಲ್ಲಿ ದಿನಾಂಕ 22-9-2024ನೇ ಭಾನುವಾರ ಸಂಜೆ 4.30 ಘಂಟೆಗೆ ಕೆ.ಟಿ. ರಸ್ತೆಯಲ್ಲಿರುವ ದೇವಾಂಗ ಭವನದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರುಗಳು ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಸವಿನಯ ಪ್ರಾರ್ಥನೆ

ವಿಷೇಶ ಸೂಚನೆ : ಸದಸ್ಯರು ತಮ್ಮ ವಿಳಾಸ ಬದಲಾವಣೆ ಆಗಿದ್ದರೆ ನೂತನ ವಿಳಾಸವನ್ನು ತಿಳಸಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ, ಸಹಿ/- ಎನ್.ಪ್ರಭಾಕರ್, ವೇತನ ಕಾರ್ಯದರ್ಶಿ

IMKTA Since 2003
IMKTA TEACHER TRAINING COURSES
INDIA MYSORE
www.imkta.in
21 years of success in PreSchool Teacher Training and Placements



Celebrating 21 Years Anniversary
Diploma in Montessori/ Primary
& Diploma in Special Education
• Learning Disability • Autism
• ADHD Syndrome • Slow Learners
For SSLC, PUC or any degree candidates
Online Course available
DOWNLOAD IMKTA APP Google play
Alpha International School
Manandavadi Road, Near Ring Road Signal Junction, Srirampura, Mysore
+91 7829937469

ಭಾರತ ರತ್ನ ಡಾ. ಎಂ. ವಿಶ್ವೇಶ್ವರಯ್ಯ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ.)

#1126 / ಸಿಎಚ್14, ಗ್ರೌಂಡ್ ಫ್ಲೋರ್, ಸೌಮ್ಯಕೃಷ್ಣವೇಣಿ ಗೀತಾ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು=570 005, ಕಛೇರಿ ದೂ: 0821-2424518

2023-24ನೇ ಸಾಲಿನ ವಾರ್ಷಿಕ ಮಹಾಸಭೆ

ಮೇಲ್ಕಂಡ ಸಭೆಯು ದಿ. 22-09-2024ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಅಧ್ಯಕ್ಷರಾದ ಶ್ರೀ ಜಿ.ಎಸ್. ಅಶೋಕ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಗುವುದು. ಈಗಾಗಲೇ ಮಹಾಸಭೆಯ ಆಹ್ವಾನ ಪುಸ್ತಕವನ್ನು ಮಾನ್ಯ ಸದಸ್ಯರುಗಳೀಗೆ ಅಂಚೆ ಮುಖೇನ ರವಾನಿಸಲಾಗಿದೆ. ಆಹ್ವಾನ ಪುಸ್ತಕ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ, ದಯಮಾಡಿ ಆಗಮಿಸುವುದು.

ಸ್ಥಳ: ಪ್ರಸನ್ನ ವಿಶ್ವೇಶ್ವರ ದೇವಸ್ಥಾನ ಮಿನಿ ಹಾಲ್, ಗೀತಾ ರಸ್ತೆ, ಮೈಸೂರು-5

NEWLY LAUNCHED PROJECT IN YELWALA
"PARISARA SIRI" - MYSORE
RESIDENTIAL PLOTS
@ JUST Rs. 675/- Sqft.,
2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228

ಶ್ರೀ ಶಾಲಿವಾಹನ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ.,

2561/ಡಿ-12, 2ನೇ ಕ್ರಾಸ್, ಆದಿಪಂಪ ರಸ್ತೆ, ವಿ.ವಿ. ಮೊಹಲ್ಲಾ, ಮೈಸೂರು - 570002, ಫೋನ್ : 2412988
ಎಂ.ಆರ್ 41/ ಎಂಕೆಟಿ 1 / ನೋಂದಣಿ / 34183 / 34183/03-04 ದಿನಾಂಕ 10/03-2004

21ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 21-09-2024 ರಂದು ಬೆಳಗ್ಗೆ 10.00 ಗಂಟೆಗೆ ಶ್ರೀ ಸಿದ್ದಪ್ಪಾಜಿ ಸಮುದಾಯ ಭವನ, ಹೆಬ್ಬಾಳ್ ಮೈಸೂರು ಇಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷರಾದ ಶ್ರೀ ಎನ್.ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿದೆ. ಸಂಘದ ಎಲ್ಲಾ ಸದಸ್ಯರಿಗೂ ಅಂಚೆಯ ಮೂಲಕ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ ಕಳುಹಿಸಲಾಗಿದೆ. ತಮಗೆ ಪತ್ರವು ತಲುಪದೆ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ತಪ್ಪದೇ ಸಕಾಲಕ್ಕೆ ಹಾಜರಾಗಿ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರುತ್ತೇವೆ.

ಆಡಳಿತ ಮಂಡಳಿಯ ಪರವಾಗಿ,
ಸಹಿ/- ಜಿ.ನಿರ್ಮಲ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ. ದೂರವಾಣಿ: 08172-268876, 266719

Website:Hassan.uda.gov.in Email: hudahassas125@gmail.com
ನಂ:ಹಾ.ನ.ಪ್ರಾ/ಸ.ಕಾ.ಅ/ಟೆಂಡರ್-04/23-24 ದಿನಾಂಕ: 19.09.2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ದರಗಳ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ (Visit:https://www.kppp.gov.in/) ಪೋರ್‌ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ವೆಬ್ ಸೈಟ್ www.hassan.uda.gov.in ನಲ್ಲಿಯು ವೀಕ್ಷಿಸಬಹುದು. 1)ಟೆಂಡರ್ ಸಲ್ಲಿಸಲು ಕೊನೆ ದಿನಾಂಕ:20-09-2024 to 05-10-2024 up to 17.30 hrs 2)ಟೆಂಡರ್‌ಗಳನ್ನು ತೆರೆಯುವ ದಿನಾಂಕ:07-10-2024 at 11.00 hrs 3)ಕಾಮಗಾರಿಗಳ ಕಾಲಾವಧಿ: 3 ತಿಂಗಳುಗಳು ಕ್ರ.ಸಂ.1)ಕಾಮಗಾರಿಯ ಹೆಸರು: ವಿಜಯ ನಗರ ಬಡಾವಣೆಯ ರಿಂಗ್ ರಸ್ತೆಯ ಪಕ್ಕ ನಿರ್ಮಿಸಿರುವ ವೆಟ್‌ವೆಲ್ ಸುತ್ತಾ ಕಾಂಪೌಂಡ್ ಮತ್ತು ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. (HSNUDA/2023-24/ OW/ WORK_INDENT4) ಟೆಂಡರ್‌ಗಿಟ್ಟ ಮೊತ್ತ (ರೂ ಲಕ್ಷಗಳಲ್ಲಿ): 26.12

ಸಹಿ/-(ಶ್ರೀ ಕೆ.ಎಂ. ರಮೇಶ) ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಹಾಸನ,
ವಾಸಾಸಂಇ/ಹಿಸನಿ/ಹಾಸನ/470/ಕೆಎಸ್‌ಎಂಸಿಎ/2024-25

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ, ಮೈಸೂರು

ಸಹಕಾರ ಸಂಕೀರ್ಣ, "ಸಹಕಾರ ಭವನ" ಚಾಮರಾಜ ಜೋಡಿ ರಸ್ತೆ, ಮೈಸೂರು-570004
ಮೊ-9008033838 | E-mail:info@mahilabank. in | Website:www.mahilabank.in

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2023-2024ನೇ ಸಾಲಿನ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ: 22-09- 2024ನೇ ಭಾನುವಾರ ಬೆಳಗ್ಗೆ 10.30ಗಂಟೆಗೆ ಬ್ಯಾಂಕಿನ ಶಾಖಾ ಕಛೇರಿಯಾದ ನಂ-09 ಕೆ ಬ್ಲಾಕ್ ಅಶೋಕಪುರಂ ಪೊಲೀಸ್ ಠಾಣೆ ಹಿಂಭಾಗ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ ಮೈಸೂರು-570023 ರಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಮಂಜುಳ ಮಾನಸ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿದ್ದು, ಬ್ಯಾಂಕಿನ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ಒಳಗೊಂಡ ವರದಿ ಪುಸ್ತಕವನ್ನು ಅಂಚೆ ಮುಖಾಂತರ ಕಳುಹಿಸಲಾಗಿದೆ. ವರದಿ ಪುಸ್ತಕ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಭಾವಿಸಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಕೋರಿದೆ.

ಸಹಿ/- ಆಡಳಿತ ಮಂಡಳಿ ಆದೇಶದ ಮೇರೆಗೆ
ಎನ್.ಸುಮಾ.ಬಿ.ಕಾಂ, ವ್ಯವಸ್ಥಾಪಕರು

ವಿಶೇಷ ಮನವಿ:
1) ಮಾನ್ಯ ಸದಸ್ಯರುಗಳಿಗೆ ದಿನಾಂಕ-22-09-2024ರಂದು ಮಾತ್ರ ಬೆಳಗ್ಗೆ 10.30 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಸಿಹಿ ತಿಂಡಿ ನೀಡುವ ವ್ಯವಸ್ಥೆ ಮಾಡಲಾಗಿದೆ. ನಂತರ ಬ್ಯಾಂಕಿನಲ್ಲಿ ಸಿಹಿ ತಿಂಡಿ ವಿತರಿಸುವ ವ್ಯವಸ್ಥೆ ಇರುವುದಿಲ್ಲ. ಸದಸ್ಯರು ಸಹಕರಿಸಬೇಕಾಗಿ ವಿನಂತಿ.
2) ದಿನಾಂಕ-22-09-2024ರಂದು ಬ್ಯಾಂಕಿನ ಮಹಾಸಭೆ ನಡೆಯುವುದರಿಂದ ದಿನಾಂಕ-23-09- 2024ರ ಸೋಮವಾರ ಬ್ಯಾಂಕಿಗೆ ರಜೆ ಘೋಷಿಸಲಾಗಿದೆ.

ಮಾನ್ಯ ಸದಸ್ಯರು ಮತ್ತು ಗ್ರಾಹಕರುಗಳಿಗೆ ಸಾಲ ಸೌಲಭ್ಯ:
1) ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ) ವಾಸಿಸುವ ಸ್ಥಿರಾಸ್ತಿ ಹೊಂದಿರುವ ನಾಗರೀಕರಿಗೆ ಬ್ಯಾಂಕಿನ ಸದಸ್ಯರಲ್ಲದವರಿಗೂ (ಮಹಿಳೆ ಮತ್ತು ಪುರುಷ) ಸಹಸದಸ್ಯರನ್ನಾಗಿ ಮಾಡಿಕೊಂಡು ಗರಿಷ್ಠ 60 ಲಕ್ಷ ರೂ.ಗಳವರೆಗೆ ಸ್ಥಿರಾಧಾರ ಸಾಲವನ್ನು ನೀಡಲಾಗುತ್ತಿದೆ..
2) ಸದಸ್ಯರು ಮತ್ತು ಸದಸ್ಯರಲ್ಲದವರಿಗೂ 1 ಗ್ರಾಂ ಶುದ್ಧ ಚಿನ್ನಕ್ಕೆ 5000/- ರೂ.ಗಳ ನಗಾಧಾರ ಸಾಲವನ್ನು ಅತೀ ಕಡಿಮೆ ಬಡ್ಡಿದರದಲ್ಲಿ ಗರಿಷ್ಠ ಮಿತಿ ರೂ.25 ಲಕ್ಷದವರೆಗೆ ಸಾಲ ನೀಡಲಾಗುವುದು. ಸಾಲಕ್ಕೆ ಅಡವು ಮಾಡುವ ಚಿನ್ನಾಭರಣಗಳಿಗೆ ವಿಮಯ ಸೌಲಭ್ಯ ಇರುತ್ತದೆ.

ಇಂದಿನಿಂದ ಮಾರಾಟ ಪ್ರಾರಂಭ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ
ಫ್ಯಾಷನ್ & ಲೈಫ್‌ಸ್ಟೈಲ್ ಸ್ಟಾಕ್ ಕ್ಲಿಯರೆನ್ಸ್ ಮಾರಾಟ

ಗೌರಿ-ಗಣೇಶ ಹಬ್ಬಕ್ಕಾಗಿ ತಯಾರಿಸಿದ ಉಡುಪುಗಳು ಬಾರಿ ಪ್ರಮಾಣದಲ್ಲಿ ಸ್ಟಾಕ್ ಉಳಿದುಕೊಂಡಿರುವುದರಿಂದ
ಈ ಸ್ಟಾಕ್‌ನ್ನು ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಕ್ಲಿಯರೆನ್ಸ್ ಮಾರಾಟ ಮಾಡಲು ತೀರ್ಮಾನಿಸಿರುತ್ತೇವೆ.
Upto 90% OFF
ಕೇವಲ 5 ದಿನಗಳು ಮಾತ್ರ ಮಾರಾಟ
1 ಲಕ್ಷದಷ್ಟು ಬ್ರಾಂಡೆಡ್ ಸಿದ್ಧ ಉಡುಪುಗಳು, ಪಾದರಕ್ಷೆಗಳು, ಸೀರೆಗಳು, ಅಲಂಕಾರಿಕಾ ವಸ್ತುಗಳು

ಪುರುಷರ ಬಾಕ್ಸರ್ ಶಾರ್ಟ್ಸ್ ರೂ. 249/-	ಪುರುಷರ ಟಿ-ಶರ್ಟ್‌ಗಳು ರೂ. 199/-	ಮಹಿಳೆಯರ ವೆಸ್ಟರ್ನ್ ಟಾಪ್ಸ್ ರೂ. 99/-	ಕಿಡ್ಸ್ ಬಾಯ್ಸ್ ಮತ್ತು ಗರ್ಲ್ಸ್ ರೂ. 99/-
ಮಹಿಳೆಯರ ಟ್ರಾಕ್‌ಪ್ಯಾಂಟ್ ಪಲ್ಲಾಜೋ ಮತ್ತು ಬಾಟಮ್ಸ್ ರೂ. 249/-	ಮಹಿಳೆಯರ ಕುರ್ತಿ, ಜೀನ್ಸ್, ಸೀರೆಗಳು ರೂ. 299/-	ಪುರುಷರ ಶರ್ಟ್ ರೂ. 399/-	ಜೀನ್ಸ್ ಪ್ಯಾಂಟ್ ರೂ. 599/-

ಮಹಿಳೆಯರ ಜಾಕೆಟ್‌ಗಳು, ವುಡ್ಡೀಸ್, ಜಿಪ್ಪರ್, ಸ್ವೆಟ್ ಶರ್ಟ್‌ಗಳು, ಸ್ವೆಟರ್‌ಗಳು ಯಾವುದನ್ನೇ ಕೊಂಡರೂ ರೂ. 499/- ಮಾತ್ರ
ಪುರುಷರ ಜೀನ್ಸ್, ಪ್ಯೂಮಾ ಟ್ರ್ಯಾಕ್ ಪ್ಯಾಂಟ್, ಪುರುಷರ ಜಾಕೆಟ್‌ಗಳು, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್‌ಗಳು ಎಂಆರ್‌ಪಿ ರೂ. 1999ರಿಂದ 4999 ಯಾವುದನ್ನೇ ಖರೀದಿಸಿದರೂ ರೂ. 599/- ಮಾತ್ರ

ಪುರುಷರ ಶೂಗಳು : ರೂ. 600/- ರಿಂದ 2000/-

PUMA NIKE WOODLAND adidas SKECHERS LOUIS PHILIPPE ANTA U.S. POLO ASSN. asics CATIA new balance campus cultsport RED CHIEF

ಮಹಿಳೆಯರ ಪ್ಯಾಂಟಿ ರೂ. 60 ಮಾತ್ರ | Bra Just Rs. 100/-
ರೂ. 750/- ಬೆಲೆ ಬಾಳುವ ಸೀರೆಗಳು ಇಂದು ಕೇವಲ ರೂ. 150/- ಮಾತ್ರ
ಮಾರಾಟ 5 ದಿನಗಳು ಮಾತ್ರ : ಸೆಪ್ಟೆಂಬರ್ 21, 22, 23, 24 & 25 - 2024
ಸ್ಥಳ : ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ
ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು

ಒಂದನೇ ವರ್ಷದ ಪುಣ್ಯಸ್ಮರಣೆ



ಜವರ (ಏಳಿಯಪ್ಪ)
ದುಃಖತಪ್ತರು: ಮಗ ಶಿವಕುಮಾರ್, ಸೊಸೆ: ಸುನಿತ, ಮೊಮ್ಮಕ್ಕಳು: ಯಶ್ವಿನಿ, ದಯನ್ ಕುಮಾರ್

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು.

ಮುಡಾ ಕಛೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು. ದೂರವಾಣಿ ಸಂಖ್ಯೆ -0821-2424246

2023-2024 ನೇ ಸಾಲಿನ ಸಂಘದ ಇಪ್ಪತ್ತೆರಡನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ ಸೂಚನಾ ಪತ್ರ (ನೋಟೀಸ್)

ಸಂಘದ 2023-2024 ನೇ ಸಾಲಿನ ಇಪ್ಪತ್ತೆರಡನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ. ಮಹಾಲಿಂಗಂ ರವರ ಅಧ್ಯಕ್ಷತೆಯಲ್ಲಿ ದಿನಾಂಕ 22.09.2024 ರ ಭಾನುವಾರ ಬೆಳಗ್ಗೆ 9.30 ಗಂಟೆಗೆ ಸೊಸೈಟಿಯ ಕೇಂದ್ರ ಕಛೇರಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು. ಇಲ್ಲಿ ನಡೆಯಲಿದೆ. ಮಾನ್ಯ ಸಂಘದ ಗುತ್ತಿಗೆದಾರ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಸಿಕೊಳ್ಳಲಾಗಿದೆ. ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ತಿಳಿದು ದಯಮಾಡಿ ಭಾಗವಹಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ವಿಶೇಷ ಸೂಚನೆ :
1. ಮಾನ್ಯ ಸದಸ್ಯರುಗಳು K.Y.C. ಅಂದರೆ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಬದಲಾವಣೆಯಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳನ್ನು ನೀಡಿ ನವೀಕರಿಸಿಕೊಳ್ಳುವುದು.
2. ದಯವಿಟ್ಟು ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ನಿಮ್ಮ ಸಂಗಡ ತನ್ನಿ.
3. ದಿನಾಂಕ 22.09.2024 ರಂದು ಸಂಘದ ವಾರ್ಷಿಕ ಮಹಾಸಭೆ ಪ್ರಯುಕ್ತ ದಿನಾಂಕ 23.09.2024 ರ ಸೋಮವಾರದಂದು ಸಂಘಕ್ಕೆ ರಜೆ ಘೋಷಿಸಲಾಗಿದೆ. ಮಾನ್ಯ ಸದಸ್ಯರುಗಳು ಸಹಕರಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸ್ಥಳ : ಮೈಸೂರು, ದಿನಾಂಕ : 13.09.2024 ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ